ಸ್ಪಷ್ಟವಾಗಿ ಗೊತ್ತಿದೆ. ಕರ್ನಾಟಕ ರಾಜ್ಯದ ರೈತರು ಇದನ್ನು ಅರ್ಥ ಮಾಡಿಕೊಂಡಿದ್ದಾರೆ ಎಂಬ ಭಾರವಸೆಯನ್ನು ಸ್ಪಷ್ಟವಾಗಿ ಸರ್ಕಾರದಲ್ಲಿ ನಾನು ಇಟ್ಟುಕೊಂಡಿದ್ದೇನೆ.

ಅಧ್ಯಕ್ಷರು : ಶ್ರೀ ಏಕಾಂತಯ್ಯ...

ಶ್ರೀ ವಾಟಾಳ್ ನಾಗರಾಜ್ : ಬಡ್ಡಿ ಬಗ್ಗೆ ಸ್ಪಷ್ಟವಾಗಿ ಹೇಳಬೇಕು.

(ಗೊಂದಲ)

MR. SPEAKER : Nothing shall go on record. Sri Ekanthaiah...

## ನಿಯಮ 159ರ ಮೇರೆಗೆ ಪ್ರಸ್ತಾವ

ಶ್ರೀ ಎಚ್. ಏಕಾಂತಯ್ಯ : (ಚಿತ್ರದುರ್ಗ) ಸನ್ಮಾನ್ಯ ಸಭಾಧ್ಯಕ್ಷರೆ, ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 159ರ ಪ್ರಕಾರ ಈ ಕೆಳಗೆ ನಮೂದಿಸಿರುವ ಪ್ರಸ್ತಾವನೆಯನ್ನು ಪ್ರಸ್ತಾಪಿಸಲು ತಮ್ಮ ಅನುಮತಿಯನ್ನು ನೀಡಬೇಕೆಂದು ನಾನು ವಿನಂತಿಸುತ್ತೇನೆ. ನನ್ನ ಪ್ರಸ್ತಾವನೆ ಈ ರೀತಿ ಇದೆ :

" ದೆಹಲಿ ವಿಶೇಷ ಪೋಲೀಸ್ ಸಿಬ್ಬಂದಿ ಕಾಯಿದೆಯ 6ನೇ ವಿಧಿಯ ಅನ್ವಯ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಭ್ರಷ್ಟಾಚಾರ ನಿರೋಧ ಕಾಯಿಗೆ ವ್ಯಾಪ್ತಿಯಲ್ಲಿ ಬರುವ ಅಪರಾಧಗಳನ್ನು ತನಿಖೆ ಮಾಡಲು ಈ ಹಿಂದೆ ರಾಜ್ಯ ಸರ್ಕಾರವು ನೀಡಿದ್ದ ಸಮ್ಮತಿಯನ್ನು ತಾರೀಖು 27-7-1991 ರಂದು ಹಿಂತೆಗೆದುಕೊಂಡಿರುವುದನ್ನು ಈ ಸದನವು ಅಸಮ್ಮತಿಸುತ್ತದೆ. ಮತ್ತು ಸದರಿ ಅಪರಾಧಗಳಿಗೆ ಸಂಬಂಧಪಟ್ಟಂತೆ ತನಿಖೆ ಮಾಡಲು ಅವಶ್ಯವಾದ ಸಮ್ಮತಿ ನೀಡುವಂತೆ ರಾಜ್ಯ ಸರ್ಕಾರವನ್ನು ಈ ಸದನವು ಒತ್ತಾಯಿಸುತ್ತದೆ...

ಸನ್ಮಾನ್ಯ ಅಧ್ಯಕ್ಷರೆ, ನಾನು ಈ ಪ್ರಸ್ತಾವನೆಯನ್ನು ಮಂಡಿಸುವುದಕ್ಕೆ, ತಾವು ಅನುಮತಿಯನ್ನು ಕೊಟ್ಟಿದ್ದಕೋಸ್ಕರ ನಾನು ತಮ್ಮನ್ನು ಅಭಿನಂದಿಸುತ್ತೇನೆ. ಮೊಟ್ಟ ಮೊದಲನೆಯದಾಗಿ ತಾರೀಖು 27-7-91ರಂದು ರಾಜ್ಯ ಸರ್ಕಾರ ದೆಹಲಿ ಸ್ಪೆಷಲ್ ಪೋಲೀಸ್ ಎಸ್ಟಾಬ್ಲಿಷ್‌ಮೆಂಟ್ ಕಾನೂನಿನ ಪ್ರಕಾರ ಸಮ್ಮಿತಿಯನ್ನು ಹಿಂತೆಗೆದುಕೊಂಡಿರುವ ಸರ್ಕಾರಿ ಆದೇಶವನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ....

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಸರ್ಕಾರ ಕೂಡ ಒಪ್ಪಿದೆ.

ಅಧ್ಯಕ್ಷರು : ಈಗ ಮುಂದಿನ ವಿಷಯಕ್ಕೆ ನಾನು ಹೋಗಿದ್ದೇನೆ. ಸಾಕಷ್ಟು ಕಾಲವನ್ನು ತಮಗೆ ಕೊಟ್ಟಿದ್ದೇನೆ. ದಯವಿಟ್ಟು ತಾವು ಸಹಕರಿಸಿ.

ಶ್ರೀ ವಾಟಾಳ್ ನಾಗರಾಜ್ : ಬಡ್ಡಿ ಸುಸ್ತಿ ಬಡ್ಡಿ ಬಗ್ಗೆ ಸರ್ಕಾರದ ನೀತಿಯನ್ನು ನಾನು ವಿರೋಧಿಸುತ್ತೇನೆ. ನಾನೂ ಸಹ ಸಭೆಯಿಂದ ಹೊರಗೆ ಹೋಗುತ್ತೇವೆ.

ಅಧ್ಯಕ್ಷರು : ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದ್ದಾರೆ.

(ಶ್ರೀ ವಾಟಾಳ್ ನಾಗರಾಜ್ ಅವರು ಸಭಾತ್ಯಾಗ ಮಾಡಿದರು)

ಶ್ರೀ ಸಿ. ಬೈರೇಗೌಡ : ಅದರ ಬಗ್ಗೆ ಚರ್ಚೆಯಾಗಿದೆ ಅಧ್ಯಕ್ಷರೆ ಸರ್ಕಾರ ಅದಕ್ಕೆ ವಿರೋಧ ಏನು ಇಲ್ಲ. ಆದರೆ ಇವತ್ತಿನ ದಿವಸ ತಕ್ಷಣ ಜಾರಿಗೆ ತರುತ್ತೇವೆಂದು ಒಂದು ಮಾತನ್ನು ಹೇಳಬೇಕಾಗಿದೆ. ಸರ್ಕಾರ ಒಪ್ಪಿರತಕ್ಕ ಈ ನೀತಿಯನ್ನು ಜಾರಿಗೆ ತರುತ್ತೇವೆಂದು ಹೇಳಿದರೆ ಆಯಿತು. ನಾನು ವರ್ಕಬಲ್ ಪ್ರಪೋಸಿಷನ್ ಹೇಳುತ್ತಿದ್ದೇನೆ. ಗ್ಲಿಸರಿನ್ ಕಣ್ಣೀರನ್ನು ರೈತರ ವಿಚಾರದಲ್ಲಿ ಸುರಿಸುಲು

ನಾವು ತಯಾರಿಲ್ಲ. ವಾಸ್ತವಾಂಶವನ್ನು ಗಮನಿಸಿ ಈ ಯೋಜನೆ ಜಾರಿಗೆ ತರುವುದಕ್ಕೆ ಸಾಧ್ಯವಿದೆ. ಈ ಯೋಜನೆ ಜಾರಿಗೆ ತಂದರೆ ಸರ್ಕಾರಕ್ಕೆ ಹೆಚ್ಚಿನ ಹೊರೆಯಾಗುವುದಿಲ್ಲ. ಆದುದರಿಂದ ದಯಮಾಡಿ ಅದನ್ನು ಜಾರಿ ಮಾಡಬೇಕೆಂದು ಹೇಳುತ್ತೇನೆ.

MR. SPEAKER : I have passed on to the next subject.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ ನಾನು ಸಹ ಈ ಬಗ್ಗೆ ಸರ್ಕಾರದ ನೀತಿಯನ್ನು ವಿರೋಧ ಮಾಡಿ ವಾಕೌಟ್ ಮಾಡುತ್ತೇನೆ.

(ಸದಸ್ಯರು ಸಭೆಯಿಂದ ನಿರ್ಗಮಿಸಿದರು)

ಶ್ರೀ ಹೆಚ್. ಏಕಾಂತಯ್ಯ : ತಾವು ಏನು ಅನುಮತಿಯನ್ನು ಕೊಟ್ಟಿದ್ದೀರೋ ಅದರ ಬಗ್ಗೆ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಬಯಸುತ್ತೇನೆ. ಇದಕ್ಕೆ ನಾನು ಈ ಸದನದ ಎಲ್ಲಾ ಸದಸ್ಯರ ಬೆಂಬಲವನ್ನು ಬಯಸುತ್ತೇನೆ. ಮೊದಲನೆಯದಾಗಿ ಹೇಳುವುದು ಏನೆಂದರೆ, 1991ನೇ ಜುಲೈ 27ರಂದು ಸರ್ಕಾರ ಒಂದು ಆದೇಶವನ್ನು ಹೊರಡಿಸಿದೆ. ಅದನ್ನು ತಮ್ಮ ಗಮನಕ್ಕೆ ತರುತ್ತೇನೆ. ಆ ಆದೇಶದ ಸಂಖ್ಯೆ ಈ ರೀತಿ ಇದೆ. ಹೆಚ್‌ಡಿ 320 ಸಿಎಲ್‌ಕ್ಯು 88 ದಿನಾಂಕ 27ನೇ ಜುಲೈ 1991.

" In exercise of the powers conferred by the Sec.6 of the Delhi Special Police Establihment Act, read with Sec.21 of General Clause Act and all other Vest, in it, the Government of Karnataka hereby resists and withdraws the consent under Sec.6 of the Delhi Special Police Establishment Act 46 conveyed with the Govt. Order No.HD 320 CLQ 86 at 27.7.89. This order also supercedes.."

This is important.

"This order also supercedes all subsisting previous orders of consent communicated by the Government of Karnataka."

ಈ ಅಸಮ್ಮತಿಯನ್ನು ಹಿಂತೆಗೆದುಕೊಂಡಿರುವಂತಹದ್ದು ಯಾವುದು ಎಂದರೆ ಮೊಟ್ಟಮೊದಲನೆಯದಾಗಿ 23.5.89ರಲ್ಲಿ ಏನು ಸರ್ಕಾರ ಸಮ್ಮತಿ ಕೊಟ್ಟಿದೆಯೋ ಅದನ್ನು ವಾಪಸ್ಸು ತೆಗೆದುಕೊಂಡಿದ್ದಾರೆ. 23.5.89ರಲ್ಲಿ ಏನು ಸಮ್ಮತಿ ಕೊಟ್ಟಿದೆ ಎಂದು ನಾನು ತಮ್ಮ ಗಮನಕ್ಕೆ ತರಬಯಸುತೇನೆ. ಸರ್ಕಾರಿ ಆಜ್ಞೆ 320 ಸಿಎಲ್‌ಕ್ಯು 88 ದಿನಾಂಕ 23.5.89. ಇದರಲ್ಲಿ

" In exercise the the powers Conferred by Sec.6 of the Delhi Special Police Establishment Act, the Government of Karnataka hereby accords consent under Sub Sec.. in exercise of powers and jurisdiction by the Members of Delhi Special Police Establishment Act, within the State of Karnataka for the investigation of the following offences.

a) Offences under prevention of corruption act 1988, order No.49/88.

b) Attempts, abetment and conspiracies in relation or in connection with one or more of the offences mentioned or any other offence or offences committed in the course of such transaction.."

ಇದು ಮುಖ್ಯವಾಗಿ 23.5.89ರ ಆದೇಶ ಏನಿದೆ, ಅದರಲ್ಲಿ ಯಾವ ಒಂದು ಸಮ್ಮತಿ ಸರ್ಕಾರ ಕೊಟ್ಟಿತ್ತೋ ಆ ಸಮ್ಮತಿಯನ್ನು 27.7.91ರ ಆದೇಶದ ಪ್ರಕಾರ ವಾಪಸ್ಸು ತೆಗೆದುಕೊಂಡಿದೆ. ಅಧ್ಯಕ್ಷರೇ ಕೇವಲ ಅಷ್ಟಕ್ಕೇ ಇದು ನಿಲ್ಲಲಿಲ್ಲ. ಸರ್ಕಾರ ಏನು 27.7.91ರಲ್ಲಿ ಸಮ್ಮತಿಯನ್ನು ವಾಪಸ್ಸು ತೆಗೆದುಕೊಂಡಿತು, ಕೇವಲ ಪ್ರಿವೆನ್‌ಷನ್ ಆಫ್ ಕರಪ್‌ಷನ್ ಆಕ್ಟ್ ಬಗ್ಗೆ ಅಪರಾಧಗಳ ಬಗ್ಗೆ ತನಿಖೆ ಮಾಡುವುದಕ್ಕೆ ಕೊಟ್ಟ ಸಮ್ಮತಿ ಏನಿದೆ ಅದರ ಜೊತೆಯಲ್ಲಿಯೇ

" This order also supercedes all subsisting previous orders of consent communicated by the Government of Karnataka."

ಈ ವಿಚಾರವನ್ನು ಮಾನ್ಯ ಹಿರಿಯ ಸದಸ್ಯರಾದ ರಂಗನಾಥ್ ಅವರು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಪ್ರಸ್ತಾಪ ಮಾಡುವ ಸಂದರ್ಭದಲ್ಲಿ ಇದನ್ನು ನೇರವಾಗಿ ಪ್ರಸ್ತಾಪ ಮಾಡದೇ ಇದ್ದರೂ ಕೂಡ ಸರ್ಕಾರ ಒಂದು ಹೇಳಿಕೆ ಕೊಟ್ಟಿತು. ಸನ್ಮಾನ್ಯ ಅಧ್ಯಕ್ಷರೇ, ಅದಕ್ಕಿಂತಲೂ ಮೊದಲು ಈ ಸರ್ಕಾರಕ್ಕೆ ಏನು ಅಧಿಕಾರ ಇದೆ ಎಂದು ನಿಮ್ಮ ಗಮನಕ್ಕೆ ತರಲು ಇಷ್ಟಪಡುತ್ತೇನೆ. ಮೊಟ್ಟಮೊದಲನೆಯದಾಗಿ ಡೆಲ್ಲಿ ಸ್ಪೆಷಲ್ ಪೋಲೀಸ್ ಎಸ್ಟಾಬ್ಲಿಷ್‌ಮೆಂಟ್ ಆಕ್ಟ್ ಏನಿದೆ, ಅದರ ವಿಧಿ 2ರ ಪ್ರಕಾರ it refers to the constitution and powers of the Special Police Establishment.

"Nothing standing anything in the Indian Police Act of 1981, the Central Government may constitute a special police force to be called the Delhi Special Police Establishment for the investigation in any Union Territory of offences notified under Sec.3.

What is Section 3 ? The Central Government may be notification in the official gazette specify the offences or classes of offences which are to be investigated by the Delhi Special Police Establishment Act.

ಅಂದರೆ ದೆಹಲಿ ಸ್ಪೆಷಲ್ ಪೋಲೀಸ್ ಎಸ್ಟಾಬ್ಲಿಶ್‌ಮೆಂಟ್ ಎಂದು ಏನು ಕರೆಯುತ್ತೇವೆ, ಅದರ ಪ್ರಕಾರ ಯಾವ್ಯಾವ ಅಪರಾಧಗಳ ಬಗ್ಗೆ ತನಿಖೆ ಮಾಡಬೇಕು ಎನ್ನುವುದಕ್ಕೆ ಕೇಂದ್ರ ಸರ್ಕಾರ ನೋಟೀಫಿಕೇಶನ್ ಮುಖಾಂತರ ಹೇಳತಕ್ಕದ್ದು ಅವಶ್ಯಕತೆಯಿದೆ. ತದನಂತರ ನಾಲ್ಕನೆಯ ವಿಧಿ ಬಗ್ಗೆ ತಮ್ಮ ಗಮನ ಸೆಳೆಯುವುದಕ್ಕೆ ಬಯಸುತ್ತೇನೆ. ಅದರ ಪ್ರಕಾರ

"Superintendence of the Delhi Special Police Establishment Act shall vest in the Central Government."

Accoring to Sec. 5,

"The Central Government may by order extend to any area including railway areas in a State, not being an Union Territory, the powers and jurisdiction of the Members of the Delhi Special Establishment for investigation of any offence or classes of offences specified in a notification under Sec.3."

3ನೇ ವಿಧಿಯ ಪ್ರಕಾರ ಅವರು ಯಾವುದನ್ನು ನಿರ್ದಿಷ್ಟಪಡಿಸಿದ್ದಾರೆ ಆ ಅಪರಾಧಗಳ ಬಗ್ಗೆ ತನಿಖೆ ಮಾಡಲಿಕ್ಕೆ ಕೇಂದ್ರಸರ್ಕಾರ ಆ ಯಾನಿಯನ್ ಟೆರಿಟರೀಸ್‌ಗಳನ್ನು ಹೊರತುಪಡಿಸಿ ಬೇರೆ ರಾಜ್ಯಗಳು ಸಹ ತನಿಖೆ ಮಾಡುವ ಅಧಿಕಾರವನ್ನು ಕೇಳಬಹುದು. ಯಾವಾಗ ಕೇಳಬಹುದು. ಅಂದರೆ This is subject to the consent given under sec.6.

"Nothing contained in sub sec. 5 shall be deemed to enable any Member of the Delhi Special Police Establishment to exercise powers and jurisdication in any area in a State without the consent of the Government of that State."

ತಮ್ಮ ಗಮನವನ್ನು ಈ ಬಗ್ಗೆ ಏತಕ್ಕೋಸ್ಕರ ಸೆಳೆಯುತ್ತಿದ್ದೇನೆಂದರೆ, ನಮ್ಮ ಸರ್ಕಾರದವರು ಏನು ಹೇಳುತ್ತಿದ್ದಾರೆ ಅವರು ಹೇಳುವುದು ಕಾನೂನಿಗೆ ವಿರೋಧವಾಗಿದೆ ಎನ್ನುವುದನ್ನು ನಾನು ಸಾಬೀತು ಮಾಡಲಿಕ್ಕೆ ಮತ್ತು ತಮ್ಮ ಮನಸ್ಸು ಒಲಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈಗ ದೆಹಲಿ ಸ್ಪೆಷಲ್ ಎಸ್ಟಾಬ್ಲಿಶ್‌ಮೆಂಟ್ ಆಕ್ಟ್ ಏನಿದೆ, ಇದರ ಪ್ರಕಾರ ರಾಜ್ಯ ಸರ್ಕಾರಗಳಿಗೆ ಏನು ಅಧಿಕಾರ ಏನಿದೆ ಅಂದರೆ, ರಾಜ್ಯ ಸರ್ಕಾರವು ಮೂರನೆಯ ವಿಧಿಯಲ್ಲಿ ನೋಟಿಫೈ ಮಾಡುವಂತಹ ರೀತಿಯಲ್ಲಿ ಅಪರಾಧಗಳನ್ನು ತನಿಖೆ ಮಾಡುವುದಕ್ಕೆ ಸಮ್ಮತಿ ಕೊಟ್ಟರೆ, ಆ ಸಮ್ಮತಿಯ ಆಧಾರದ ಮೇಲೆ ಕೇಂದ್ರ ಸರ್ಕಾರದವರು ಅಥವಾ ದೆಹಲಿ ಸ್ಪೆಷಲ್ ಎಸ್ಟಾಬ್ಲಿಶ್‌ಮೆಂಟ್ ಆಕ್ಟ್ ಮೆಂಬರ್ಸ್ ಏನಿದ್ದಾರೆ. ಅವರು ತನಿಖೆ ಮಾಡುವಂತಹ ಅಧಿಕಾರ 5ನೇ ವಿಧಿ ಮೇಲೆ ಇದೆ. ಅದರ ಪ್ರಕಾರ ಅವರು ತನಿಖೆ ಮಾಡಬಹುದು. ಇದು ಆದಮೇಲೆ ನಮ್ಮ ಸರ್ಕಾರದವರು ಹೇಳುತ್ತಿದ್ದಾರೆ. ಈ ಹೇಳಿಕೆಯಲ್ಲಿ ಬಹಳ ಪ್ರಮುಖವಾದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಈ ಹೇಳಿಕೆಯ ಬಗ್ಗೆ ಕೊನೆಗೆ ವ್ಯಾಖ್ಯಾನ ಮಾಡುತ್ತೇನೆ. ಮಾನ್ಯ ಗೃಹಮಂತ್ರಿಗಳು ಹಿರಿಯ ಸದಸ್ಯರಾದ ಕೆ.ಹೆಚ್. ರಂಗನಾಥ್‌ರವರ ಸಾರ್ವಜನಿಕ ಮಹತ್ವವಾದ ಪ್ರಶ್ನೆಗೆ ಉತ್ತರಿಸುತ್ತಾ ಕೆಲವು ವಿಚಾರಗಳನ್ನು ಹೇಳಿದರು. ಏನೆಂದರೆ 1991ರ ಜುಲೈನಲ್ಲಿ ಒಂದು ಲೋಪವನ್ನು ನಾವು ಕಂಡು ಹಿಡಿದೆವು. ಆ ಲೋಪ ಏನೆಂದರೆ ಟಾಡಾ ಮತ್ತು ಅನ್‌ಲಾಫುಲ್ ಆಕ್ಟಿವಿಟೀಸ್ ಪ್ರಿವೆನ್‌ಷನ್ ಆಕ್ಟ್ ಬಗ್ಗೆ ಸರ್ಕಾರ ಸಮ್ಮತಿ ಕೊಟ್ಟಿರಲಿಲ್ಲ. ಆ ಸಮ್ಮತಿಯನ್ನು ಕೊಡುವಂತಹ ಉದ್ದೇಶದಿಂದ ನಾವು 27-7-91ರಿಂದ ಅವರಿಗೆ ಕೊಟ್ಟಿರತಕ್ಕ ಎಲ್ಲಾ ಅಧಿಕಾರವನ್ನು ವಾಪಸ್ಸು ತೆಗೆದುಕೊಂಡಿದ್ದೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಒಂದು ಪಕ್ಷ ಅವರ ಉದ್ದೇಶ ಟಾಡಾ ಪ್ರಿವೆನ್‌ಷನ್ ಆಫ್ ಅನ್‌ಲಾಫುಲ್ ಆಕ್ಟಿವಿಟೀಸ್ ಬಗ್ಗೆ ಏನು ಅಪರಾಧಗಳು ಇವೆ, ಆ ಆಪಾದನೆಗಳನ್ನು ತನಿಖೆ ಮಾಡುವುದಕ್ಕೆ ಸಮ್ಮತಿ ಕೊಡುವ ಉದ್ದೇಶ ಸರ್ಕಾರಕ್ಕೆ ಇದ್ದರೆ ಅವರು ಹೇಳುವಂತಹ ರೀತಿಯಲ್ಲಿ ಕೊಟ್ಟಿದ್ದಂತಹ ಸಮ್ಮತಿಯನ್ನು ವಾಪಸ್ಸು ತೆಗೆದುಕೊಳ್ಳುವ ಅವಶ್ಯಕತೆಯಿರಲಿಲ್ಲ. ಅವರು ಹೊಸದಾಗಿ ನೋಟಿಫಿಕೇಶನ್ ಇಷ್ಯು ಮಾಡಿ ಇದಕ್ಕು ಸಹ ಸಮ್ಮತಿ

ಇದೆ ಎನ್ನುವ ಮಾತನ್ನು ಅವರು ಹೇಳಬಹಾದಾಗಿತ್ತು. ಅದನ್ನು ಮಾಡಲಿಲ್ಲ. ಆಮೇಲೆ ಅವರು ಹೇಳುತ್ತಾರೆ ಈವೊಂದು ನೋಟಿಫಿಕೇಶನ್ ಅನ್ನು 27-7-91ರಂದು ಏನು ಹೊರಡಿಸಿದರು, ಆ ತಾರೀಖನ್ನು ಹೇಳುವುದಕ್ಕೆ ಸಹ ಇವರಿಗೆ ಮನಸ್ಸು ಇಲ್ಲ. ಏಕೆಂದರೆ ಕೂಡಲೇ ಮಾಡಿಬಿಟ್ಟಿದ್ದೇವೆಂದು ಹೇಳುವುದಕ್ಕೆ ಈ ಸದನವನ್ನು ತಪ್ಪು ದಾರಿಗೆ ಎಳೆಯುವುದಕ್ಕೆ ಪ್ರಯತ್ನ ಏನು ನಡೆದಿದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ದಿನಾಂಕ 2-8-91ರಂದು ನೋಟಿಫೈ ಆಗುತ್ತದೆ. ಆ ನೋಟಿಫೈ ಡೇಟ್ ಹೇಳುತ್ತಾರೆ ಹೊರತು ಇವರು ಆದೇಶವನ್ನು ಎಂದು ಹೊರಡಿಸಿದ್ದಾರೆಂದರೆ 27-7-91ರಲ್ಲಿ ಹೊರಡಿಸಿದರು. ಆಮೇಲೆ ದಿನಾಂಕ 5-8-91ರಂದ ಪುನಃ ಒಂದು ಆದೇಶವನ್ನು ಹೊರಡಿಸಿದ್ದಾರೆ. ಅದನ್ನು ಏತಕ್ಕೆ ಹೊರಡಿಸಿದ್ದಾರೆನ್ನುವ ಮಾತನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಅದಕ್ಕೆ ಅವರದೇ ಆದ ಕಾರಣ ಇರಬಹುದು. ಆದರೆ ನಾನು ತಮ್ಮ ಮುಖಾಂತರ ಕೇಳುವುದೇನೆಂದರೆ ದಿನಾಂಕ 27-7-91ರಂದು ಏನು ಸಮ್ಮತಿಯನ್ನು ವಾಪಸ್ಸು ತೆಗೆದುಕೊಂಡಿದ್ದಾರೆ. ಅದಕ್ಕೆ ಕಾರಣವನ್ನು ಈ ಸಭೆಗೆ ಹೇಳಬೇಕು. ಅವರು ಹೇಳುವಂತಹ ಕಾರಣ ಏನಿದೆ ಅದು ನಂಬಲು ಅರ್ಹವಾದ ಕಾರಣವೇ ಅಥವಾ ಅಲ್ಲವೇ ಎಂಬುದನ್ನು ಇವತ್ತಿನ ದಿವಸ ನಾವು ಪರಿಶೀಲನೆ ಮಾಡಬೇಕಾಗಿದೆ. ಅವರು ಹೇಳುವ ಕಾರಣ ಏನೆಂದರೆ...27.7.91ರಂದು ಏನು ಲೋಪದೋಷಗಳನ್ನು ಕಂಡುಹಿಡಿದೆದ್ದವು, ಅದನ್ನು ಸರಿಪಡಿಸುವಂಥ ದೃಷ್ಟಿಯಿಂದ ನಾವು ad interim ಆಗಿ ಎಲ್ಲ ಸಮಿತಿಗಳನ್ನು ವಾಪಾಸ್ಸು ತೆಗೆದುಕೊಂಡೆವು ಮತ್ತು ಹೊಸ ಆದೇಶವನ್ನು 5.8.91ರಲ್ಲಿ ಹೋರಡಿಸಿದ್ದೇವೆ ಎಂಬ ಮಾತನ್ನು ಹೇಳುತ್ತಾರೆ. ಹಾಗಾದರೆ ನಾನು ಇವರನ್ನು ಕೇಳುತ್ತಿದ್ದೇನೆ. 27.7.91ರಂದು ಯಾವ್ಯಾವ ಅಪರಾಧಗಳನ್ನು ತನಿಖೆ ಮಾಡುವುದಕ್ಕೆ ಸರ್ಕಾರ ಈಗಾಗಲೇ ಸಮ್ಮತಿ ಕೊಟ್ಟಿದೆ ಎಂಬುದನ್ನು ನಾನು ಅವರಿಂದ ತಿಳಿಯಬಯಸುತ್ತೇನೆ. ನಾನು ಒಂದು ಪತ್ರವನ್ನು ಸಂಬಂಧಪಟ್ಟ ಸರ್ಕಾರ ಕಾರ್ಯದರ್ಶಿ ಅವರಿಗೆ ಬರೆದೆ. ಏನು ತಾವು 27.7.91ರಂದು ಒಂದು ಆದೇಶವನ್ನು ಹೊರಡಿಸಿದ್ದೀರಿ, ಆ ಆದೇಶದಲ್ಲಿ ತಾವು ಹೇಳಿರುವಂಥ ರೀತಿಯಲ್ಲಿ "This order also supercedes all subsisting previous orders of consent communicated by the Government of Karnataka." ಎಂಬ ಮಾತನ್ನು ಹೇಳಿದ್ದೀರಿ. ಹಾಗಾದರೆ ಅದರ ಪಟ್ಟಿಯನ್ನು ನನಗೆ ಕೊಡಿ ಎಂಬ ಮಾತನ್ನು ನಾನು ಕೇಳಿದ್ದೆ. ಅವರಿಂದ ಬಂದ ಉತ್ತರವನ್ನು ನಾನು ಇಲ್ಲಿ ಉಲ್ಲೇಖ ಮಾಡಲೇಬೇಕಾಗುತ್ತದೆ. ಸರ್ಕಾರದ ಉತ್ತರ ಈ ರೀತಿ ಇದೆ. ಈ ಉತ್ತರಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಆ ಉತ್ತರದ ಕಂಟೆಂಟ್ಸ್‌ನ್ನು ತಾವು ಗಮನಿಸಿದರೆ ಅರ್ಥವಾಗುತ್ತದೆ, ಈ ಸರ್ಕಾರ ಹೇಗೆ ನಡೆಯುತ್ತಿದೆ ಎಂದು.

"I .am afraid we do not have any notification issued by the Central Government on the Subject."

ಅಂದರೆ ಸೆಕ್ಷನ್ 3 ಯಾವ್ಯಾವ ನೊಟಿಫಿಕೇಷನ್ಸ್ ಆಗಿದೆ, ಯಾವ್ಯಾವ ಅಪರಾಧಗಳನ್ನು ತನಿಖೆ ಮಾಡುವಂಥ ಅಧಿಕಾರ ಕೇಂದ್ರ ಸರ್ಕಾರಕ್ಕೆ ಈ ಕಾಯದೆ ಪ್ರಕಾರ ಇದೆ ಎಂಬ ಮಾತನ್ನು ನಾನು ಕೇಳಿದ್ದೆ. ಅದಕ್ಕೆ ಅವರು ಹೇಳುತ್ತಾರೆ ನಮ್ಮ ಹತ್ತಿರ ಯಾವ ದಾಖಲೆಗಳೂ ಇಲ್ಲ ಎಂದು.

"In reply to your letter dates 18-9-91."

ನಾನು ಮೊದಲೇ ಒಂದು ಪತ್ರ ಬರೆದಿದ್ದೆ

"I had on the very same day made available copies of some three notification under sec.6 of D.S.P.E Act. Since we are not quite certain whether there were any more similar notifications, the Government decided to include the term all subsisting previous notifications. So, the Notification dated 27-7-91 refers to the supersession of notification dt 23.5.89 and other subsisting notification if any."

ಅಂದರೆ ಅರ್ಥ ಏನು ಆಯಿತು? ಈ ಸರ್ಕಾರದ ವಶದಲ್ಲಿ 27.7.91ರಲ್ಲಿ ಜಾರಿಯಲ್ಲಿದ್ದಂಥ ಅಥವಾ ಸಮ್ಮತಿಯನ್ನು ಏನು ಸರ್ಕಾರ ಕೊಟ್ಟಿತ್ತು, ಅದರ ಬಗ್ಗೆ ಯಾವುದೇ ವಿವರ ಈ ಸರ್ಕಾರದಲ್ಲಿ ಇಲ್ಲವೆಂಬ ಮಾತನ್ನು ಹೇಳಿದ್ದಾರೆ. ಹಾಗಿದ್ದ ಪಕ್ಷದಲ್ಲಿ ನಾನು ಕೇಳುತ್ತೇನೆ, ಇವರು ಯಾವ ರೀತಿ ಈ ಅಧಿಕಾರವನ್ನು ಅವರಿಗೆ ಕೊಟ್ಟಿದ್ದಾರೆ ಇವರಿಗೆ ಸೆಕ್ಷನ್ 3ರ ಪ್ರಕಾರ ಯಾವ್ಯಾವ ಅಪರಾಧಗಳನ್ನು ತನಿಖೆ ಮಾಡುವುದಕ್ಕೆ D.S.P.E Act ಪ್ರಕಾರ ಕೇಂದ್ರ ಸರ್ಕಾರ ನೋಟಿಫೈ ಮಾಡಿದೆಯೋ, ಅದರ ವಿವರಗಳು ಇಲ್ಲದಿದ್ದರೆ, ಇವರು ಹೇಗೆ ಸಮ್ಮತಿ ಕೊಡುವುದಕ್ಕೆ ಆಗುತ್ತದೆ? ಈಗ ಪ್ರಶ್ನೆ ಬಂದಿರುವುದು ಏನೆಂದರೆ, ಇವರಿಗೆ ಯಾವ್ಯಾವ ಅಪರಾಧಗಳನ್ನು ತನಿಖೆ ಮಾಡುವುದಕ್ಕೆ ಸಮ್ಮತಿ ಕೊಡಬೇಕೋ, ಅದರ ವಿವರಗಳನ್ನು ಗೊತ್ತಿಲ್ಲದೆ ಇವತ್ತಿನ ದಿವಸ ತಾವು ಸಮ್ಮತಿ ಕೊಟ್ಟಿದ್ದೀರಿ ಎಂದರೆ ಇದು ಸರ್ಕಾರ ಆಡಳಿತ ಮಾಡುವ ರೀತಿಯೇ? ಅವರು ಮೂರು ನೋಟಿಫಿಕೇಶನ್ಸ್, ನನಗೆ ಕೊಟ್ಟು ಇವು ಹಿಂದೆ ಜಾರಿಯಲ್ಲಿತ್ತು ಎಂದು ಹೇಳಿದರು. ಅದನ್ನೂ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅದು 81ನೇ ಇಸವಿಯಲ್ಲಿ ಫೆಬ್ರವರಿ 12ನೇ ತಾರೀಖಿಗೆ, ಅವತ್ತಿನ ದಿವಸ ಸುಮಾರು 28 ಕಾಯದೆಗಳ ಪ್ರಕಾರ ಸಮ್ಮತಿಯನ್ನು ಕೊಟ್ಟಿದರು. ಆಮೇಲೆ 5ನೇ ಆಗಸ್ಟ್ 91ರಂದು ಮತ್ತು 27.7.91. ಈ ಸರ್ಕಾರ ತನಗೆ ಬೇಕಾದಂಥ ವಿಚಾರಗಳನ್ನು ಮುಚ್ಚಿಟ್ಟುಕೊಳ್ಳುವಂಥ ಪ್ರಯತ್ನ ಮಾಡುತ್ತಿದೆ ಎನ್ನುವುದಕ್ಕೆ ಇದಕ್ಕಿಂತ ಬೇರೆ ಆಧಾರ ಬೇಕಾಗಿಲ್ಲ, ಮಾನ್ಯ ಗೃಹಮಂತ್ರಿಗಳು ತಮ್ಮ ಹೇಳಿಕೆಯಲ್ಲಿ ಏನು ಹೇಳುತ್ತಾರೆಂದರೆ: "We have given blanket permission to the C.B.I which authorises blanket power to investigate the offences." This is a blanket lie.

ಇದು ಅತ್ಯಂತ ಅಪ್ಪಟವಾದಂಥ ಸುಳ್ಳು. ಏಕೆಂದರೆ ಹಿಂದೆ ಏನು ಅಧಿಕಾರವನ್ನು ಕೊಟ್ಟಿದ್ದರು, ಆ ಎಲ್ಲಾ ಅಧಿಕಾರಗಳನ್ನು 91ನೇ ಇಸವಿ ಆಗಸ್ಟ್ 5ನೇ ತಾರೀಖು ಏನು ಹೊಸ ಆದೇಶವನ್ನು ಮಾಡಿದ್ದಾರೆ. ಆ ಆದೇಶವನ್ನು ಕೊಟ್ಟಿಲ್ಲ, ಉದಾಹರಣೆಗೆ ಹೇಳುವುದಾದರೆ ನಾವು ಇಲ್ಲಿಯವರೆಗೆ ಏನು ಪ್ರಸ್ತಾಪ ಮಾಡಿದ್ದೇವೆ, Prevention of Corruption Act ಪ್ರಕಾರ ಯಾವ ಒಂದು ಅಪರಾಧಗಳನ್ನು ತನಿಖೆ ಮಾಡುವುದಕ್ಕೆ ಸರ್ಕಾರ ಅಧಿಕಾರ ಕೊಟ್ಟಿತು, ಅದನ್ನು ಕೊಟ್ಟಿಲ್ಲ ಎಂಬ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಮತ್ತು 5ನೇ ತಾರೀಖು ಆಗಸ್ಟ್ 91ರ ಎಂಬ ಆದೇಶವನ್ನು ಇದರ ಬಗ್ಗೆ ಒಂದು ಚಕಾರ ಶಬ್ದ ಸಹ ಇಲ್ಲ, Is it not a lie Mr. Speaker Sri? ಇಷ್ಟೇ ಅಲ್ಲ, ಒಂದು ಹೆಜ್ಜೆ ಮುಂದೆ ಹೋಗಿದ್ದಾರೆ.

12.05 ಪಿ.ಎಂ

1981ನೇ ಇಸವಿಯಲ್ಲಿ ಏನು ಕೊಟ್ಟಿದ್ದಾರೆ, ಅದಕ್ಕೆ ಗಮನಹರಿಸಿದಾಗ, ಕೆಲವು ವಿಧೇಯಕಗಳ ಅಡಿಯಲ್ಲಿ ಬರುವಂಥ ಅಪರಾಧಗಳನ್ನು ತನಿಖೆ ಮಾಡುವಂಥ ಅಧಿಕಾರ ಸಿ.ಬಿ.ಐ.ಗೆ ಇದೆ. ಅಂತಹ ಅದಿಕಾರವನ್ನು ಉಪಯೋಗಿಸುವುದಕ್ಕೆ ಸಿ.ಬಿ.ಐ.ಗೆ ಸಮ್ಮತಿಯನ್ನು ಕೊಡಲಿಲ್ಲ. ಅದರಲ್ಲಿ ಮುಖ್ಯವಾಗಿರುವುದು, Offences punishable under I.P.C.

ಇವರು ಹೇಳಿದರು, ಇದು ಯಾವುದಕ್ಕೆ ಸಂಬಂಧಪಟ್ಟಿದೆ ಎಂದು Again it relates to corruption activities of the public servants Section 161 to 169 these are the offenceese by or relating to public servants. ಯಾವುದಕ್ಕೆ ಸಂಬಂಧ ಪಟ್ಟಿದೆ?

(ಉಪಾಧ್ಯಕ್ಷರು ಪೀಠದಲ್ಲಿ ಉಪಸ್ಥಿತರಾದರು)

"being a public servant taking gratification other than the legal renumeration in respect of an official Act 161 ರಿಂದ 169 ರವರೆಗೆ ಏನು ಐ.ಪಿ.ಸಿ. ಯಲ್ಲಿ ನಮೂದು ಮಾಡಿದ್ದಾರೆ. ಇವೂ ಸಹ ಭ್ರಷ್ಟಾಚಾರಕ್ಕೆ ಸಂಬಂಧಪಟ್ಟಂಥ ಅಪರಾಧಗಳು ಆ ಅಪರಾಧಗಳನ್ನು ಶಿಕ್ಷೆ ಮಾಡುವಂಥ ಒಂದು ವಿಧೇಯಕಕ್ಕೆ ಸಂಬಂಧಪಟ್ಟಂಥ ವಿಧಿಗಳು. ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಸರ್ಕಾರ ಉದ್ದೇಶ ಪೂರ್ವಕವಾಗಿ, 1991ನೇ ಇಸವಿ ಜುಲೈ 27ನೇ ತಾರೀಖು ಏನು ಒಂದು ಆದೇಶವನ್ನು ಹೊರಡಿಸಿದೆ, ಇದರ ಮುಖ್ಯವಾದ ಉದ್ದೇಶ, ಅವರು ಹೇಳುವಂಥ ರೀತಿಯಲ್ಲಿ, ಬ್ಲಾಂಕೆಟ್ ಪವರ್ ಏನಿದೆ ಅಥವಾ ಅಧಿಕಾರ ಲಕುನಾ ಏನಿತ್ತು, ಲೋಪದೋಷ ಏನು ಸರ್ಕಾರಿ ಆದೇಶದಲ್ಲಿತ್ತು, ಆ ಲೋಪದೋಷವನ್ನು ಸರಿಪಡಿಸುವಂಥ ಉದ್ದೇಶಕ್ಕೋಸ್ಕರ, ಅವರು ಈ ಒಂದು ಆದೇಶವನ್ನು ಹಿಂತೆಗೆದುಕೊಳ್ಳಲಿಲ್ಲ, ಅದಕ್ಕೆ ಬದಲಾಗಿ, ಈ ಹಿಂದೆ ಕೇಂದ್ರ ಸರ್ಕಾರಕ್ಕೆ ಇಂತಿಂತಹ ಅಪರಾಧಗಳ ಬಗ್ಗೆ ತನಿಖೆ ಮಾಡುವುದಕ್ಕೆ ಏನು ಸಮ್ಮತಿಯನ್ನು ಕೊಟ್ಟಿದ್ದರು. ಅದನ್ನು ವಾಪಸ್ ತೆಗೆದುಕೊಂಡಿದ್ದಾರೆ. ಏತಕ್ಕೋಸ್ಕರ? ನಾನು ಒಪ್ಪುತ್ತೇನೆ, ಅವರು ಹೇಳಬಹುದಿತ್ತು, ಇಲ್ಲ, ಇಲ್ಲ, ಅನೇಕ ಸಂದರ್ಭದಲ್ಲಿ ವಾಪಸ್ ತೆಗೆದುಕೊಂಡಿದ್ದಾರೆ, ಅದು 1979ನೇ ಇಸವಿ ಇರಬಹುದು. ಡೆಲ್ಲಿ ಸ್ಪೆಷಲ್ ಪೋಲೀಸ್ ಎಸ್ಟಾಬ್ಲಿಷಮೆಂಟ್ ಆಕ್ಟ್ ಬಂದ ಮೇಲೆ ಅನೇಕ ಸಂದರ್ಭದಲ್ಲಿ, ಅನೇಕ ರಾಜ್ಯ ಸರ್ಕಾರಗಳು, ಅದರಲ್ಲಿ ಕರ್ನಾಟಕ ರಾಜ್ಯವೂ ಸೇರಿದಂತೆ, ಸಮ್ಮತಿಯನ್ನು ಕೊಟ್ಟಿದೆ, ಆದರೆ, ಸರ್ಕಾರಗಳು ಬದಲಾವಣೆಯಾದಾಗ, ಸಮ್ಮತಿಯನ್ನು ವಾಪಸ್ ತೆಗೆದುಕೊಂಡಿದೆ. ತಮಗೆ ಈ ಅಧಿಕಾರ ಇದೆ, ಇಲ್ಲ ಎನ್ನುವ ಮಾತನ್ನು ನಾನು ಹೇಳುವುದಿಲ್ಲ. ಆದರೆ, ಯಾವ ಯಾವ ಸಂದರ್ಭದಲ್ಲಿ ನಾವು ಹೇಳಿದ್ದೇವೆ. ನಮ್ಮ ಸರ್ಕಾರ ಇದ್ದ ಸಂದರ್ಭದಲ್ಲೂ ಕೊಟ್ಟಿದ್ದ ಸಮ್ಮತಿಯನ್ನು ಹಿಂದಕ್ಕೆ ತೆಗೆದುಕೊಂಡಿರತಕ್ಕ ಪ್ರಕರಣಗಳು ಇರಬಹುದು. ಯಾವಾಗ ರಾಜ್ಯಸರ್ಕಾರಗಳಿಗೆ, ಕೇಂದ್ರಸರ್ಕಾರ, ಇದನ್ನು ರಾಜಕೀಯವಾಗಿ ದುರುಪಯೋಗ ಮಾಡಿಕೊಳ್ಳುತ್ತದೆ ಎಂಬ ಸಂಶಯ ಬರುತ್ತದೆ ಅಥವಾ ನಂಬಿಕೆ ಇರುವುದಿಲ್ಲ ಅಂತಹ ಸಂದರ್ಭದಲ್ಲಿ, ರಾಜ್ಯ ಸರ್ಕಾರಗಳು ಕೊಟ್ಟಿದ್ದ ಸಮ್ಮತಿಯನ್ನು ಹಿಂದಕ್ಕೆ ತೆಗೆದುಕೊಂಡ ಪ್ರಕರಣಗಳಿವೆ. ಮಾನ್ಯ ದೇವಾರಾಜ ಅರಸರ ಕಾಲದಲ್ಲಿ ಹಿಂತೆಗೆದುಕೊಂಡಿದ್ದಾರೆ. ಮಾನ್ಯ ರಾಮಕೃಷ್ಣಹೆಗಡೆಯವರ ಕಾಲದಲ್ಲಿ ಹಿಂತೆಗೆದುಕೊಂಡಿರಬಹುದು ಅಥವಾ ಯಾವುದೇ

ಮುಖ್ಯ ಮಂತ್ರಿಗಳು ಅಥವಾ ತಮಗೆ ಬೇಕಾದ ಸರ್ಕಾರ ಇಲ್ಲಿದ್ದಾಗ ಅಥವಾ ತಮ್ಮ ಪಕ್ಷದ ಸರ್ಕಾರ ಇಲ್ಲಿದ್ದಾಗ ಅಥವಾ ರಾಜಕೀಯ ಕಾರಣಕ್ಕೋಸ್ಕರವಾಗಿ ಇದನ್ನು ದುರುಪಯೋಗ ಮಾಡಿಕೊಳ್ಳುತ್ತಾರೆ ಎಂಬ ಸಂಶಯ ಇದ್ದಾಗ ಕೊಟ್ಟಿದ್ದ ಸಮ್ಮತಿಯನ್ನು ಹಿಂತೆಗೆದುಕೊಂಡಿರಬಹುದು. ಇದೇ ಮಾತನ್ನು ಇವತ್ತಿನ ದಿವಸ, ಇವರು ಹೇಳುವುದಾದರೆ ನನ್ನ ಆಕ್ಷೇಪ ಇಲ್ಲ, ಆದರೆ, ಇವತ್ತಿನ ದಿವಸ 27-7-91ರವರೆಗೆ ಕೊಟ್ಟಿದ್ದ ಸಮ್ಮತಿ ಏನಿದೆ, ಈ ಸಿ.ಬಿ.ಐ.ಗೆ ಕೆಲವು ಅಪರಾಧಗಳ ಬಗ್ಗೆ ರಾಜ್ಯದೊಳಗೆ ತನಿಖೆ ಮಾಡುವಂಥ ಅಧಿಕಾರ ಏನಿದೆ, ಆ ಅಧಿಕಾರವನ್ನು ಒಪ್ಪಿ, ಸಮ್ಮತಿಯನ್ನು ಸೂಚಿಸಿದಂಥ ಆದೇಶವನ್ನು ಹಿಂತೆಗೆದುಕೊಳ್ಳುವ ಉದ್ದೇಶ ಏನು? ಅದು ಇವತ್ತಿನ ದಿವಸ ಹೊರಗಡೆ ಬರಬೇಕಾಗಿದೆ. ತಮಗೆ ಗೊತ್ತಿರುವ ಹಾಗೆ, ಅನೇಕ ವಿಧವಾದ ಭ್ರಷ್ಟಾಚಾರದ ಆರೋಪಗಳನ್ನು ಸರ್ಕಾರದ ಮೇಲೆ ಅಥವಾ ಸರ್ಕಾರಿ ನೌಕರರುಗಳ ಮೇಲೆ ಅಥವಾ ಸಾರ್ವಜನಿಕ ವ್ಯಕ್ತಿಗಳ ಮೇಲೆ ಈ ಸದನದಲ್ಲಿ ಚರ್ಚೆಯಾಗುತ್ತದೆ. ಅದಕ್ಕಿಂತ ಮೊದಲು ಸಹ ಪತ್ರಿಕೆಯಲ್ಲೂ ಇದನ್ನು ನೋಡುತ್ತಿದ್ದೇವೆ. ನಾನು ಏನು ಹೇಳುತ್ತಿದ್ದೇನೆ, ಯಾವ ಆರೋಪವನ್ನು, ಭ್ರಷ್ಟಾಚಾರದ ಆರೋಪವನ್ನು ಅಥವಾ, ಅನೇಕ ಹಗರಣಗಳ ಬಗ್ಗೆ ಅವರದೇ ಪಕ್ಷದವರಾಗಿರಲಿ ಅಥವಾ ವಿರೋಧಪಕ್ಷದ ಸದಸ್ಯರಾಗಿರಲಿ, ಏನು ಆರೋಪವನ್ನು ಮಾಡುತ್ತಿದ್ದರು, ಆ ಆರೋಪವನ್ನು ಮುಚ್ಚುವುದಕ್ಕೆ ಪ್ರಯತ್ನ ಇದಾಗಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ, ನಿಜವಾಗಿಯೂ ಸಹ ಅಂತಹ ಪ್ರಯತ್ನ ಆಗದಿದ್ದರೆ, ಈ ಸಮ್ಮತಿಯನ್ನು ಹಿಂದಕ್ಕೆ ತೆಗೆದುಕೊಳ್ಳತಕ್ಕ ಅವಶ್ಯಕತೆ ಇರಲಿಲ್ಲ, ಇಲ್ಲವೇ ಕೇಂದ್ರ ಸರ್ಕಾರದವರು ಏನಾದರೂ ಈ ಸಮ್ಮಿತಿಯನ್ನು ಕೊಟ್ಟಿದ್ದರೆ, ಕೇಂದ್ರ ಸರ್ಕಾರ ಕೊಟ್ಟಂಥ ಈ ಸಮ್ಮಿತಿಯನ್ನು ದುರುಪಯೋಗಪಡಿಸಿಕೊಳ್ಳತಕ್ಕ ಸಂಶಯ ಇವರಿಗೆ ಬಂದಿರಬಹುದು. ಇದನ್ನು ಆದರೂ ಅವರು ಹೇಳಬೇಕಾಗಿತ್ತು. ಇವತ್ತಿನ ದಿವಸ ನಮಗೆ ಏನು ತೊಂದರೆ ಬಂದಿದೆ ಎಂಬ ಮಾತನ್ನು ಹೇಳುತ್ತಾರೆ. ಅವರು ಹೇಳಬಹುದು, ಲೋಕಾಯುಕ್ತ ಮಸೂದೆ ಇದೆ. ಆದ್ದರಿಂದ ಲೋಕಾಯುಕ್ತ ಮಸೂದೆ ಬಗ್ಗೆ, ಒಂದು ಮಾತನ್ನು ಮಾನ್ಯ ಗೃಹಸಚಿವರು ಹೇಳುತ್ತಾರೆ. ಅವರ ಹೇಳಿಕೆಯಲ್ಲಿ ಏನು ಹೇಳುತ್ತಿದ್ದಾರೆ ಅಂದರೆ

"Our Government continue to repose this faith in Karnataka Lakayukta and have maintained this freedom with Karnataka Lokayukta and the Karnataka Upa-Lokayukta to fully investigate and take action to maintain integrity in Public Life. There is no question of shielding corrupt activity in Karnataka."

ನಾನು ಹೇಳುತ್ತೇನೆ. ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಂಡ ಎಂದಹಾಗೆ ಆಯಿತು. ಇಲ್ಲಿಯವರೆಗೆ ಲೋಕಾಯುಕ್ತದ ಬಗ್ಗೆ ಈ ಸರಕಾರ ಒಂದು ಒಳ್ಳೆಯ ಸಾದ್ಭಾವನೆಯನ್ನು ಇಟ್ಟುಕೊಂಡಿರಲಿಲ್ಲ, ಈ ಲೋಕಾಯುಕ್ತದ ಕಾರ್ಯಾಚರಣೆಯಲ್ಲಿ ಮಧ್ಯಪ್ರದೇಶ ಮಾಡುವುದನ್ನು ಬಿಟ್ಟರೆ ಇವರಿಗೆ ಅದಕ್ಕಿಂತ ಹೆಚ್ಚು ನಂಬಿಕೆ ಇದ್ದಹಾಗೆ ಕಾಣುತ್ತಿಲ್ಲ, ಲೋಕಾಯುಕ್ತ ಇದೆ, ಸಿ.ಬಿ.ಐ. ಎತಕ್ಕೆ ಬೇಕೆಂದು ತಾವು ಕೇಳಬಹುದು. ಹಾಗಾದರೆ ಹಿಂದೆ ಸಿ.ಬಿ.ಐ.ನವರಿಗೆ ಸಮ್ಮಿತಿ ಕೊಟ್ಟಂಥ ಕಾಲದಲ್ಲಿ ಲೋಕಾಯುಕ್ತ ಇರಲಿಲ್ಲವೇ? ಆಗಲೂ ಇತ್ತು, ಹಿಂದೆ ಸಮ್ಮಿತಿಯನ್ನು ಕೊಟ್ಟಂಥ ಅನೇಕ ರಾಜ್ಯ ಸರಕಾರಗಳು ಇದ್ದಾಗಲೂ ಸಹ

ವಿಜಿಲೈನ್ಸ್ ಕಮಿಷನ್ ಇತ್ತು. ಐ.ಪಿ.ಸಿ ಪ್ರಕಾರ ತಪ್ಪು ಮಾಡಿದವರ ಮೇಲೆ ಕ್ರಮ ತೆಗೆದುಕೊಳ್ಳುವ ಅಧಿಕಾರ ರಾಜ್ಯದ ಪೋಲೀಸರಿಗೆ ಇತ್ತು. ಆದರೂ ಈ ಭ್ರಷ್ಟಾಚಾರದ ಆರೋಪಗಳು ಅತಿಯಾಗಿ ಬಂದಾಗ, ಅಥವಾ ಮೇಲುನೋಟಕ್ಕೆ ಬಹಳ ದೊಡ್ಡ ಪ್ರಮಾಣದಲ್ಲಿದ್ದಾಗ ಇದರ ಬಗ್ಗೆ ಸಿ.ಬಿ.ಐ. ತನಿಖೆ ಅಗತ್ಯ ಎಂದು ಕಂಡು ಬಂದರೆ ಅದನ್ನು ಅನುಕೂಲ ಮಾಡಿ ಕೊಡುವ ದೃಷ್ಟಿಯಿಂದ ಸಮ್ಮತಿ ಕೊಡುವ ಒಂದು ಪ್ರಯತ್ನ ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಆದುದರಿಂದ ನಾನು ನೇರವಾಗಿ ಸರಕಾರವನ್ನು ಕೇಳುವುದು ಇಷ್ಟೇ. ಏನು 1991ನೇ ಜುಲೈ 27ರಂದು ಆದೇಶ ಹೊರಡಿಸುವುದರ ಮೂಲಕ ಹಿಂದೆ ಕೊಟ್ಟಿದ್ದಂಥ ಸಮ್ಮತಿಯನ್ನು ವಾಪಸ್ ತೆಗೆದುಕೊಂಡಿರುತ್ತೀರಲ್ಲ, ಅದಕ್ಕೆ ನಿಜವಾದ ಕಾರಣಗಳನ್ನು ತಾವು ಹೇಳಬೇಕು. ಆ ನಿಜವಾದ ಕಾರಣ ಏನು ಇರಬಹುದು? ನಾನು ಹೇಳುತ್ತೇನೆ, ನಿಜವಾದ ಕಾರಣ ಭ್ರಷ್ಟಾಚಾರದ ಆರೋಪಗಳು ತಮ್ಮ ಸರಕಾರದ ಮೇಲೆ ಬಂದಾಗ ಆ ಆರೋಪಗಳನ್ನು ಮುಚ್ಚಿರುವಂತಹ ಪ್ರಯತ್ನ ಇದಾಗಿದೆಯೇ ಹೊರತು ಮತ್ತೇನೂ ಇಲ್ಲ. ಭ್ರಷ್ಟಾಚಾರದ ಆರೋಪಗಳು, ದೊಡ್ಡ ದೊಡ್ಡ ಅಧಿಕಾರಿಗಳ ಮೇಲೆ ಬಂದಿದೆ. ದೊಡ್ಡ ದೊಡ್ಡ ಹಗರಣಗಳು ನಡೆದಿವೆ ಎಂಬ ಮಾತನ್ನು ಹೇಳಿದ್ದೇವೆ. ಅವುಗಳನ್ನು ತನಿಖೆ ಮಾಡುವುದಕ್ಕೆ ಸಾಧ್ಯವಾದ ರೀತಿಯಲ್ಲಿ ಅವರಿಗೆ ಕೊಟ್ಟಿರುವಂತಹ ಸಮ್ಮತಿಯನ್ನು ತಾವು ವಾಪಸ್ ತೆಗೆದುಕೊಂಡಿದ್ದೀರಿ ಎಂಬ ಆರೋಪವನ್ನು ನನ್ನದಾಗಿದೆ. ಇದಕ್ಕೆ ಏನಾದರೂ ಆಧಾರ ಇದೆಯೇ ಎಂದು ತಾವು ಕೇಳಬಹುದು. ನಿಜ. ಕೇಳಬೇಕಾದ ಅವಶ್ಯಕತೆ ಇದೆ. ನಾನು ಯಾವುದನ್ನು ನಿರಾಧಾರವಾಗಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಅನೇಕ ಆರೋಪಗಳನ್ನು ಶಾಸನಸಭೆಯಲ್ಲಿ ಒಳಗೂ ಹೊರಗೂ ಮಾಡಿರುತ್ತೇವೆ. ಆ ಆರೋಪಗಳ ಬಗ್ಗೆ ತನಿಖೆ ತಾವು ಮಾಡಿರುತ್ತೀರಾ? ಆ ಆರೋಪಗಳ ಬಗ್ಗೆ ತನಿಖೆ ಮಾಡುವ ಮನಸ್ಸು ತಮಗೆ ಇಲ್ಲ, ಅನೇಕ ಸಂದರ್ಭದಲ್ಲಿ ಆರೋಪಗಳನ್ನು ಹೇಳಿದಾಗ ಅದಕ್ಕೆ ನೇರವಾದ ಉತ್ತರ ಕೊಡುವ ಗೋಜಿಗೇ ತಾವು ಹೋಗುವುದಿಲ್ಲ. ಅಂದಮೇಲೆ ಇಂತಹ ಆರೋಪಗಳನ್ನು ಮುಚ್ಚಿರುವಂತಹ ಪ್ರಯತ್ನ ನಡೆದಿದೆ. ಸತ್ಯ ಸಂಗತಿಗಳನ್ನು ದೇಶದ ಜನರಿಗೆ ಹೇಳುವಂತಹ ಪ್ರಯತ್ನ ತಮ್ಮದಾಗಿಲ್ಲ, ಅದಕ್ಕೆ ಬದಲು ಮುಚ್ಚಿರುವಂತಹ ಪ್ರಯತ್ನ ಮಾಡಿರುತ್ತೀರಿ ಎಂಬ ಗಂಭೀರವಾದ ಸವಾಲನ್ನು ನಾನು ಅವರಿಗೆ ಎಸೆಯುತ್ತೇನೆ. ಅಂತಹ ಪ್ರಕರಣಗಳು ಯಾವುವು ಎಂದರೆ ಅದಕ್ಕೆ ದೊಡ್ಡ ಪಟ್ಟಿಯನ್ನೇ ಮಾಡಬೇಕಾಗುತ್ತದೆ. ಒಬ್ಬ ಸಾರ್ವಜನಿಕ ವ್ಯಕ್ತಿ ಅಂದರೆ ಪಬ್ಲಿಕ್ ಸರ್ವೆಂಟ್ ಎಂದು ಏನು ಹೇಳುತ್ತಾರೆ ಅವರು ಮುಖ್ಯಮಂತ್ರಿಗಳಾಗಿರಬಹುದು, ಮಂತ್ರಿಗಳಾಗಿರಬಹುದು, ಸರಕಾರಿ ನೌಕರರಾಗಿರಬಹುದು ಯಾರೇ ಆಗಿರಬಹುದು, ಅವರ ಮೇಲೆ ಗಂಭೀರವಾದ ಆರೋಪ ಬಂದಾಗ ಮೊಟ್ಟಮೊದಲು ಸರಕಾರ ಮಾಡಬೇಕಾದುದು ಏನೆಂದರೆ ಆ ಬಗ್ಗೆ ತನಿಖೆ ಮಾಡುವ ವ್ಯವಸ್ಥೆ ಆಗಬೇಕು, ಅನೇಕ ಗಂಭೀರವಾದ ಆರೋಪಗಳನ್ನು ಸರಕಾರದ ಮೇಲೆ ಮತ್ತು ಅಧಿಕಾರಿಗಳ ಮೇಲೆ ಮಾಡಿದಾಗ ಅದರ ಬಗ್ಗೆ ತನಿಖೆ ಮಾಡುವ ಗೋಜಿಗೆ ಹೋಗದೇ ಇದ್ದರೆ, ಸರಕಾರದ ಮೇಲೆ ಸಂಶಯ ಬರುವುದಕ್ಕೆ ಸಾಧ್ಯ ಇಲ್ಲವೇ? ಸರಕಾರ ಅವರನ್ನು ರಕ್ಷಣೆ ಮಾಡುತ್ತಿದೆ ಎಂದು ಹೇಳುವುದಕ್ಕೆ ಸಾಧ್ಯ ಇಲ್ಲವೇ? ಮೇಲೂನೋಟಕ್ಕೇ ಕಾನೂನು ಬಾಹಿರವಾದ ಈ ಪ್ರಕರಣಗಳಲ್ಲಿ ಸರಕಾರ ಏನೂ ಕಾರ್ಯಕ್ರಮ ತೆಗೆದುಕೊಳ್ಳದೇ ಇರುವುದರಿಂದ ಅನಿವಾರ್ಯವಾಗಿ ನಾವು ಹೇಳಬೇಕಾಗುತ್ತದೆ, ಇದು ಮುಕ್ತವಾದ

ಸರಕಾರ ಅಲ್ಲ, ಈ ಸರ್ಕಾರ ಆರೋಪಗಳನ್ನು ಮುಚ್ಚಿ ಹಾಕುವುದಕ್ಕೆ ಪ್ರಯತ್ನ ಮಾಡುತ್ತಿದೆ ಎಂಬ ಮಾತನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಈಗಾಗಲೇ ಅನೇಕ ಆರೋಪಗಳನ್ನು ಮಾಡಿರುತ್ತೇವೆ. ಅದು ಡಿಸ್ಟಿಲರಿಗಳ ಮಂಜೂರಾತಿಯಾಗಿರಬಹುದು. ಹೆಚ್.ಯು.ಡಿ. ಡಿಪಾರ್ಟ್‌ಮೆಂಟ್‌ಗೆ ಸಂಬಂಧಪಟ್ಟ ಅನೇಕ ವಿಚಾರಗಳು ಇರಬಹುದು. ಏನು ನಾನು ಆರೋಪಗಳನ್ನು ಮಾಡಿದ್ದೇನೆ, ಅವು ಕಾನೂನು ಬಾಹಿರವಾದವುಗಳೆಂದು ನಾನು ಹೇಳಿದ್ದೇನೆ. ಅದರ ಬಗ್ಗೆ ತನಿಖೆ ಮಾಡುವುದಕ್ಕೆ ತಯಾರಿಗಿದ್ದೀರಾ? ಮೇಲನೋಟಕ್ಕೆ ಕಾನೂನು ಬಾಹಿರವಾದುದು ಎಂದು ಕಂಡು ಬಂದರೆ ಅದನ್ನು ಸಮರ್ಥನೆ ಮಾಡಿಕೊಳ್ಳುವ ಸರಕಾರ ಇಲ್ಲಿದ್ದರೆ, ಅದು ಭ್ರಷ್ಟಾಚಾರವನ್ನು ಸಮರ್ಥನೆ ಮಾಡಿಕೊಳ್ಳುವ ಸರಕಾರ ಆಗುತ್ತದೆಯೇ ಹೊರತಾಗಿ, ಕಾನೂನು ಬದ್ಧವಾದ ಸರಕಾರ ಆಗುವುದಕ್ಕೆ ಸಾಧ್ಯ ಇಲ್ಲ. ಈಗ ಎರಡು ಮೂರು ವಿಚಾರಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಮೊನ್ನೆ ಕೆಲವು ದಿನಗಳ ಹಿಂದೆ ಸರಕಾರ ಒಂದು ಆದೇಶ ಹೊರಡಿಸಿತು. ಅದು ಕೋಟ್ಯಾಂತರ ರೂಪಾಯಿಗಳ ವ್ಯವಹಾರಕ್ಕೆ ಸಂಬಂಧಪಟ್ಟ ಆದೇಶ. 1991, ಆಗಸ್ಟ್ 14ನೇ ತಾರೀಖು ಸರ್ಕಾರ ಒಂದು ಆದೇಶವನ್ನು ಹೊರಡಿಸಿದೆ. ಈ ಆದೇಶ ನೀರಾವರಿ ಇಲಾಖೆಗೆ ಸಂಬಂಧಪಟ್ಟ ಒಂದು ಆದೇಶ.

ಶ್ರೀ ಧರ್ಮಸಿಂಗ್ (ಗೃಹಸಚಿವರು) : ಮಾನ್ಯ ಅಧ್ಯಕ್ಷರೇ ಹಿರಿಯ ಸದಸ್ಯರಾದ ಏಕಾಂತಯ್ಯನವರು ಡೆಲ್ಲಿ ಪೋಲೀಸ್ ಆಕ್ಟ್ 1946 ಬಗ್ಗೆ ಕೇಳಿದ್ದಾರೆ. ಈ ವಿಚಾರದ ಬಗ್ಗೆ ಹಿರಿಯ ಸದಸ್ಯರಾದ ರಂಗನಾಥ್‌ರವರು ಈ ಹಿಂದೆ ಇದರ ಬಗ್ಗೆ ಕೇಳಿದ ಮೇಲೆ, ನಾನು ಅವತ್ತೇ ಒಂದು ಸ್ಟೇಟ್‌ಮೆಂಟ್ ಮಾಡಿದ್ದೆ. ಇದರ ಬಗ್ಗೆ ಕ್ಲಾರಿಫಿಕೇಷನ್ ಕೇಳಿದ್ದಾರೆ. ಬೇರೆ ಬೇರೆ ವಿಚಾರಗಳನ್ನು ಪ್ರಸ್ತಾಪ ಮಾಡತಕ್ಕದ್ದು ಇದರ ಪರ್‌ವ್ಯೂಗೆ ಬರುವುದಿಲ್ಲ ಎಂದು ಹೇಳುತ್ತೇನೆ. ಈಗಾಗಲೇ ತಾವು ಏನು ಹೇಳಿದ್ದೀರಿ, ಅದಕ್ಕೆ ಉತ್ತರ ಕೊಡುತ್ತೇನೆ. ಆದರೆ ಬೇರೆ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡತಕ್ಕದ್ದು ಇದರ ಕೆಳಗಡೆ ಬರುವುದಿಲ್ಲ. ಈಗ ನೀವು ಏನು ಪ್ರಸ್ತಾಪ ಮಾಡಿದ್ದೀರಿ ಆ ಬಗ್ಗೆ ಉತ್ತರ ಕೊಡುತ್ತೇನೆ. ಆದರೆ ತಾವೇನು ಬೇರೆ ವಿಚಾರಗಳನ್ನು ಪ್ರಸ್ತಾಪ ಮಾಡುತ್ತಿದ್ದೀರಿ...

ಶ್ರೀ ಎಚ್. ಏಕಾಂತಯ್ಯ : ನಾನು ಪ್ರಸ್ತಾಪ ಮಾಡಿದ್ದುದು Prevention of Corruption Act, ಪ್ರಕಾರ ಯಾವ ಅಪರಾಧಗಳನ್ನು ಮಾಡಿದ್ದಾರೆ, ಇದು it comes under the Prevention of corruption Act.

ಶ್ರೀ ಧರ್ಮಸಿಂಗ್ : ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಮಾನ್ಯ ಹಿರಿಯ ಸದಸ್ಯರು ನನ್ನಿಂದ ಏನು ಉತ್ತರ ಅಪೇಕ್ಷೆ ಪಟ್ಟಿದ್ದೀರಿ. ನಾನು ಆ ಉತ್ತರ ಹೇಳಿದ ಮೇಲೆ ತಮಗೆ ಅದರಿಂದ ಸಂತೋಷವಾಗಲಾರದೆ ಹೋದರೆ ಅದರ ಮೇಲೆ ತಾವು ಹೇಳಿ. ಈಗ ನಾವು Prevention of Corruption Actಗೆ ಎಲ್ಲಿ ಮಾಡಿದ್ದೇವೆ. What is the intention? ಎನ್ನತಕ್ಕಂಥದ್ದನ್ನು ಹೇಳಲು ಸ್ವಲ್ಪ ಆಲೋಚ ಮಾಡಿ ನಮಗೆ ಹೇಳುವಂತಹ ಅವಕಾಶ ಕಲ್ಪಿಸಿಕೊಟ್ಟರೆ ಮತ್ತೆ ತಾವು ಮುಂದೆ ಮಾತನಾಡತಕ್ಕಂಥಾದ್ದು ಇದ್ದೇ ಇದೆ.

ಶ್ರೀ ಎಚ್. ಏಕಾಂತಯ್ಯ : ನಾನು ಪ್ರಸ್ತಾಪ ಮಾಡತಕ್ಕಂಥ ಮೂಲ ಉದ್ದೇಶವೇನೆಂದರೆ ಕೆಲವು ಅಪರಾಧಗಳನ್ನು ಇಲ್ಲಿ ತನಿಖೆ ಮಾಡಲಿಕ್ಕೆ ಕೊಟ್ಟ ಸಮ್ಮತಿಯನ್ನು ವಾಪಸ್ಸು ಪಡೆದುಕೊಂಡಿದ್ದೀರಿ. ಯಾವ ಯಾವ ಅಪರಾಧಗಳು

ಅಂದರೆ ಉದಾಹರಣೆಗೆ ಒಂದು ಅಪರಾಧ ಆಗಿದೆ ಎಂದ ನಮ್ಮ ಮನಸ್ಸಿನಲ್ಲಿದೆ. ಆ ಆರೋಪ if it comes under the Prevention of Corruption Act, if it is an offence, ಇವತ್ತಿನ ದಿವಸ ನನಗೆ ಆ ರೆಮಿಡಿ ಹೋಯಿತು. ನನಗೆ ಈ ಸರ್ಕಾರದಲ್ಲಿ ನಂಬಿಕೆ ಇಲ್ಲ ಈ ಪೋಲೀಸಿನವರಲ್ಲಿ ನಂಬಿಕೆ ಇಲ್ಲ ಎಂದು ಆದರೆ ನಾನು ನೇರವಾಗಿ ಸಿ.ಬಿ.ಐ.ಗೆ ಬರೆಯಬಹುದಾಗಿತ್ತು. ಆ ದೃಷ್ಟಿಯಲ್ಲಿ ನಾನು ಹೇಳುತ್ತಿದ್ದೇನೆ. ಇವತ್ತು ನಾನು ಸಿ.ಬಿ.ಐ.ಗೆ ಬರೆದರೂ ಸಹ ನೀವು ಸಮ್ಮತಿ ವಾಪಸ್ಸು ತೆಗೆದುಕೊಂಡಿರುವುದರಿಂದ ಅವರು ಇವತ್ತಿನ ದಿವಸ ಅಸಹಾಯಕರಾಗಿದ್ದಾರೆ. ಅಂತಹ ಒಂದು ಪ್ರಕರಣ ಒಂದನ್ನು ನಾನೀಗ ತಮ್ಮ ಗಮನಕ್ಕೆ ತರಬಯಸುತ್ತೇನೆ. 1991ನೇ ಆಗಸ್ಟ್ 14ರಂದು ಸರ್ಕಾರ ಒಂದು ಆದೇಶ ಹೊರಡಿಸಿತು. ಆ ಆದೇಶ ಕಾನೂನಿಗೆ ವಿರುದ್ಧವಾಗಿದೆ. ಅದು ಅನ್ಯಾಯವಾಗಿ ಧನಾರ್ಜನೆ ಮಾಡತಕ್ಕಂಥ ಉದ್ದೇಶದಿಂದ ಸಂಬಂಧಪಟ್ಟವರಿಗೆ ಸಹಾಯ ಮಾಡುವ ಉದ್ದೇಶದಿಂದ ಕೋಟ್ಯಾಂತರ ರೂಪಾಯಿಗಳು ಸರ್ಕಾರಕ್ಕೆ ನಷ್ಟವಾಗಿರುತ್ತದೆ. ಇದರ ಬಗ್ಗೆ ಸಿ.ಬಿ.ಐ.ಗೆ ಬರೆಯಬೇಕೆಂದು ನನಗೆ ಆಸೆ ಇದ್ದರೆ ಅಪೇಕ್ಷೆ ಇದ್ದರೆ ತಾವು ಇವತ್ತಿನ ದಿವಸ ನನ್ನ ಅಧಿಕಾರವನ್ನು ಮೊಟಕುಗೊಳಿಸಿದ್ದೀರಿ. ಆದ್ದರಿಂದ ನಾನು ಹೇಳುತ್ತೇನೆ, ಇಂತಹ ಅಪರಾಧಗಳು ಈ ರಾಜ್ಯದಲ್ಲಿ ನಡೆಯುತ್ತಿವೆ ಅನೇಕ ಅಪರಾಧಗಳನ್ನು ನಾನಿಲ್ಲಿ ಹೇಳಿದೆ. ಈ ಎಲ್ಲಾ ಅಪರಾಧಗಳೂ ಸಹ they come under Section 169 of the I.P.C and Prevention of Corruption Act.

ಇದರ ಬಗ್ಗೆ ತಾವು ಏನು ಸಮ್ಮತಿ ವಾಪಸ್ಸು ತೆಗೆದುಕೊಂಡಿದ್ದೀರಿ. ಆ ಸಮ್ಮತಿ ವಾಪಸ್ಸು ತೆಗೆದುಕೊಂಡಿದ್ದರಿಂದ ಇವತ್ತಿ ದಿವಸ ನನಗಿದ್ದಂತಹ ರೆಮಿಡಿ ಇಲ್ಲದಂತಾಗಿದೆ. ಆ ದೃಷ್ಟಿಯಿಂದ ನಾನು ಹೇಳುತ್ತೇನೆ, ಹಾಗಾದರೆ ಅದರ ಗಾತ್ರ ಏನು. ನಿಜವಾಗಿಯೂ ಮೇಲ್ನೋಟಕ್ಕೆ ನಾನು ಇವತ್ತಿನ ದಿವಸ ಹೇಳಬೇಕಾಗುತ್ತದೆ. ಕೇವಲ ಇದು ಒಂದು ಆದೇಶ ಆಗಿದೆ ಇದರಿಂದ ನಷ್ಟವಾಗಿದೆ. ಅಷ್ಟು ಮಾತ್ರ ಅಲ್ಲ, ಮೇಲ್ನೋಟಕ್ಕೆ ಈ ಸದನವನ್ನು ನಾನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗಿದೆ. ಇಂತಹ ಅಪರಾಧ ಆಗಿದೆಯೇ ಅಥವಾ ಇಲ್ಲವೇ ಎಂಬುದನ್ನು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಆ ಉದ್ದೇಶದಿಂದ ಈ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಏನು 1991ರ ಆಗಸ್ಟ್ 14ನೇ ತಾರೀಖು ನೀರಾವರಿ ಇಲಾಖೆ ಒಂದು ಆದೇಶ ಹೊರಡಿಸಿತು. ಆ ಆದೇಶದಲ್ಲಿ ಮುದ್ನಾಳ್ ಬ್ರಾಂಚ್‌ಗೆ ಸಂಬಂಧಿಸಿದಂತೆ ಪರಿಹಾರವನ್ನು ಕೊಡತಕ್ಕಂಥ ವಿಚಾರ. ಅಥವಾ ಚ್‌ನಲ್ಲಿ ಒಂದು ವ್ಯವಹಾರ ನಡೆಯಿತು. ಅದೇನೆಂದರೆ ಅಲ್ಲಿರತಕ್ಕಂಥ ಒಬ್ಬ ಕಂಟ್ರಾಕ್ಟ್‌ದಾರರಿಗೆ ಇಂಜಿನೀಯರ್‌ಗೂ ವ್ಯತ್ಯಾಸ ಬಂತು. ಶಾಲೇಸ್ ಎಂದು ಹೇಳುತ್ತಾರೆ, ನಾವು ಬಳಪದ ಕಲ್ಲು ಎಂದು ಕನ್ನಡದಲ್ಲಿ ಹೇಳುತ್ತೇವೆ, ಈ ಬಳಪದ ಕಲ್ಲು ಸಾಯಿಲ್ ಹಾರ್ಡ್ ರಾಕ್ ಅಥವಾ ಸಾಫ್ಟ್ ರಾಕ್ ಅಂತ ಜಿಜ್ಞಾಸೆ ಬಂತು. ಪ್ರತಿಯೊಂದು ಕಂಟ್ರಾಕ್ಟ್ ಕೂಡ ಬಿಡ್ ಆಫ್ ಡಾಕ್ಯುಮೆಂಟ್ಸ್ ಅಂತ ಏನು ಹೇಳುತ್ತಾರೆ ಅದರಲ್ಲಿ ಇದನ್ನು ವರ್ಗೀಕರಿಸಿದ್ದಾರೆ. ಏನೆಂದರೆ ಇದು ಸಾಫ್ಟ್ ರಾಕ್ ಎಂದು ಮತ್ತು ಈ ವಿಶ್ವಬ್ಯಾಂಕಿನ ಮಂಜೂರಾತಿಯೊಂದಿಗೆ ತಾವು ಯಾವ ರೀತಿಯಾಗಿ ಕ್ಲಾಸಿಫೈ ಮಾಡಬೇಕು. ಅನ್ನುವುದಕ್ಕೆ ತನ್ನದೆ ಆದಂತಹ ಟೆಕ್ನಿಕಲ್ ಸ್ಪೆಸಿಫಿಕೇಶನ್ಸ್ ಇದೆ. ಆ ಸ್ಪೆಸಿಫಿಕೇಶನ್ಸ್ ಪ್ರಕಾರ ನಾನು ಕೇಳುತ್ತೇನೆ. ಇದು ಸಾಫ್ಟ್ ರಾಕ್.

ಇದರ ಬಗ್ಗೆ ಅಂತಿಮ ತೀರ್ಮಾನ ಮಾಡತಕ್ಕಂಥ ಅಧಿಕಾರ ಯಾರಿಗೆ ಇದೆ ಅಂದರೆ ಇಂಜನೀಯರ್ ಇನ್‌ಚಾರ್ಜ್ ಇಂಜನೀಯರ್ ಇನ್‌ಚಾರ್ಜ್ ಎಂದು ಹೇಳಿದರೆ ಅಲ್ಲಿರತಕ್ಕಂಥ ಸಂಬಂಧಪಟ್ಟ ಎಕ್ಸಿಕ್ಯೂಟೀವ್ ಇಂಜಿನಿಯರ್ ಅಥವಾ ಸೂಪರಿಟೆಂಡಿಂಗ್ ಇಂಜನೀಯರ್, who is notified as such by the government.

ಅಂತಿಮ ತೀರ್ಮಾನ ಕೊಡತಕ್ಕಂಥ ಅಧಿಕಾರ ಅವರಿಗಿದ್ದರೆ, ಆತ ಹೇಳುತ್ತಾನೆ, ಇದು ಸಾಫ್ಟ್ ರಾಕ್ ಎಂದು ಅಥವಾ ಹಾರ್ಡ್ ರಾಕ್ ಅಲ್ಲ ಎಂಬ ಮಾತನ್ನು ಹೇಳುತ್ತಾನೆ.

ಶ್ರೀ ಧರ್ಮಸಿಂಗ್ : ಸ್ವಲ್ಪ ನಮಗೆ ಅವಕಾಶ ಮಾಡಿಕೊಡಿ.

ಶ್ರೀ ಎಚ್. ವಿಕಾಂತಯ್ಯ : ಇದು ಇದರಲ್ಲಿ ಬಂದೇ ಬರುತ್ತದೆ. ಇಲ್ಲಿ ಇದು ಈಗ ಅಲ್ಲದಿದ್ದರೆ ಬೇರೆ ರೀತಿಯಲ್ಲಿ ಪ್ರಸ್ತಾಪ ಆಗಬಹುದು. ತಾವು ಏನೇ ಪ್ರಯತ್ನ ಮಾಡಿದರೂ ಇದನ್ನು ಮುಚ್ಚಿಡಲು ಸಾಧ್ಯವಿಲ್ಲ. ಆದ್ದರಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಏತಕ್ಕೆ ತಾವು ಅಡ್ಡಿ ಮಾಡುತ್ತೀರಿ? If I am allowed to say it here, I am entitled to say somewhere else. ಆದರಿಂದ ಉಪಯೋಗ ಇಲ್ಲ. ನಾನು ತಮಗೆ ಹೇಳುವುದೇನೆಂದರೆ, ಯಾವ ರೀತಿಯಾಗಿ ಅಧಿಕಾರ ದುರುಪಯೋಗ ಪಡಿಸಿಕೊಂಡಿದ್ದೀರಿ. ಯಾವ ರೀತಿಯಾಗಿ ಕೋಟ್ಯಾಂತರ ರೂಪಾಯಿಗಳನ್ನು ತಮಗೆ ಬೇಕಾದವರಿಗೆ ಬೇಕಾದ ರೀತಿಯಲ್ಲಿ ಕೊಡಲಿಕ್ಕೆ ಬೇಕಾದಂತಹ ಸರ್ಕಾರಿ ಆದೇಶವನ್ನು ಹೊರಡಿಸಿದ್ದೀರಿ ಎಂಬುದನ್ನು ಈ ಸದನದ ಗಮನಕ್ಕೆ ತರುವುದು ನನ್ನ ಕರ್ತವ್ಯ. ಆ ದೃಷ್ಟಿಯಿಂದ ನಾನು ತಮಗೆ ಹೇಳುತ್ತೇನೆ. ಇವತ್ತಿನ ದಿವಸ ಇಂಜನೀಯರ್ ಇನ್ ಚಾರ್ಜ್ ಏನಿದ್ದಾರೆ, ಅವರು ಸೂಪರ್‌ಟೆಂಡಿಂಗ್ ಇಂಜನೀಯರ್ ಏನಿದ್ದಾರೆ, ಎಕ್ಸಿಕ್ಯೂಟೀವ್ ಇಂಜನೀಯರ್ ಏನಿದ್ದಾರೆ, ಅವರು ಹೇಳುತ್ತಾರೆ ಇದು ಸಾಫ್ಟ್ ರಾಕ್ ಎಂಬ ಮಾತನ್ನು ಅವರು ಹೇಳುತ್ತಾರೆ. ನಾನು ತಮ್ಮ ಸರ್ಕಾರಕ್ಕೆ ನಾನು ನೇರವಾದ ಸವಾಲನ್ನು ಹಾಕುತ್ತೇನೆ. ಈ ಆದೇಶವನ್ನು ತಾವು ಓದಿದರೆ ಗೊತ್ತಾಗುತ್ತದೆ. ಏನೆಂದರೆ ನಿಮ್ಮ ಮೂಲ ಉದ್ದೇಶ ಅವರಿಗೆ ಸಹಾಯ ಮಾಡಬೇಕೆಂದು, Nowhere it is contemplated to constitute an expert committee to examine the soft rock. Wherever there is dispute between the government and the Contractor. Is there any agreement? No, Inspite of it, ಆದರೂ ಅವರಿಂದ ಅರ್ಜಿ ತೆಗೆದುಕೊಳ್ಳುತ್ತೀರಿ ಅಥವಾ ತಾವಾಗಿಯೇ ಒಂದು ಎಕ್ಸ್‌ಪರ್ಟ್ ಕಮಿಟಿಯನ್ನು ತಾರೀಖು 14-5-91ರಲ್ಲಿ ಮಾಡುತ್ತೀರಿ. ಏಕೆ ಮಾಡುತ್ತೀರಿ ಸ್ವಾಮಿ? ಒಂದು ಪಕ್ಷ ಯಾವುದೇ ಒಬ್ಬ ಗುತ್ತಿಗೆದಾರ ಇದು ಸಾಫ್ಟ್ ರಾಕ್ ಅಥವಾ ರಾಕ್ ಎಂದು ಹೇಳುವುದಾರೆ ಅವನು ಕೋರ್ಟಿಗೆ ಹೋಗಬೇಕು. ಅಲ್ಲಿ ತೀರ್ಮಾನ ಮಾಡಿಕೊಳ್ಳಬೇಕು. ಹೆಚ್ಚಿನ ಹಣವನ್ನು ಕೋರ್ಟಿನ ತೀರ್ಮಾನ ಪ್ರಕಾರ ತಾವು ಮಾಡಿಕೊಳ್ಳಬೇಕಾಗಿದೆ. ಆದರೆ ಅದಕ್ಕೆ ತಾವು ಅವಕಾಶ ಕೊಡುವುದಿಲ್ಲ. ಅದಕ್ಕೆ ಬದಲಾಗಿ ತಮಗೆ ಬೇಕಾದವನ್ನು ಸೇರಿಸಿ ಒಂದು ಪರಿಣಿತರ ಸಮಿತಿಯನ್ನು ಮಾಡುತ್ತೀರಿ. ಆ ಪರಿಣಿತರ ಸಮಿತಿಗೆ ನಾಚಿಕೆ ಆಗಬೇಕು. ಇವತ್ತಿನ ದಿವಸ ಈ ಪರಿಣಿತರ ಸಮಿತಿ ಆಧಾರದ ಮೇಲೆ ಕೋಟ್ಯಾಂತರ ರೂಪಾಯಿಗಳನ್ನು ಕೊಡುವಂಥ ಒಂದು ಮನಸ್ಸು ಮಾಡಿದರೆ ಹೇಗೆ ಇದು ಸರಿಯಾಗುತ್ತದೆ. ನಾನು ತಮಗೆ ಕೇಳುತ್ತಿದ್ದೇನೆ. ಅವರಿಗೆ ಮೂರು ವಿಧವಾದ ಟರ್ಮ್ಸ್ ಕೊಡುತ್ತೀರಿ. ಇಶ್ಯೂಸ್, ಇದರ ಬಗ್ಗೆ ತೀರ್ಮಾನ ಮಾಡಿ ಎಂದು, ಈ ಸಾಫ್ಟ್ ರಾಕ್

ಮತ್ತು ಹಾರ್ಡ್ ರಾಕ್ ಶ್ಯಾಲ್ ಏನಿದೆ, ಇದನ್ನು whether it requires blasting, whether it would be classified as a hard rock, and what rate to be paid ? ಇವೆಲ್ಲವನ್ನೂ ಸಹಾ ಅಫರ್ಮೆಟೀವ್ ಆಗಿ ಆ ಸಮಿತಿ ಹೇಳುತ್ತೇದೆ. ಆ ಸಮಿತಿ ಹೇಳಿದ್ದನ್ನು ತಾವು ಸ್ವಲ್ಪವೂ ಸಹಾ ತೊಂದರೆ ತೆಗೆದುಕೊಳ್ಳದೆ ಆ ಸಮಿತಿಯ ರೆಕಮೆಂಡೇಷನ್‌ನ್ನು ಒಪ್ಪಿಕೊಳ್ಳುತ್ತೀರಿ. ನಾನು ತಮಗೆ ಕೇಳುತ್ತಿದ್ದೇನೆ. ಫೈನಾನ್ಸ್ ಡಿಪಾರ್ಟ್‌ಮೆಂಟಿನವರ ಒಪ್ಪಿಗೆಯನ್ನು ತಾವು ಏನಾದರು ಪಡೆದಿದ್ದೀರಾ? ಒಬ್ಬ ಮುಖ್ಯ ಚೀಫ್ ಇಂಜಿನೀಯರ್ ಹೇಳುತ್ತಾರೆ, ಇವರು ಕೋರ್ಟ್‌ಗೆ ಹೋದರೂ ಸಹಾ ಅವರ ಪರವಾಗುವ ಸಂದರ್ಭ ಇದೆ ಎನ್ನುವ ಮಾತನ್ನು ಹೇಳುತ್ತಾರೆ. ಹಾಗಾದರೆ ನಾನು ತಮಗೆ ಕೇಳುತ್ತಿದ್ದೇನೆ. ಈ ಒಂದು ಅಭಿಪ್ರಾಯವನ್ನು ಸಂಬಂಧಪಟ್ಟಂಥ ಚೀಫ್ ಇಂಜಿನೀಯರ್‌ರವರು ಕೊಟ್ಟರೂ ಸಹ ಅದರ ಮೇಲೆ ತಾವು ಕಾನೂನು ಇಲಾಖೆ ಅಭಿಪ್ರಾಯವನ್ನು ಪಡೆದಿದ್ದೀರಾ? ಆದರೆ ತಮಗೆ ಕಾನೂನು ಬೇಕಾಗಿಲ್ಲ. ಈ ಎಲ್ಲಾ ಅಂಶಗಳನ್ನು ನಾವು ನೋಡಿದಾಗ ನಮಗೆ ನನಗನಿಸುತ್ತದೆ. ಅವರ ಶಿಫಾರಸ್‌ಗಳನ್ನು ನೀವು ಒಪ್ಪಿಕೊಂಡಿದ್ದನ್ನು ನೋಡಿದರೆ ಮತ್ತು ಆ ಶಿಫಾರಸ್‌ಗಳ ಏನಿದೆ ಎಂದರೆ, ಇವತ್ತಿನ ದಿವಸ ಆ ಒಂದು ಹಾರ್ಡ್ ಶ್ಯಾಲೆಯನ್ನು ಸಾಫ್ಟ್ ರಾಕ್ ಎಂದು ಪರಿಗಣಿಸಿ ಏನಾದರೂ ಹಣವನ್ನು ಕೊಟ್ಟಿದ್ದರೆ ತಾವು 70 ರೂಪಾಯಿಗಳನ್ನು ಟೆಂಡರ್ ರೇಟ್‌ನಲ್ಲಿ ಕೊಡಬೇಕಾಗಿತ್ತು. ಆದರೆ ಇವತ್ತು ಈ ಸರ್ಕಾರಿ ಆದೇಶದಿಂದಾಗಿ ಆ ಒಂದು ಹಾರ್ಡ್ ಶ್ಯಾಲೆ ಏನಿದೆ, ಅದನ್ನು ಹಾರ್ಡ್ ರಾಕ್ ಎಂದು ಪರಿಗಣಿಸಿ 150 ರೂಪಾಯಿಗಳನ್ನು ಕೊಡುವಂಥ ಒಂದು ಆದೇಶವನ್ನು ತಾವು ಮಾಡಿದ್ದೀರಿ. ಇದು ಯಾರ ಉಪಯೋಗಕ್ಕೆ? ಇದು ಸರ್ಕಾರಿ ಖಜಾನೆಯನ್ನು ಲೂಟಿ ಮಾಡುವಂಥ ಕೆಲಸ ಅಲ್ಲವೇ? ಸನ್ಮಾನ್ಯ ಸಭಾಧ್ಯಕ್ಷಣೆಯವರೆ, ಈ ರೀತಿಯಾಗಿ ಬಿಡ್ ಆಫ್ ಡಾಕ್ಯುಮೆಂಟ್ಸ್‌ನಲ್ಲಿ ಏನಿದೆ, ಅಥವಾ ಬಿಲ್ ಆಫ್ ಕ್ವಾಂಟಿಟೀಸ್‌ನಲ್ಲಿ ಏನಿದೆ? ಬಿಲ್ ಆಫ್ ಕ್ವಾಂಟಿಟೀಸ್‌ನಲ್ಲಿ ಅಂದರೆ ಸಾಫ್ಟ್ ರಾಕ್ ಎಷ್ಟಿದೆ? ಎಂಬ ಒಂದು ಅಂದಾಜು ಇದೆ. ಇದರ ಪ್ರಕಾರ, ಬಿಲ್ ಆಫ್ ಕ್ವಾಂಟಿಟೀಸ್ ಪ್ರಕಾರ ಇವತ್ತು ಹಾರ್ಡ್ ರಾಕ್ ಒಂದಕ್ಕೆ ಎರಡರಷ್ಟಾಗಬಹುದು, ಮೂರರಷ್ಟಾಗಬಹುದು. ಆದರೆ, ಎಲ್ಲದಕ್ಕಿಂಥ ಮುಖ್ಯವಾದ ವಿಚಾರ ಅಂದರೆ ಇಷ್ಟು ವಿಶೇಷವಾದ ಪ್ರೇಮ ಈ ಕಂಟ್ರಾಕ್ಟ್‌ದಾರರಿಗೆ ಮತ್ತು ಇವರಿಗೆ ಇದೆ ಎಂದು ಹೇಳಬೇಕಾದರೆ ಒಂದೇ ಒಂದು ವಾಕ್ಯವನ್ನು ಸಂಬಂಧಪಟ್ಟ ಸರ್ಕಾರಿ ಆದೇಶದಲ್ಲಿ ಓದುವುದಕ್ಕೆ ಇಷ್ಟಪಡುತ್ತೇನೆ.

"Under the circumstances, the recommendations of the expert committee on the issue of classification of the disputed excavation items in the on-going ICB contract of Mudnal branch canal or Upper Krishna Project as noted in the preamble are accepted subject to the condition that these recommendations are exclusively for Mudnal branch."

ಏಕೆ ಸನ್ಮಾನ್ಯ ಅಧ್ಯಕ್ಷಣೆಯವರೆ, Why? ಬೇರೆ ಕಡೆ ಸಾಫ್ಟ್ ರಾಕ್, ಅಥವಾ ಹಾರ್ಡ್ ಶ್ಯಾಲ್ ಏನಿದೆ? ಅದು ಏನಾದರೂ ಹಾರ್ಡ್ ರಾಕ್ ಅಂಥ ಆದರೆ ಅದು ಅವರಿಗೆ ಅಪ್ಲೈ ಆಗುವುದಿಲ್ಲವೇ? Why ? What is the fun in it, what is the motive behind it? ಇದು ಕೇವಲ ಮುದ್ನಾಳ್ ಬ್ರಾಂಚ್‌ಗೆ ಸಂಬಂಧಪಟ್ಟಂತೆ ಮಾತ್ರ ಈ ಒಂದು ವರದಿಯನ್ನು ಒಪ್ಪಿಕೊಳ್ಳುತ್ತೇವೆಂದು ಹೇಳಿದರೆ, ಇದರ

ಅರ್ಥ ಏನು? ಅಷ್ಟೇ ಅಲ್ಲ. ಅದಕ್ಕಿಂಥ ಹೆಚ್ಚಾಗಿ ಇವರು ಹೇಳುತ್ತಾರೆ. ಇಮ್ಮೀಡಿಯಟ್ ಫಾಲೋ ಅಫ್ ಅಕ್ಷನ್ ಆಗಬೇಕು. ಸನ್ಮಾನ್ಯ ಸಭಾಧ್ಯಕ್ಷಣಿಯವರೆ, ಈ ಒಂದು ಆದೇಶದ ಮೇಲೆ ಕೋಟ್ಯಾಂತರ ರೂಪಾಯಿಗಳ ವ್ಯವಹಾರ ನಡೆದಿರಬಹುದು. ಈ ವ್ಯವಹಾರವನ್ನು ಬಯಲಿಗೆ ಹಾಕಬೇಕು, ಇದರ ಬಗ್ಗೆ ಚರ್ಚೆ ಆಗಬೇಕೆಂದು ದೃಷ್ಟಿಯಿಂದ ಕಳೆದ 12 ದಿವಸದಿಂದ ನಾನು ಸರ್ಕಾರಿ ಆದೇಶವನ್ನು ಪಡೆಯಲಿಕ್ಕೆ ಪ್ರಯತ್ನ ಮಾಡಿದೆ. ವ್ಯವಸ್ಥಿತವಾಗಿ ಆ ಸರ್ಕಾರಿ ಆದೇಶವನ್ನು ಕೊಡದಿರುವಂಥ ಒಂದು ತಂತ್ರ ಈ ಸರ್ಕಾರ ನಡೆಸಿತು. ಆದರೆ we know how to snatch it. ಅದು ಬೇರೆ ಪ್ರಶ್ನೆ. ಇವತ್ತಿನ ದಿವಸ..

ಶ್ರೀ ಕೆ.ಹೆಚ್. ರಂಗನಾಥ್ : ಇಲ್ಲಿ ತಮ್ಮ ಮೋಷನ್‌ನ್ನು ತಾವು ದಯಮಾಡಿ ಓದಿ.

ಶ್ರೀ ಹೆಚ್. ಏಕಾಂತಯ್ಯ : ಅಲ್ಲಿಗೇ ಬಂದೆ. ಇಂಥ ಅಪರಾಧಗಳು ಏನಿದೆ? They attract provisions 161 to 169 of IPC.

ಶ್ರೀ ಕೆ.ಹೆಚ್. ರಂಗನಾಥ್ : ಈಗ ತಾವು ತಮ್ಮ ಮೋಷನ್ ವಿತ್‌ಡ್ರಾಯಲ್ of that particular statute ಬಗ್ಗೆ ಹೇಳಿದ್ದೀರಿ ಅಷ್ಟೇ. ಆದರೆ ತಾವು ಈಗ ಪ್ರಸ್ತಾಪ ಮಾಡತಕ್ಕ ವಿಷಯ ಹೇಗೆ ಬರುತ್ತದೆ? How can the Home Minister answer for the other Minister.

ಶ್ರೀ ಹೆಚ್. ಏಕಾಂತಯ್ಯ : ನಾನು ಇಲ್ಲಿಯವರೆಗೆ ಮಾತನಾಡಿದ ಅಂಶಗಳನ್ನೆಲ್ಲಾ ಅವರು ಕೇಳಲಿಲ್ಲ ಎಂದು ಕಾಣುತ್ತದೆ. ನಾನು ಹೇಳುತ್ತಾ ಇರುವುದು ಏನೆಂದರೆ ಈಗ ಸರ್ಕಾರೀ ಆದೇಶ 1991ರ ಜುಲೈ 27ನೇ ತಾರೀಖು ವಾಪಸ್ ತೆಗೆದುಕೊಂಡಿದೆ. ಯಾವುದನ್ನು ವಾಪಸ್ ತೆಗೆದುಕೊಂಡಿದೆ ಅಂದರೆ ಇಂತಹ ಅಪರಾಧಗಳ ಬಗ್ಗೆ ತನಿಖೆ ಮಾಡುವಂತಹ ಅಧಿಕಾರ ಸಿ.ಬಿ.ಐಗೆ ಏನಿತ್ತು ಆ ಅಧಿಕಾರವನ್ನು ತಾವು ವಾಪಸ್ ತೆಗೆದುಕೊಂಡಿದ್ದೀರಿ.

ಶ್ರೀ ಕೆ.ಹೆಚ್. ರಂಗನಾಥ್ : ತಾವು ಬಹಳ ವಿವರಕ್ಕೆ ಹೋಗುತ್ತಿದ್ದೀರಿ.

ಶ್ರೀ ಹೆಚ್. ಏಕಾಂತಯ್ಯ : ನಾನು ಏಕೆ ವಿವರಕ್ಕೆ ಹೋದೆ ಅಂದರೆ 27-7-91ರಂದು ತಾವು ಹಿಂದೆ ತೆಗೆದುಕೊಂಡ ಸಮ್ಮತಿ ಏನು ಇದೆ, ಆ ಸಮ್ಮತಿಗೆ ಸಂಬಂಧಪಟ್ಟ ಅಪರಾಧಗಳು ಏನು ಅಂದರೆ ಆ ಅಪರಾಧಗಳು, ಇಂತಹ ಪ್ರಕರಣಗಳು ಆಗಿವೆ. ಇಂತಹ ಪ್ರಕರಣಗಳ ಬಗ್ಗೆ ನಾನು ಅಪೇಕ್ಷೆಪಟ್ಟಿದ್ದರೆ ಇವತ್ತು ಸಿಬಿಐಗೆ ಬರೆಯುವುದಕ್ಕೆ ನನಗೆ ಅವಕಾಶ ಇತ್ತು. ಅಥವಾ ಸರ್ಕಾರವೇ ಸಹ ನಾನು ಹೇಳಿದಂತಹ ಆರೋಪಗಳ ಬಗ್ಗೆ ತನಿಖೆ ಮಾಡುವುದಕ್ಕೆ ಸಿಬಿಐಗೆ ರೆಫರ್ ಮಾಡುವಂತಹ ಅಧಿಕಾರ ಇತ್ತು. ಆ ಅಧಿಕಾರವನ್ನು ಉದ್ದೇಶಪೂರ್ವಕವಾಗಿ ಇಂತಹ ಪ್ರಕರಣಗಳನ್ನು ಮುಚ್ಚಿಹಾಕುವ ಪ್ರಯತ್ನ ಮಾಡುವುದಕ್ಕೋಸ್ಕರ ತಾವು ವಾಪಸ್ ತೆಗೆದುಕೊಂಡಿದ್ದೀರಿ ಎಂಬ ಆರೋಪ ನನ್ನದು.

ಶ್ರೀ ಧರ್ಮಸಿಂಗ್ : ಮಾನ್ಯ ಏಕಾಂತಯ್ಯನವರೆ, ತಾವು ಏನು ಹೇಳಬೇಕಾಗಿದೆ ಎಂದರೆ ಅಥವಾ ತಾವು ಏನು ನೋಟೀಸ್ ಕೊಟ್ಟಿದ್ದೀರಿ. ಅದರ ಬಗ್ಗೆ ಎಲ್ಲಾ ಹೇಳಿದ್ದೀರಿ. ಆದರೆ ತಾವು ಈಗ ಬೇರೆ ಬೇರೆ ಇಲಾಖೆಯಲ್ಲಿರತಕ್ಕ ವಿಷಯವನ್ನು ಉಲ್ಲೇಖ ಮಾಡುವುದಕ್ಕೆ ಹೊರಟರೆ ಅದಕ್ಕೆ ನಾನು ಉತ್ತರ ಕೊಡುವುದಕ್ಕೆ ಸಾಧ್ಯ ಇಲ್ಲ. ತಾವು ಏನು ಕೇಳಿದ್ದೀರಿ? 1946ರ ಸಿಬಿಐ ಬಗ್ಗೆ ಕೇಳತಕ್ಕ ವಿಷಯದ ಬಗ್ಗೆ ನನ್ನ ಹತ್ತಿರ ಉತ್ತರ ಇದೆ. ಈ ಉತ್ತರ ಆದಮೇಲೆ

ಏನಾದರೂ ಕೂಡ ತನಿಖೆಗೆ ಅಡ್ಡ ಬರುತ್ತಾ ಇದೆ ಎಂದರೆ ಅದಕ್ಕೆ ಕೂಡ ನಾನು ಉತ್ತರ ಕೊಡುತ್ತೇನೆ. ಮೊದಲು ನನ್ನ ಉತ್ತರ ಕೇಳಿದ ಮೇಲೆ ನೀವು ಹೇಳಿ. ತಾವು ಪ್ರಸ್ತಾಪ ಮಾಡಿದ್ದೀರಿ. ವಿವರವಾಗಿ ಎಲ್ಲವನ್ನೂ ಹೇಳಿದ್ದೀರಿ. ನಮ್ಮ ನೋಟಿಫಿಕೇಶನ್ ವಿತ್‌ಡ್ರಾ ಮಾಡಿದ ಮೇಲೆ ಎಲ್ಲೆಲ್ಲಿ ಏನೇನು ತೊಂದರೆ ಆಗುತ್ತದೆ ಎಂಬ ದೃಷ್ಟಿಯಿಂದ ಎಲ್ಲಾ ಕೂಡ ಉಲ್ಲೇಖ ಮಾಡಿದ್ದೀರಿ. ಅದಕ್ಕೆ ನನಗೆ ಉತ್ತರ ಕೊಡುವುದಕ್ಕೆ ಅವಕಾಶ ಕೊಟ್ಟರೆ, ಉತ್ತರ ಕೊಟ್ಟಾದ ಮೇಲೆ ತಾವು ಕ್ಲಾರಿಫಿಕೇಶನ್ ಕೇಳಿ.

ಶ್ರೀ ಹೆಚ್. ಏಕಾಂತಯ್ಯ : ಕ್ಲಾರಿಫಿಕೇಶನ್ ನನಗೆ ಇದರ ಬಗ್ಗೆ ಬೇಕಾಗಿಲ್ಲ. ನಾನು ಏನು ಆರೋಪಗಳನ್ನು ಮಾಡಿದ್ದೇನೆ. ನಾನು ಇದರ ಬಗ್ಗೆ ತಮ್ಮಿಂದ ಕ್ಲಾರಿಫಿಕೇಶನ್ ಬಯಸುವುದಿಲ್ಲ. ನಾನು ತಮ್ಮಿಂದ ಬಯಸುವುದು, ಇಂತಹ ಆರೋಪಗಳನ್ನು ಏನು ಮಾಡಿದ್ದೇನೆ. ಇಂತಹ ಅಪರಾಧಗಳ ಬಗ್ಗೆ ತನಿಖೆ ಮಾಡುವಂತಹ ಅಧಿಕಾರ ಸಿಬಿಐಗೆ ಮೊದಲು ಏನು ಇತ್ತು, ಆ ಸಮ್ಮತಿಯನ್ನು ವಾಪಸ್ ತೆಗೆದುಕೊಂಡಿರುವುದರಿಂದ ಇಂತಹ ಅಪರಾಧಗಳ ಬಗ್ಗೆ ತನಿಖೆ ಮಾಡುವುದಕ್ಕೆ ನಿಮಗೆ ಸಾಧ್ಯ ಇಲ್ಲ.

ಶ್ರೀ ಧರ್ಮಸಿಂಗ್ : ಮಾನ್ಯ ಏಕಾಂತಯ್ಯನವರು ಈಗ ಪ್ರಸ್ತಾಪ ಮಾಡುತ್ತಾ ಇರತಕ್ಕ ವಿಷಯದ ಬಗ್ಗೆ ನಾನು ಇಂಟರ್‌ವೀನ್ ಮಾಡಬೇಕಾಗುತ್ತದೆ. ಕೇಂದ್ರದಿಂದ ಅವರಿಗೆ ಬೇಕಾದಾಗ ತನಿಖೆ ಮಾಡತಕ್ಕ ಹಂತದಲ್ಲಿ ಸ್ಟೇಟ್ ಗವರ್ನಮೆಂಟಿನಿಂದ ಅಬ್ಜೆಕ್ಷನ್ಸ್ ಇಲ್ಲೇ ಇಲ್ಲ. ಎಲ್ಲೆಲ್ಲಿ ಸಿಬಿಐನವರು ತನಿಖೆ ಮಾಡಬೇಕು ಎಂದು ಕೇಳುತ್ತಾರೆ, definitely we are going to give. That is a different matter. ಈಗ ನನ್ನಿಂದ ಉತ್ತರ ಪಡೆದಾದ ಮೇಲೆ ತಾವು ಕೇಳಬಹುದು.

ಶ್ರೀ ಹೆಚ್. ಏಕಾಂತಯ್ಯ : ಇದು ಆ ರೀತಿ ಅಲ್ಲ. ನಾನು ಹೇಳುವುದು ಏನು ಅಂದರೆ ಅವರು ಕೇಳಿದಾಗ ಅನುಮತಿ ಕೊಡುವ ಪ್ರಶ್ನೆ ಅಲ್ಲ..

ಶ್ರೀ ಧರ್ಮಸಿಂಗ್ : ನಾನು ಹೇಳುವುದನ್ನು ಕೇಳಿ. ತಾವು ಪ್ರಸ್ತಾಪ ಮಾಡಿದ್ದೀರಿ. ನಾನು ಅದಕ್ಕೆ ಉತ್ತರ ಕೊಡಬೇಕಲ್ಲ.

(ಗೊಂದಲ)

ಉಪಾಧ್ಯಕ್ಷರು : ಮಾನ್ಯ ಮಂತ್ರಿಗಳು ಈಗ ಉತ್ತರ ಕೊಡಬಹುದು.

ಶ್ರೀ ಧರ್ಮಸಿಂಗ್ : ಏಕಾಂತಯ್ಯನವರೆ, ನೀವು ಇವತ್ತು ಏನು ನೋಟೀಸ್ ಕೊಟ್ಟಿದ್ದೀರಿ. ಏನು ಸಂಶಯ ನಿಮ್ಮ ಮನಸ್ಸಿನಲ್ಲಿ ಉದ್ಭವ ಆಗುತ್ತಿದೆ. ಇವತ್ತು ನಾನು ಅದರ ಬಗ್ಗೆ ಉತ್ತರ ಹೇಳುತ್ತೇನೆ.

ಶ್ರೀ ಸಿ. ಪ್ರಭಾಕರ ಎಸ್. ಠಾಣೆ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಏಕಾಂತಯ್ಯನವರು ಇವತ್ತು ಏನು ವಿಷಯ ಪ್ರಸ್ತಾಪ ಮಾಡುತ್ತಿದ್ದಾರೆ. ಅದೇ ವಿಷಯಕ್ಕೆ ಸಂಬಂಧಪಟ್ಟಂತೆ ನಾವೂ ಸಹ ಸೂಚನೆ ಕಳಿಸಿದ್ದೇವೆ. ಆದ್ದರಿಂದ ಮಾನ್ಯ ಮಂತ್ರಿಗಳು ಉತ್ತರ ಕೊಡುವ ಮೊದಲು ನಮಗೂ ಸಹ ಇದರ ಬಗ್ಗೆ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಅವಕಾಶ ಮಾಡಿಕೊಡಬೇಕು. ಈಗಾಗಲೇ ನಾವು ಅಧ್ಯಕ್ಷರ ಕೊಠಡಿಯಲ್ಲಿ ಈ ಬಗ್ಗೆ ಭೇಟಿ ಆಗಿ ಹೇಳಿದಾಗ ಅವರು ಅವಕಾಶ ಕೊಡುತ್ತೇವೆಂದು ಹೇಳಿದ್ದಾರೆ.

ಉಪಾಧ್ಯಕ್ಷರು : ಆಯಿತು.

ಶ್ರೀ ಹೆಚ್. ಏಕಾಂತಯ್ಯ : ಏಕೆ ಈ ವಿಷಯಕ್ಕೆ ಹೋಗಿದ್ದೇನೆ ಅಂದರೆ...

ಉಪಾಧ್ಯಕ್ಷರು : ವಿವರಕ್ಕೆ ಹೋಗಬೇಡಿ...

ಶ್ರೀ ಹೆಚ್. ಏಕಾಂತಯ್ಯ : ಇದರ ವಿವರ ಹೇಳದೇ ಇದ್ದರೆ ಹೇಗೆ ಆಗುತ್ತದೆ?

ಈ ಅಪರಾಧಗಳು ಯಾವುವು ಎಂದು ಹೇಳಬಾರದೇ?

ಉಪಾಧ್ಯಕ್ಷರು : ಬೇರೆ ಬೇರೆ ಇಲಾಖೆಗಳ ಬಗ್ಗೆ ತಾವು ಹೇಳುವುದಾದರೆ ಇವರು ಹೇಗೆ ಉತ್ತರ ಕೊಡುತ್ತಾರೆ?

ಶ್ರೀ ಹೆಚ್. ಏಕಾಂತಯ್ಯ : ಈ ಆರೋಪಗಳಿಗೆ ಉತ್ತರವನ್ನು ಅವರಿಂದ ಬಯಸುವುದಿಲ್ಲ.

ಉಪಾಧ್ಯಕ್ಷರು : ಅವರಿಂದ ಏನು ಬಯಸುತ್ತೀರಿ ಅದನ್ನು ಹೇಳಿಬಿಡಿ.

ಶ್ರೀ ಹೆಚ್. ಏಕಾಂತಯ್ಯ : ಅವರಿಂದ ನಾನು ಏನು ಬಯಸುತ್ತೇನೆ ಎಂದರೆ ಇಂತಹ ಗಂಭೀರವಾದ ಆರೋಪಗಳನ್ನು ಮಾಡಿದಾಗ ರಾಜ್ಯ ಸರ್ಕಾರದವರು ಯಾವುದೇ ಕ್ರಮ ತೆಗೆದುಕೊಳ್ಳದೇ ಇದ್ದರೆ ಆಗ ನಾನು ನೇರವಾಗಿ ಸಿಬಿಐಗೆ ಬರೆಯಬಹುದಿತ್ತು. ಸಿಬಿಐಗೆ ಬರೆದರೆ, ಸಿಬಿಐನವರು ನಿಮಗೆ ಕೇಳಿದರೆ ಅವರಿಗೆ ಅಧಿಕಾರ ಕೊಡುತ್ತೇವೆ ಎಂಬ ಮಾತನ್ನು ಹೇಳಿದ್ದೀರಿ. ಹಾಗಿದ್ದರೆ ತಾವು ಇವತ್ತಿನ ದಿವಸ 5.8.91ರಂದು ಆದೇಶವನ್ನು ಹೊರಡಿಸಿದ್ದೀರಲ್ಲ, ಇವೆಲ್ಲವನ್ನೂ ಕೇಂದ್ರ ಸರ್ಕಾರ ನಿಮಗೆ ಕೇಳಿತ್ತೇ? I want you to place the records on the table. In anticipation I am raising certain questions.

ಶ್ರೀ ಧರ್ಮಸಿಂಗ್ : ನಾನು ಉತ್ತರ ಕೊಡುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ : ತಾವು 5.8.91ನೇ ತಾರೀಖಿನ ದಿವಸ ನೋಟಿಫಿಕೇಶನ್ ಹೊರಡಿಸಿದ್ದೀರಿ. ಕೆಲವು ಅಪರಾಧಗಳ ಬಗ್ಗೆ ಕೆಲವು ವಿಧೇಯಕಗಳ ಅಡಿಯಲ್ಲಿ ಯಾವ ಅಪರಾಧಗಳು ಬರುತ್ತವೆ, ಈ ಅಪರಾಧಗಳ ಬಗ್ಗೆ ತನಿಖೆ ಮಾಡುವುದಕ್ಕೆ ತಾವು ಸಮ್ಮತಿಯನ್ನು ಕೊಟ್ಟಿದ್ದೀರಿ. ಆದರೆ ನಾನು ಏನು ಹೇಳುತ್ತಿದ್ದೇನೆ ಎಂದರೆ ಯಾವ ಒಂದು ನೋಟಿಫಿಕೇಶನ್ ಅನ್ನು under Section 3 of Delhi Special Police Establishment Act 1946. ಕೇಂದ್ರ ಸರ್ಕಾರದಿಂದ ಆಗಬೇಕಾಗಿತ್ತು. ಅದರ ವಿವರ ತಮ್ಮ ಹತ್ತಿರ ಇಲ್ಲ ಎಂದಾಗ ತಾವು ಹೇಗೆ ಸಮ್ಮತಿಯನ್ನು ಕೊಡುವುದಕ್ಕೆ ಸಾಧ್ಯ ಆಗುತ್ತದೆ ಮಾನ್ಯ ಗೃಹ ಸಚಿವರೇ? ಇದು ಸರ್ಕಾರ ನಡೆಸುವಂತಹ ರೀತಿಯೇ?

ಶ್ರೀ ಧರ್ಮಸಿಂಗ್ : ನೀವು ಓದಿ.

ಶ್ರೀ ಹೆಚ್. ಏಕಾಂತಯ್ಯ : ನಾನು ಓದುತ್ತೇನೆ. The Central Govt. shall notify.

Sri DHARMASINGH : I will tell about 1946. ಒಂದೊಂದಾಗಿ ಹೇಳುತ್ತೇನೆ. ಸೆಕ್ಷನ್ 3, ಸೆಕ್ಷನ್ 5, ಸೆಕ್ಷನ್ 6, ಈ ಎಲ್ಲವನ್ನೂ ಹೇಳುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ : ನಾನು ಹೇಳಿದಂತಹ ಅಂಶ ಏನು ಅಂದರೆ ಈ ಒಂದು Delhi Special Police Establishment ಯಾವುದನ್ನು ಕ್ಲಾಸಿಫೈ

ಮಾಡಿದ್ದಾರೆ, ವರ್ಗೀಕರಣ ಮಾಡಿದ್ದಾರೆ. ಮೂರನೇ ವಿಧಿ ಪ್ರಕಾರ ಅದರ ಬಗ್ಗೆ ಹೇಳುತ್ತಿದ್ದೇನೆ. ಯಾವ ವಿಧೇಯಕದಲ್ಲಿ ಯಾವ ಅಪರಾಧವನ್ನು ಅವರು ನೋಟಿಫೈ ಮಾಡುತ್ತಾರೆ. ಅದಕ್ಕೆ ಸಮ್ಮತಿಯನ್ನು ಕೊಡುವಂತಹ ಅಧಿಕಾರ ಮಾತ್ರ ತಮಗೆ ಇದೆ.

ತಾವು ಹೇಳುವಂತೆ ಯಾವುದು ಬೇಕಾದರೂ ಸಿಬಿಐಗೆ ಅಧಿಕಾರ ಕೊಡುತ್ತೇವೆ ಅಂದರೆ ನಿಮಗೆ ಎಲ್ಲಿದೆ ಆ ಅಧಿಕಾರ? ನೀವು ಯಾವ ಅಪರಾಧಗಳ ಬಗ್ಗೆ ಸಮ್ಮತಿ ಕೊಡಬಹುದು ಅಂದರೆ ತನಿಖೆ ಮಾಡುವುದಕ್ಕೆ, ಯಾವ ಅಪರಾಧಗಳ ಬಗ್ಗೆ ಈಗಾಗಲೇ ಕೇಂದ್ರ ಸರಕಾರವು ನೋಟಿಫೈ ಮಾಡಿದೆ, ಅದರ ಬಗ್ಗೆ ಮಾತ್ರ ನೀವು ನಿಮ್ಮ ಸಮ್ಮತಿಯನ್ನು ಕೊಡುವ ಅಧಿಕಾರ ನಿಮಗೆ ಇದೆ ಆದ್ದರಿಂದ ಅದೇ ತಮ್ಮಲ್ಲಿ ಇಲ್ಲ ಅಂದರೆ ಹೇಗೆ 5-8-91ರ ಆದೇಶವನ್ನು ಹೊರಡಿಸಿದ್ದೀರಿ? ನನ್ನ ಮುಖ್ಯವಾದಂಥ ಆರೋಪ ಏನೆಂದರೆ, ಗಂಭೀರವಾದಂಥ, ಭ್ರಷ್ಟಾಚಾರದ ಆರೋಪಗಳನ್ನು ನಾವು ಸರಕಾರದ ಮೇಲೆ ಮತ್ತು ಸರಕಾರದ ಹಿರಿಯ ಅಧಿಕಾರಿಗಳ ಮೇಲೆ ಹೊರಿಸಿದ್ದಾಗ, ದರ ಬಗ್ಗೆ ವಿಚಾರಣೆ ಮಾಡುವಂಥ ಸೌಜನ್ಯವು ಸರ್ಕಾರಕ್ಕೆ ಇಲ್ಲದಿರುವುದರಿಂದ, ನಾವು ಬೇರೆ ಗತಿಇಲ್ಲದೆ ಸಿಬಿಐಗೆ ಹೋಗಬಹುದಾಗಿತ್ತು. ಆದರೆ ಇವೊತ್ತಿನ ದಿವಸ ಏನಾಗಿದೆ? ಸರಕಾರವು ಉದ್ದೇಶ ಪೂರ್ವಕವಾಗಿ ತಾನು ಅದಕ್ಕೆ ಕೊಟ್ಟಿದ್ದ ಸಮ್ಮತಿಯನ್ನು ಹಿಂದೆಗೆದುಕೊಂಡು, ತಮ್ಮ ಮೇಲಿರುವಂಥ ಆರೋಪವನ್ನು ಮುಚ್ಚಿಡುವಂಥ ಪ್ರಯತ್ನವನ್ನು ಮಾಡುತ್ತಾ ಇದೆ. ನಾವು ರಾಜಕೀಯ ಕಾರಣಕ್ಕೋಸ್ಕರ ಅಪಾದಿಸಿದ್ದರೆ ನೀವು ಅದನ್ನು ಹೇಳಿ, ನಮಗೆ ಕೇಂದ್ರ ಸರಕಾರದ ಮೇಲೆ ನಂಬಿಕೆ ಇಲ್ಲ, ಅವರು ರಾಜಕೀಯಕ್ಕಾಗಿ ಇದನ್ನು ದುರುಪಯೋಗ ಮಾಡಿಕೊಳ್ಳಬಹುದು ಎಂದು ನೀವು ವಾಪಸ್ ತೆಗೆದುಕೊಂಡಿದ್ದರೆ ಅದಕ್ಕೆ ನನ್ನ ಅಭ್ಯಂತರವಿಲ್ಲ. ಅನೇಕ ಸಂದರ್ಭಗಳಲ್ಲಿ ಹಿಂದೆ ರಾಜ್ಯಸರಕಾರಗಳು ಆಯಾಯ ಮುಖ್ಯಮಂತ್ರಿಗಳು ಇದ್ದಂಥ ಕಾಲದಲ್ಲಿ ಬೇರೆ ಬೇರೆ ಸರಕಾರ ಅಲ್ಲಿದ್ದಾಗ, ಅಥವಾ ಕೇಂದ್ರ ಸರಕಾರದಲ್ಲಿ ನಂಬಿಕೆ ಇಲ್ಲದಂಥ ಸಂದರ್ಭದಲ್ಲಿ ಕೊಟ್ಟಿದಂಥ ಸಮ್ಮತಿಯನ್ನು ಹಿಂದಕ್ಕೆ ತೆಗೆದುಕೊಂಡಿವೆ. ಆದ್ದರಿಂದ ನಾನು ತಮ್ಮನ್ನು ಎರಡು ಪ್ರಶ್ನೆಗಳನ್ನು ಮಾತ್ರ ಕೇಳಬಯಸುತ್ತೇನೆ. ಎಲ್ಲಕ್ಕಿಂತಲೂ ಹೆಚ್ಚಿಗೆ ಈ ಪ್ರಶ್ನೆಗೆ ಉತ್ತರಿಸಬೇಕಾಗಿದೆ, ತಾವು ಹೇಳಬಹುದು, ಈ ಒಂದು ಗಂಭೀರವಾದಂಥ ಭ್ರಷ್ಟಾಚಾರದ ಆರೋಪವನ್ನು ಮುಚ್ಚಿಡುವಂಥ, ಉದ್ದೇಶದಿಂದ, ತಾವು ಈ ಸಮ್ಮತಿಯನ್ನು ವಾಪಸ್ ತೆಗೆದುಕೊಂಡಿದ್ದೇವೆ ಎಂಬ ಮಾತನ್ನು ಹೇಳಿ, ಇಲ್ಲ, ಎಂದಾದರೆ, ನಮಗೆ ಕೇಂದ್ರಸರಕಾರದ ಸಿಬಿಐ ನಲ್ಲಿ ನಂಬಿಕೆ ಇಲ್ಲ, ಆದ್ದರಿಂದ ಕೇಂದ್ರ ಸರಕಾರಕ್ಕೆ ಈ ಬಗ್ಗೆ ಕೊಟ್ಟಿದ್ದಂಥ ಸಮ್ಮತಿಯನ್ನು ವಾಪಸ್ ತೆಗೆದುಕೊಂಡಿದ್ದೇವೆ ಎಂಬ ಮಾತನ್ನು ಹೇಳಬೇಕು. ಈ ಎರಡೂ ಕಾರಣಗಳು ನಿಜ ಎಂದು ನನಗನ್ನಿಸುತ್ತದೆ. ಏಕೆಂದರೆ ಇತ್ತೀಚಿನ ದಿವಸಗಳಲ್ಲಿ ಸರಕಾರದ ಮೇಲೆ ಗಂಭೀರವಾದಂಥ ಆರೋಪಗಳು ಏನಿವೆ, ಆ ಆರೋಪಗಳ ಬಗ್ಗೆ ಕೇಂದ್ರ ಸರಕಾರವು ಏನಾದರೂ ತನಿಖೆ ಮಾಡುವುದಕ್ಕೆ ಪ್ರಯತ್ನ ಮಾಡಿದರೆ, ಇಲ್ಲಿರುವಂಥ ಹಿರಿಯ ಅಧಿಕಾರಿಗಳ ಬಗ್ಗೆ, ಸಾರ್ವಜನಿಕ ವ್ಯಕ್ತಿಗಳ ಬಗ್ಗೆ ತನಿಖೆ ಮಾಡಿ ಅದರಿಂದ ಕಳವಳ ಅಥವಾ ಕಿರಿಕಿರಿ ಆಗಬಹುದೆಂದು ಸರಕಾರ ಸಮ್ಮತಿಯನ್ನು ವಾಪಸ್ ತೆಗೆದುಕೊಂಡಿದೆ, ಇದು ಸದುದ್ದೇಶದಿಂದ ಕೂಡಿದ್ದಲ್ಲ, ಇದು ದುರುದ್ದೇಶದಿಂದ ಕೂಡಿದ್ದುದು ಎಂಬ ಮಾತನ್ನು ನಾನು ಹೇಳಬಯಸುತ್ತೇನೆ. ಇನ್ನೂ ಅನೇಕ ಆರೋಪಗಳನ್ನು ಈ ದಿಸೆಯಲ್ಲಿ ನಾನು ಪ್ರಸ್ತಾಪ ಮಾಡುವುದಕ್ಕೆ ಇಚ್ಛೆಪಡುವುದಿಲ್ಲ. ಇನ್ನೂ ಗಂಭೀರವಾದಂಥ ಕೋಟ್ಯಾಂತರ ರೂಪಾಯಿಗಳ

ವ್ಯವಹಾರಕ್ಕೆ ಸಂಬಂಧಪಟ್ಟಂಥ ಆರೋಪಗಳನ್ನು ಈಗಾಗಲೇ ನಾವು ಮಾಡಿದ್ದೇವೆ, ಆದ್ದರಿಂದ ಈ ಎಲ್ಲಾ ಆರೋಪಗಳನ್ನು ಸಿಬಿಐ ನಿಂದ ತನಿಖೆ ಮಾಡಿಸಲಿಕ್ಕೆ ನಾವು ಪ್ರಯತ್ನಪಟ್ಟರೂ ಸಹ ಸರಕಾರದ ಈ ಒಂದು ಈ ಆದೇಶವನ್ನು ಹಿಂತೆಗೆದುಕೊಂಡಿರುವುದರಿಂದ ಸಾಧ್ಯವಾಗಲಿಲ್ಲ. ಆದ್ದರಿಂದ ನಾನು ತಮ್ಮ ಮೂಲಕ ಈ ಸದನದ ಮಾನ್ಯ ಸದಸ್ಯರನ್ನು ಕೇಳುವುದು ಇಷ್ಟೇ, ನಿಜವಾಗಿಯೂ ಯಾವುದೇ ಸರಕಾರ ಇರಲಿ, ಯಾವುದೇ ವ್ಯಕ್ತಿಯಾಗಿರಲಿ, ಸಾರ್ವಜನಿಕ ಸೇವಕ ಎಂದು ಏನು ನಾವು ಹೇಳುತ್ತೇವೆ. ಅಂದರೆ ಇಂಡಿಯನ್ ಪಿನಲ್‌ಕೋಡ್, ಅವರು ಮುಖ್ಯಮಂತ್ರಿಯಾಗಿರಬಹುದು, ಮಂತ್ರಿಗಳೇ ಆಗಿರಬಹುದು, ಹಿರಿಯ ಅಧಿಕಾರಿಗಳೇ ಆಗಿರಬಹುದು. ಇಂಥವರ ಮೇಲೆ ಗಂಭೀರವಾದಂಥ ಆರೋಪಗಳು ಬಂದಂಥ ಸಂದರ್ಭದಲ್ಲಿ ಸಿಬಿಐಗೆ ತನಿಖೆ ಮಾಡುವಂಥ ಅಧಿಕಾರವನ್ನು ನಿಮಗೆ ವಿಶ್ವಾಸ ಇದ್ದರೆ ಕೊಡಿ. ಆ ಬಗ್ಗೆ ನಾನೇನೂ ಒತ್ತಾಯ ಮಾಡುತ್ತಾ ಇಲ್ಲ. ಇವೊತ್ತಿನ ದಿವಸ ನಿಮಗೆ ಕೇಂದ್ರ ಸರಕಾರದ ಮೇಲೆ ವಿಶ್ವಾಸ ಇದೆ, ಆದ್ದರಿಂದ ಬ್ಲಾಂಕೆಟ್ ಪರ್ಮಿಶನ್ ಕೊಟ್ಟಿದ್ದೇವೆ ಎಂದು ಏನು ಹೇಳಿದ್ದೀರಿ, ಅದು it should not be a blanket lie.

ಇವೊತ್ತಿನ ದಿವಸ ಕೊಟ್ಟಿದ್ದಂಥ ಆದೇಶದಲ್ಲಿ ಒಂದೇ ಅಲ್ಲ prevention of corruption Act and Industrial Regulation and Development Act. ಪ್ರಕಾರ ತಾವು ಹಿಂದೆ ಕೊಟ್ಟಿದ್ದೀರಿ ಅದನ್ನು ಏತಕ್ಕೆ ವಾಪಸ್ ತೆಗೆದುಕೊಂಡಿರಿ ಸ್ವಾಮಿ? ಇಂಡಿಯನ್ ಪೀನಲ್‌ಕೋಡ್ ಪ್ರಕಾರ, 161ರಿಂದ 169ರ ವರೆಗಿನ ವಿಧಿಗಳ ಬಗ್ಗೆ ಏನು ಅಪರಾಧಗಳು ಇವೆ ಅದಕ್ಕೆ ಸಂಬಂಧಿಸಿದಂತೆ ಕೊಟ್ಟಿರುವಂಥ ಸಮ್ಮತಿಯನ್ನು ಕೂಡ ತಾವು ವಾಪಸ್ ತೆಗೆದುಕೊಂಡಿದ್ದೀರಿ. ಇದರ ಹಿನ್ನಲೆಯನ್ನು ನಾನು ತಿಳಿಯ ಬಯಸುತ್ತೇನೆ, ಇದಕ್ಕೆ ವಿವರವಾದಂಥ ಉತ್ತರವನ್ನು ಸರಕಾರದವರು ಕೊಡಬೇಕೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಮತ್ತು ಈ ಸದನದ ಎಲ್ಲಾ ಸದಸ್ಯರಿಗೆ ಪಕ್ಷಾತೀತವಾಗಿ ನಾನು ಕೇಳುತ್ತೇನೆ, ನಿಜವಾಗಿಯೂ ಸಹ ಈ ರಾಜ್ಯದಲ್ಲಿ ಭ್ರಷ್ಟತೆಯನ್ನು ಕಡಿಮೆ ಮಾಡಬೇಕಾದರೆ, ಕನಿಷ್ಠಪಕ್ಷ ಕಡಿಮೆ ಮಾಡಬೇಕಾದರೆ, ಹಾಗೂ ದಕ್ಷತೆಯನ್ನು ಹೆಚ್ಚಿಸಲಿಕ್ಕೆ, ವಿಂಬ ಇಲ್ಲದೆ ಸರಕಾರದ ಕಾರ್ಯ ಜರುಗಬೇಕಾದರೆ, ಸರಕಾರದ ಅಧಿಕಾರಿಗಳು ಮತ್ತು ಸಾರ್ವಜನಿಕ ವ್ಯಕ್ತಿಗಳು ಏನು ಅಧಿಕಾರದಲ್ಲಿ ಇದ್ದಾರೆ, ಅವರ ಹೊಣೆಗಾರಿಕೆಯಿಂದ ವರ್ತನೆ ಮಾಡಬೇಕಾದರೆ ಅಂಥ ಎಲ್ಲಾ ಸಂದರ್ಭದಲ್ಲಿಯೂ ಕೂಡ ನ್ಯಾಯವಾದ ವಿಚಾರಣೆಯಾಗಬೇಕಾದುದು ಅತ್ಯಂತ ಅವಶ್ಯಕ ಇದೆ, ಆ ವಿಚಾರದಲ್ಲಿ ತಮಗೂ ಸಹ ನಾನು ಹೇಳುವುದು ಇಷ್ಟೇ ತಾವುಗಳು ನಿಜವಾಗಿಯೂ ಶುದ್ಧವಾದಂಥ ಸರಕಾರ, ಭ್ರಷ್ಟಾಚಾರ ರಹಿತವಾದಂಥ ಆಡಳಿತ ವ್ಯವಸ್ಥೆ ಇರಬೇಕೆಂದಾದರೆ, ತಾವೇನು ಸಮ್ಮತಿಯನ್ನು ವಾಪಸ್ ತೆಗೆದುಕೊಂಡಿದ್ದೀರಿ, ಅದನ್ನು ವಾಪಸ್ ಅವರಿಗೆ ಕೊಡಬೇಕೆಂಬ ಮಾತನ್ನು ನಾನು ಹೇಳುತ್ತೇನೆ ವಂದನೆಗಳು.

ಶ್ರೀ ಪ್ರಭಾಕರ ಎಸ್. ರಾಣೆ (ಕಾರವಾರ) : ಸನ್ಮಾನ್ಯ ಸಭಾಧ್ಯಕ್ಷಿಣಿಯವರೆ, ಈ ಸದನದ ಹಿರಿಯ ಸದಸ್ಯರಾದಂಥ ಶ್ರೀ ಕೆ.ಹೆಚ್. ರಂಗನಾಥ್‌ರವರು ಪ್ರಸ್ತಾಪ ಮಾಡಿದಂಥ ಸಾರ್ವಜನಿಕ ಮಹತ್ವವುಳ್ಳ ವಿಷಯದ ಕುರಿತು ಮಾನ್ಯ ಗೃಹಸಚಿವರು ನೀಡಿದಂಥ ಹೇಳಿಕೆಯ ಬಗ್ಗೆ ಮತ್ತು ಅದರಿಂದ ಉದ್ಭವವಾದಂಥ ಕೆಲವು ವಿಷಯಗಳ ಬಗ್ಗೆ ನನ್ನ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

12.35 ಪಿ.ಎಂ.

ಮಾನ್ಯ ಗೃಹಸಚಿವರು ನೀಡಿದ ಹೇಳಿಕೆ ನಮ್ಮ ಮುಂದಿದೆ. ಅದು ಹೇಗಿದೆ ಎಂದರೆ ಸದಸ್ಯರಿಗೆ ಅಥವಾ ಈ ರಾಜ್ಯದ ಜನತೆಗೆ ಬೇಕಾದ್ದನ್ನು ಬಿಟ್ಟು ಬೇಡವಾದುದನ್ನೆಲ್ಲ ಹೇಳಿದ್ದಾರೆ. ಈ ಹೇಳಿಕೆಯ ಶೈಲಿ ನೋಡಿದರೆ ಇದು ಗೃಹಸಚಿವರು ಶೈಲಿಯಲ್ಲವೆಂದು ನನಗೆ ಸಂಶಯ ಬರತ್ತದೆ. ಮಾನ್ಯ ಗೃಹಸಚಿವರು ನೇರ ನುಡಿಯುವವರು. ಅವರು ಯಾವುದನ್ನೂ ಸುತ್ತಿಬಳಸಿ ಹೇಳುವಂತಹವರಲ್ಲ,ಯಾವುದನ್ನೂ ಮುಚ್ಚಿಕೊಳ್ಳಲಿಕ್ಕೆ ಪ್ರಯತ್ನಮಾಡುವವರಲ್ಲ, ಆದರೆ ದುರ್ದೈವ ಇಂದು ಯಾವುದೋ ಒತ್ತಡಕ್ಕೆ ಬಲಿಯಾಗಿ ಈ ಹೇಳಿಕೆ ಕೊಟ್ಟಿದ್ದಾರೇನೋ ಎಂಬ ಸಂಶಯ ಬರುತ್ತಿದೆ. ಅದಕ್ಕೆ ಕಾರಣವೂ ಇದೆ. ಈ ಹೇಳಿಕೆ ಪ್ರಕಾರ ಅವರು ಒಂದು ಮಾತು ಹೇಳಿದ್ದಾರೆ : ಏನೆಂದರೆ "Our Government considers it proper to give the Central Investigating Agencies a wide range of powers to investigate all types of offences under 25 Acts." ಎಂದು ಈ ಹೇಳಿಕೆ ಬಗ್ಗೆ ನಮಗುಂಟಾದ ಗೊಂದಲವಾಗಿರಲಿ ಅಥವಾ ಸಂಶಯವಾಗಿರಲಿ ಏನು ಎಂದರೆ ತಾವು ಏನು 27-7-91 ಮತ್ತು 5-8-91ರ ದಿನ ಹೊರಡಿಸಿದ ರಡು ನೋಟಿಫಿಕೇಶನ್‌ಗಳು ಏನಿವೆ ಅವುಗಳ ಉದ್ದೇಶವೇನು? 27-7-91ರಂದು ಹೊರಡಿಸಿದ ನೋಟಿಫಿಕೇಶನ್‌ನಲ್ಲಿ ಯಾವ ವಿಷಯ ಬಿಟ್ಟಿದ್ದಾರೆಂದರೆ ದೆಹಲಿ ಸ್ಪೆಷಲ್ ಪೋಲಿಸ್ ಎಸ್ಟಾಬ್ಲಿಶ್‌ಮೆಂಟ್ ಪ್ರಕಾರ ಏನು ಸಿಬಿಐನವರಿಗೆ ಒಂದು ಅಧಿಕಾರವನ್ನು ಈ ರಾಜ್ಯದಲ್ಲಿ ತನಿಖೆ ಮಾಡಲು ನೀಡಲಾಗಿತ್ತು ಅದು ಯಾವ ಕಾನೂನು ಕೆಳಗೆಂದರೆ "Offences under prevention of Corruption Act, 1938 and No.49 of 1988". ಮತ್ತು ಇನ್ನೊಂದು " Attempts, abetments and conspiracica in relation to or in connection with one or more of the offences mentioned above and any other offences or offences committed in the course of the same transaction". ಈ ಎರಡು ಕಾನೂನಿನಡಿಯಲ್ಲಿ ಈ ಮೊದಲು ರಾಜ್ಯದಲ್ಲಿ ಸಿಬಿಐಗೆ ತನಿಖೆ ಮಾಡಲಿಕ್ಕೆ ಅಧಿಕಾರವಿತ್ತು ಅದನ್ನು ಇವರು ಹೊರಡಿಸಿದ ಈ ನೋಟಿಫಿಕೇಷನ್ ಮೂಲಕ ಕಸಿದುಕೊಳ್ಳಲಾಗಿದೆ. ಇದಕ್ಕೆ ಕಾರಣವೇನು? ಅವರು ಹೇಳಿಕೆ ಮಾಡುವಾಗ ಏನು ಹೇಳಿದರೆಂದರೆ - The Terrorists and Disruptive Activities (Prevention) Act, 1987 and the Unlawful Activities (Prevention) Act, 1967, - ಈ ಎರಡು ಆಕ್ಟ್ ಕೆಳಗೆ ಸಿಬಿಐನವರಿಗೆ ತನಿಖೆ ಮಾಡಲು ಅಧಿಕಾರವಿರಲಿಲ್ಲ, ಆದುದರಿಂದ ನಾವು ಅವರ ಅಧಿಕಾರವನ್ನು ಹೆಚ್ಚು ಮಾಡಲಿಕ್ಕೆ ಈ ನೋಟಿಫಿಕೇಶನ್ ಹೊರಡಿಸಿದೆವು ಎಂದು. ಆದರೆ ಇವತ್ತು ಯಾವುದೇ ಸೌಲಭ್ಯ ಅಥವಾ ಅಧಿಕಾರದ ವಿಸ್ತರಣೆ ಮಾಡುವಾಗ ಇದ್ದಂಥ ಅಧಿಕಾರವನ್ನು ಮೊಟಕುಮಾಡುವ ಪ್ರಮೇಯ ಬರುವುದಿಲ್ಲ, ಇಂದು ಯಾವುದೇ ಮನೆಯಲ್ಲಿ ಕೆಲವು ಸೌಕರ್ಯಗಳಿಲ್ಲವೆಂದು ಅವನ್ನು ಒದಗಿಸಬೇಕೋ ಅಥವಾ ಆ ಮನೆಯನ್ನೇ ಕೆಡವಿ ಇನ್ನು ಮೇಲೆ ನಿಮಗೆ ಹೆಚ್ಚಿನ ಸೌಕರ್ಯ ಕೊಡ್ತೀವಿ ಅಂದರೆ ಎಷ್ಟು ಹಾಸ್ಯಾಸ್ಪದವಾಗುತ್ತದೆ ಮತ್ತು ಅದರ ಹಿಂದಿನ ಉದ್ದೇಶವೇನು ಎನ್ನುವುದನ್ನು ಜನ ತಿಳಿದುಕೊಳ್ಳುತ್ತಾರೆಂಬುದನ್ನು ಸರ್ಕಾರ ವಿಚಾರ ಮಾಡಬೇಕಾಗುತ್ತದೆ. ಈ ಸಿ.ಬಿ.ಐ.ನ ಅಧಿಕಾರವನ್ನು ಮೊಟಕು ಮಾಡುವುದು ಸಣ್ಣ ವಿಚಾರವೇನಲ್ಲ. ಇದು ಅತ್ಯಂತ ಮಹತ್ವದ ವಿಷಯ ಅದೂ ಸಹ ಕೇಂದ್ರದಲ್ಲಿ ನಮ್ಮ ಪಕ್ಷದ ಸರ್ಕಾರವಿರುವಾಗ ಅದರ ಮೇಲೆ ನಮ್ಮ ಈ ನಡವಳಿಕೆಯಿಂದ ಯಾವ ಪರಿಣಾಮವಾಗುತ್ತದೆಂಬುದನ್ನು ವಿಚಾರ ಮಾಡಬೇಕಾಗಿತ್ತು. ಇಂತಹ ಒಂದು ಮಹತ್ವದ ವಿಚಾರವನ್ನು ಸಾರಾಸಗಟಾಗಿ ಏಕಾಏಕಿಯಾಗಿ

ಯಾರಿಗೂ ತಿಳಿಸದೆ ಮಾಡುವುದರ ಹಿಂದಿನ ಉದ್ದೇಶವೇನೆಂದು ನಾವು ಕೇಳಬೇಕಾಗುತ್ತದೆ.

ಇಂಥ ಮಹತ್ವದ ವಿಷಯವನ್ನು ಸಂಪುಟದ ಸಭೆಯಲ್ಲಿ ಚರ್ಚೆ ಮಾಡಬೇಕಾಗಿತ್ತು. ಆದರೆ ಇದರ ಬಗ್ಗೆ ಚರ್ಚೆಯನ್ನು ಮಾಡಿದ್ದಾರೋ ಇಲ್ಲವೋ ಎಂದು ಆ ಹೇಳಿಕೆಯಲ್ಲಿ ಹೇಳಿಲ್ಲ. ಆದರೆ ಸಂಪುಟದ ಹಿರಿಯ ಸಚಿವರಾದಂಥ ಕೆ.ಹೆಚ್. ಪಾಟೀಲ್‌ರವರು ಒಂದು ಪತ್ರವನ್ನು ಮಾನ್ಯ ಮುಖ್ಯ ಮಂತ್ರಿಗಳಿಗೆ ಬರೆದಿದ್ದುದು ಪತ್ರಿಕೆಯಲ್ಲಿ ಪ್ರಕಟವಾಗಿದೆ. ಮಾನ್ಯ ಗೃಹ ಸಚಿವರು ಏನು ಹೇಳಿಕೆಯನ್ನು ಕೊಟ್ಟಿದ್ದಾರೆ, ಅದು ಸಮಾಧಾನಕರವಾಗಿಲ್ಲ. ಸಿ.ಬಿ.ಐ. ಕಾರ್ಯ ವ್ಯಾಪ್ತಿಯ ಬಗ್ಗೆ ಸಂಪುಟದಲ್ಲಿ ಚರ್ಚಿಸಿಯೇ ಇಲ್ಲ ಎಂದು ಹೇಳಿ ಅವರು ಹೇಳಿಕೆಯನ್ನು ಕೊಟ್ಟಿದ್ದಾರೆ. ಒಬ್ಬ ಹಿರಿಯ ಸಚಿವರು ಈ ರೀತಿ ಆಕ್ಷೇಪಣೆಯನ್ನು ಮಾಡುವಾಗ ಇವತ್ತಿನವರೆಗೂ ಸರ್ಕಾರ ಇದರ ಬಗ್ಗೆ ಮೌನವನ್ನು ತಾಳಿದೆ. ಇದರಲ್ಲಿ ಯಾವುದು ಸರಿ, ಯಾವುದು ತಪ್ಪು ಎಂಬುದನ್ನು ತಿಳಿದುಕೊಳ್ಳಬೇಕು. ಒಂದು ವೇಳೆ ಹಿರಿಯ ಸಚಿವರಾದಂಥ ಪಾಟೀಲರು ತಪ್ಪಾಗಿ ಹೇಳಿದ್ದಾರೆಯೇ? ಹಾಗೆ ಅವರು ಏನಾದರೂ ತಪ್ಪಾಗಿ ಹೇಳಿದ್ದರೆ ಅವರ ಮೇಲೆ ಕ್ರಮವನ್ನು ಸರ್ಕಾರ ಕೈಗೊಂಡಿದೆಯೇ? ಇದರ ಬಗ್ಗೆ ಇಡೀ ರಾಜ್ಯದ ಜನರು ಒಂದು ತರಹದ ಗೊಂದಲದಲ್ಲಿ ಬಿದ್ದಿದ್ದಾರೆ. ಇವತ್ತು ಯಾರ ಮೇಲೆ ಸಂಶಯ ಬಂದಿದೆ? ಸರ್ಕಾರದ ಜವಾಬ್ದಾರಿಯನ್ನು ಹೊತ್ತಂಥ ಮಾನ್ಯ ಮುಖ್ಯ ಮಂತ್ರಿಗಳ ಮೇಲೋ ಅಥವಾ ಕೆ.ಹೆಚ್. ಪಾಟೀಲರ ಮೇಲೋ ಅಥವಾ ಗೃಹ ಸಚಿವರ ಮೇಲೋ ಎಂಬ ರೀತಿ ಇಡೀ ರಾಜ್ಯವನ್ನು ಒಂದು ಗೊಂದಲಮಯವಾದಂಥ ಪರಿಸ್ಥಿತಿಗೆ ನೂಕುವಂಥ ಸಂದರ್ಭ ಇವತ್ತು ಸರ್ಕಾರಕ್ಕೆ ಏತಕ್ಕೆ ಬಂದಿದೆ ಎಂದು ನಾನು ಇಲ್ಲಿ ಕೇಳಬೇಕಾಗುತ್ತದೆ. ಕೆ.ಹೆಚ್.ಪಾಟೀಲರು ಕೇವಲ ಸಂಪುಟದ ಸಭೆಯಲ್ಲಿ ಚರ್ಚೆ ಮಾಡಿಲ್ಲ ಎಂದು ಅಷ್ಟೇ ಹೇಳಿಲ್ಲ, ಸರ್ಕಾರದ ವಿಶ್ವಾಸಾರ್ಹತೆಯನ್ನು ಕೂಡ ಪ್ರಶ್ನಿಸಿದ್ದಾರೆ. ಈ ರೀತಿ ಸರ್ಕಾರದ ವಿಶ್ವಾಸಾರ್ಹತೆಯನ್ನು ಹಾಗೂ ಜನರು ಹೊಂದಿರುವಂಥ ವಿಶ್ವಾಸಾರ್ಹತೆಯನ್ನು ಪ್ರಶ್ನಿಸಿರುವಂಥ ಸಂದರ್ಭದಲ್ಲಿ ಅವರ ಮೇಲೆ ಯಾವುದೇ ಕ್ರಮವನ್ನು ಕೈಗೊಳ್ಳದಿದ್ದರೆ ಅದು ಸರ್ಕಾರದ ಬೇಜವಾಬ್ದಾರಿತನದ ವರ್ತನೆಯಾಗುವುದಿಲ್ಲವೇ? ಅಥವಾ ಅವರು ಹೇಳಿದ್ದೇ ಸರಿ ಎಂದು ಹೇಳಿ ಆಗುವುದಾದರೆ ಸರ್ಕಾರ ಇದರ ಬಗ್ಗೆ ಯಾವ ಪ್ರಾಯಶ್ಚಿತ್ತವನ್ನು ಪಡಬೇಕಾಗುತ್ತದೆ ಎನ್ನುವುದನ್ನು ಸರ್ಕಾರ ಸ್ಪಷ್ಟಪಡಿಸಬೇಡವೇ? ಈ ಎರಡು ವಿಷಯಗಳ ಬಗ್ಗೆ ನಮಗೆ ಸಚಿವರಿಂದ ಸ್ಪಷ್ಟೀಕರಣ ಬೇಕಾಗಿದೆ. ಇಷ್ಟೇ ಅಲ್ಲ, ಇವತ್ತು ಈ ಸಿ.ಬಿ.ಐ. ಅಧಿಕಾರವನ್ನು ಹಿಂತೆಗೆದುಕೊಂಡಿರತಕ್ಕಂಥ ಸಂದರ್ಭ ಯಾವುದು ಇದೆ, ಯಾವುದೇ ಒಂದು ಕ್ರಮ, ನಾವು ಕೈಗೊಂಡ ಕ್ರಮ ಅದರ ಹಿನ್ನೆಲೆಯ ಅಡಿಯಲ್ಲಿ ಅದಕ್ಕೆ ಇರುವಂಥ ಮಹತ್ವವನ್ನು ಅಥವಾ ಅದಕ್ಕೆ ಇರುವಂಥ ಒಂದು ತಾತ್ಪರ್ಯವನ್ನು ನಾವು ವಿಚಾರ ಮಾಡಬೇಕಾಗುತ್ತದೆ. ಯಾವ ಸಂದರ್ಭದಲ್ಲಿ ಇದನ್ನು ಹಿಂತೆಗೆದುಕೊಂಡಿದ್ದಾರೆ? ಸರ್ಕಾರದಲ್ಲಿ ತುಂಬಿ ತುಳುಕುತ್ತಿರುವಂಥ ಭ್ರಷ್ಟಾಚಾರದ ಬಗ್ಗೆ ಎಲ್ಲಾ ಕಡೆಗೂ ಮಾತು ಕೇಳಿ ಬರುತ್ತಿದೆ. ಸದನದ ಒಳಗೆ, ಸದನದ ಹೊರಗಡೆ ಇಡೀ ದೇಶದಲ್ಲಿಯೇ ಈ ಬಗ್ಗೆ ಪ್ರಸ್ತಾಪವಾಗಿದೆ. ಅನೇಕ ಹಗರಣಗಳು ಇವತ್ತು ಬೆಳಕಿಗೆ ಬಂದಿವೆ. ಸರ್ಕಾರದಲ್ಲಿ ಅನೇಕ ಹಗರಣಗಳು ಈ ಹಗರಣಗಳ ಬಗ್ಗೆ ಮತ್ತೆ ನಾನು ಇಲ್ಲಿ ಪ್ರಸ್ತಾಪ ಮಾಡಬೇಕಾದಂಥ ಅವಶ್ಯಕತೆ ಇಲ್ಲ. ಅದು ಗ್ರಾನೈಟ್ ಹಗರಣವಾಗಿರಬಹುದು ಅಥವಾ ಡಿಸ್ಟಿಲರಿ ಹಗರಣವಾಗಿರಬಹುದು ಅಥವಾ ಹೌಸಿಂಗ್ ಸೊಸೈಟಿಯ

ಹಗರಣವಾಗಿರಬಹುದು ಅಥವಾ ಭೂಮಿಯ ಮಂಜೂರಾತಿಯ ಹಗರಣವಾಗಿರಬಹುದು ಅಥವಾ ಅಕ್ವಿಜಿಷನ್ ಡಿ-ನೋಟೀಷ್ಯೆ ಮಾಡುವಂಥ ಹಗರಣವಾಗಿರಬಹುದು, ಇಂಥ ಸಂದರ್ಭದಲ್ಲಿ ಈ ಒಂದು ಸರ್ಕಾರದ ಕ್ರಮ ಸಂಶಯಕ್ಕೆ ಆಸ್ಪದಕೊಡುವುದಿಲ್ಲವೇ? ಈ ಎಲ್ಲಾ ಆರೋಪಗಳನ್ನು ಎದುರಿಸುವಂಥ ಸಂದರ್ಭದಲ್ಲಿ-ಸರ್ಕಾರ ತನ್ನ ಸಾಚಾತನವನ್ನು ಪ್ರದರ್ಶನ ಮಾಡಬೇಕಾಗಿದ್ದರೆ, ಸಿ.ಬಿ.ಐ. ಅಧಿಕಾರವನ್ನು ಹಿಂತೆಗೆದುಕೊಂಡಿರತಕ್ಕಂಥ ಈ ಕ್ರಮ ಅದಕ್ಕೆ ಅಡ್ಡಿ ಬರುವುದಿಲ್ಲವೇ ಎನ್ನುವುದನ್ನು ಸರ್ಕಾರ ಇದರ ಬಗ್ಗೆ ಸ್ಪಷ್ಟೀಕರಣ ನೀಡಬೇಕಾಗುತ್ತದೆ. ಈ ಸರ್ಕಾರದ ಸಾಚಾತನವನ್ನು ಪ್ರದರ್ಶನ ಮಾಡುವುದು ಬಿಟ್ಟು ಇವತ್ತು ಏನಾಗಿದೆ ಎಂದು ಹೇಳಿದರೆ ಸರ್ಕಾರ ಯಾವುದೋ ವಿಷಯವನ್ನು ಮುಚ್ಚುವುದಕ್ಕೆ ಪ್ರಯತ್ನವನ್ನು ಮಾಡುತ್ತಿದೆ ಎನ್ನತಕ್ಕಂಥ ಒಂದು ಸಂಶಯ ನಮಗೆಲ್ಲರಿಗೂ ಉಂಟಾಗಿದೆ. ಗೃಹಮಂತ್ರಿಗಳ ಈ ಒಂದು ಹೇಳಿಕೆಯನ್ನು ನೋಡಿದರೆ ಅವರು ಏನು ಹೇಳಿದ್ದಾರೆಂದರೆ,, earlier existing investigating jurisdiction had made no reference to the above acts, ಅಂದರೆ ಅದು ಟೆರರಿಸ್ಟ್ ಮತ್ತು ಅನ್-ಲಾಫುಲ್ ಆಕ್ಟಿವಿಟೀಸ್ ಆಕ್ಟ್. This was a serious lacunae detected by the Govt. for the first time in July 1991.

ಜುಲೈ 1991ರಂದು ರಾತ್ರೋ ರಾತ್ರಿ ಏಕಾಏಕಿಯಾಗಿ ಸರ್ಕಾರಕ್ಕೆ ಜ್ಞಾನೋದಯವಾಯಿತು. ಏನು ಎಂದು ಹೇಳಿದರೆ ಇವತ್ತು ಸಿ.ಬಿ.ಐ.ಗೆ ಯಾವುದು ಅಧಿಕಾರ ಇಲ್ಲ ಇಲ್ಲ, ಆದುದರಿಂದ ನಾವು ಈ ಅಧಿಕಾರವನ್ನು ಕೊಡುತ್ತೇವೆ ಎನ್ನುವ ಅರ್ಥದಲ್ಲಿ ನಮ್ಮ ಮುಂದೆ ಮಾನ್ಯ ಸಚಿವರು ಹೇಳಿಕೆಯನ್ನು ಇಟ್ಟಿದ್ದಾರೆ. ಇಲ್ಲಿ ಅನೇಕ ವಿಷಯಗಳ ಬಗ್ಗೆ ಕೆಲವು ಸಂಗತಿಗಳನ್ನು ಮುಚ್ಚಿಡುವ ಪ್ರಸಂಗ ಉದ್ಭವವಾಗಿದೆ. ಇಲ್ಲಿ ಒಂದು ಮಾತನ್ನು ಹೇಳಿದರೆ ಅತಿಶಯೋಕ್ತಿ ಆಗಲಾರದು. ಮೊನ್ನೆ ಮಾನ್ಯ ಅಧ್ಯಕ್ಷರು ಒಂದು ಅಪ್ಪಣೆಯನ್ನು ಕೊಡಿಸಿದರು, ಏನೆಂದರೆ ಈ ಸಭೆಯಲ್ಲಿ ಸುಳ್ಳು ಎನ್ನತಕ್ಕ ಶಬ್ದವನ್ನು ಉಪಯೋಗಿಸಬಹುದೆಂದು. ಆದರೆ ಇವತ್ತು ಸರ್ಕಾರ ಏನು ತಿಳಿದುಕೊಂಡಿದೆ ಅಂದರೆ ಸುಳ್ಳನ್ನು ಹೇಳಬಹುದು ಎಂದು. ಸುಳ್ಳು ಎಂಬ ಆ ಶಬ್ದವನ್ನು ಉಪಯೋಗಿಸಬಹುದು ಎಂಬುದನ್ನು ಅಪಾರ್ಥಮಾಡಿಕೊಂಡು ಸುಳ್ಳನ್ನು ಹೇಳಬಹುದೆಂದು ಸರ್ಕಾರ ಏನಾದರೂ ತಿಳಿದುಕೊಂಡಿದೆಯೆ ಎಂಬುದರ ಬಗ್ಗೆ ಸ್ಪಷ್ಟಿಕರಣಕೊಡಬೇಕು. ಇವತ್ತು ಏನಾಗಿದೆ ಅಂದರೆ ನಾವು ನಮ್ಮ ಸಮಾಜವಾದಿ ಹಿನ್ನೆಲೆಯ ಮುಖ್ಯಮಂತ್ರಿಗಳಾದ ಶ್ರೀ ಬಂಗಾರಪ್ಪನವರು ಬಡವರ ಪರವಾಗಿದ್ದಾರೆ, ಸಮಾಜವಾದದ ಹಿನ್ನೆಲೆಯಲ್ಲಿದ್ದಾರೆಂದು ನಾವು ತಿಳಿದುಕೊಂಡಿದ್ದೇವು. ಆದರೆ ಇವತ್ತು ಏನಾಗಿದೆ ಅಂದರೆ ಅನೇಕ ದೃಷ್ಟಾಂತಗಳನ್ನು ತೆಗೆದುಕೊಂಡರೆ ಅದು ಭ್ರಷ್ಟರ ಪರವಾಗಿದೆ ಎಂದು ಮತ್ತು ಇವರ ಸಮಾಜವಾದ ಬುಡುಬುಡುಕೆಯ ಸಮಾಜವಾದವಾಗಿದೆ ಎಂದು ಹೇಳಲು ನಮಗೆ ಯಾವುದೇ ಸಂಕೋಚ ಇಲ್ಲ. ಇವತ್ತು ಕೊನೆಯಲ್ಲಿ ಒಂದು ಮಾತನ್ನು ಹೇಳುತ್ತೇನೆ. ಮಾನ್ಯ ಕಾಳಮರಿ ಗೌಡರು ಬಹಳ ಒತ್ತಾಯ ಮಾಡುತ್ತಿದ್ದಾರೆ. ಇವತ್ತು ಈ ಸ್ಟೇಟ್‌ಮೆಂಟ್‌ನ ಕೊನೆಯ ಪ್ಯಾರಾದಲ್ಲಿ ಏನು ಹೇಳಿದ್ದಾರೆಂದರೆ : "As regards integrity in public life, let me remind the House that the former Govt. headed by Sri Ramakrishna Hegde had passed in this very House the Karnataka Lokayukta and Upa-Lokayukta Act in 1985 with the prior approval of the Govt. of India".

ಭ್ರಷ್ಟಾಚಾರವನ್ನು ನಿರ್ಮೂಲನ ಮಾಡುತ್ತೇವೆಂದು ಹೇಳಲು ಈ ಸರ್ಕಾರಕ್ಕೆ ರಾಮಕೃಷ್ಣ ಹೆಗಡೆಯವರ ಉದಾಹರಣೆಗೆ ಬೇಕು. ಇದು ಎಂತಹ ದುರ್ದೈವದ ಸಂಗತಿ, " Our Govt. continue to repose its faith in the Karnataka Lokayukta and have maintainced this freedom with the Karnataka Lokayukta and Karnataka Uploksyukta to fully investigate and to take action to maintain the integrity in public life".ಎಂದು ಹೇಳಿದ್ದಾರೆ, There is no question of sheilding corrupt activities in Karnataka ಎಂದು ಹೇಳಿದ್ದಾರೆ. ಇವರು ಯಾವ ರೀತಿ ಭ್ರಷ್ಟ ಅಧಿಕಾರಿಗಳಿಗೆ ರಕ್ಷಣೆ ಕೊಡುತ್ತಿದ್ದಾರೆ ಎಂಬುದನ್ನು ನಾವು ಕಳೆದ ಅನೇಕ ದಿನಗಳ ಚರ್ಚೆಯ ವಿಷಯದಲ್ಲಾಗಲಿ, ಅಥವಾ ಅನೇಕ ವಿಷಯಗಳು ಬೆಳಕಿಗೆ ಬಂದಿರುವ ಹಿನ್ನೆಲೆಯಿಂದ ನೋಡಬಹುದು. ಹೀಗೆ ನೋಡಿದಾಗ ಸಾರಾಸಗಟಾಗಿ ಭ್ರಷ್ಟ ಅಧಿಕಾರಿಗಳಿಗೆ ರಕ್ಷಣೆಯನ್ನು ಕೊಡುತ್ತಿರುವುದು ಇವೊತ್ತು ಸ್ಪಷ್ಟವಾಗಿದೆ. ಇದರ ಬಗ್ಗೆ ಎರಡು ಮಾತನ್ನು ಹೇಳಲು ಯಾರಿಂದಲೂ ಸಾಧ್ಯವಿಲ್ಲ. ಅಂತಪ ಒಂದು ಸಂದರ್ಭದಲ್ಲಿ ಸರ್ಕಾರ ಈ ಸಿಬಿಐಗೆ ಕೊಟ್ಟಂತಹ ಅಧಿಕಾರವನ್ನು ಹಿಂದಕ್ಕೆ ತೆಗೆದುಕೊಂಡಿದೆ ಅಂದರೆ, ಅದರ ಹಿಂದೆ ಯಾವುದೋ ದುರುದ್ದೇಶವಿದೆ ಎಂದು ಇವತ್ತು ನೇರವಾಗಿ ಆರೋಪ ಮಾಡಬೇಕಾಗಿದೆ. ಈ ದುರುದ್ದೇಶ ನಿಮಗೆ ಇಲ್ಲದಿದ್ದರೆ ನಿಮ್ಮ ಪ್ರಾಮಾಣಿಕತೆಯನ್ನು ಸಿದ್ಧಮಾಡುತ್ತೇವೆನ್ನುವ ಶಕ್ತಿ ಅಥವಾ ಧೈರ್ಯ ನಿಮಗೆ ಇದ್ದರೆ ಕೂಡಲೇ ಈ ಒಂದು ಅಧಿಕಾರವನ್ನು ಏನು ಮೊಟಕುಗೊಳಿಸಿದ್ದೀರಿ. ಅದನ್ನು ಮತ್ತೆ ಕೊಡುವುದಕ್ಕೆ ಪ್ರಯತ್ನ ಮಾಡಬೇಕು. ಅಷ್ಟೇ ಅಲ್ಲ, ಇವತ್ತು ಏನಾಗಿದೆ ಅಂದರೆ, ಕೇಂದ್ರ ಸರ್ಕಾರದಲ್ಲಿ ನಮ್ಮದೇ ಸರ್ಕಾರ ಇರುವಾಗ ನಮ್ಮ ಸರ್ಕಾರಕ್ಕೆ ಕೇಂದ್ರ ಸರ್ಕಾರದಲ್ಲಿರುವ ಪ್ರಧಾನ ಮಂತ್ರಿಗಳ ಮೇಲೆ ವಿಶ್ವಾಸ ಇಲ್ಲವೇ? ಶ್ರೀ ರಾಮಕೃಷ್ಣ ಹೆಗಡೆಯವರ ಒಂದು ಲೋಕಾಯುಕ್ತದ ಮೇಲೆ ನಿಮಗೆ ಒಮ್ಮಿಂದೊಮ್ಮೆಲೆ ಬಹಳಷ್ಟು ಪ್ರೀತಿ ಅಥವಾ ಲವ್ ಉಂಟಾಗಿರುವುದಕ್ಕೆ ಏನು ಕಾರಣ? ಈ ರೀತಿಯಾಗಿ ಸಾರ್ವಜನಿಕರ ಮುಂದೆ ನಾವು ಸಂಶಯ ಸುಳಿಯಲ್ಲಿ ಸುಳಿಯಲಿಕ್ಕೆ ನಮಗೆ ಸಿದ್ದತೆ ಇಲ್ಲ. ಶ್ರೀ ಏಕಾಂತಯ್ಯನವರು ಏನು ಒಂದು ಪ್ರಸ್ತಾಪವನ್ನು ಮಂಡನೆ ಮಾಡಿದ್ದಾರೆ, ಅದಕ್ಕೆ ನಾನು ನನ್ನ ಆತ್ಮ ವಂಚನೆ ಮಾಡಿಕೊಂಡು ಅದಕ್ಕೆ ಒಪ್ಪಿಗೆ ಕೊಡಲು ಸಾಧ್ಯವಾಗುವುದಿಲ್ಲ. ಈ ರೀತಿ ಭ್ರಷ್ಟಾಚಾರದ ಸರಮಾಲೆ ಮುಂದೆ ಸಹ ನಡೆಯುತ್ತಾ ಹೋದರೆ ಜನ ನಮಗೆ ಬಿಡುವುದಿಲ್ಲ. ಅದರ ಪ್ರಾಯಶ್ಚಿತ್ತವನ್ನು ನಾವು ಪಡಬೇಕಾಗುತ್ತದೆ ಎಂಬ ಎಚ್ಚರಿಕೆಯ ಮಾತನ್ನು ಹೇಳಿ ನನ್ನ ಎರಡು ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್. ವಿಶ್ವನಾಥ್ (ಕೆ.ಆರ್.ನಗರ) : ಮಾನ್ಯ ಉಪಾಧ್ಯಕ್ಷಿಣಿಯವರೆ, ಈಗಾಗಲೇ ನನ್ನ ಸ್ನೇಹಿತರು ಹಲವು ವಿಚಾರಗಳನ್ನು ಪ್ರಸ್ತಾಪ ಮಾಡಿರುವುದರಿಂದ ನಾನು ನೇರವಾಗಿ ವಿಷಯಕ್ಕೆ ಬಂದು ಹೇಳುವುದೇನೆಂದರೆ , I must know the very intention of the Government in withdrawing the Notification No.328/8/dated 23rd May'89.

ಈ ಸದನಕ್ಕೆ ಗೆದ್ದು ಬಂದಿರುವಂಥ 224 ಸದಸ್ಯರೂ ಸಹ ಜನರ ಮುಂದೆ ನಿಂತು ನಾವು ಹಲವಾರು ಆಶ್ವಾಸನೆಗಳನ್ನು ಒಂದು ಕಡೆ ಕೊಡುತ್ತೇವೆ. ಮತ್ತು ಅದರ ಜೊತೆಗೆ ನನಗೆ ಓಟು ಕೊಟ್ಟರೆ ಅಥವಾ ನನಗೆ ಅಧಿಕಾರ ಕೊಟ್ಟರೆ, ಒಂದು ಪ್ರಾಮಾಣಿಕವಾದ ಸರ್ಕಾರವನ್ನು ರಚನೆ ಮಾಡಿ ತನ್ಮೂಲಕ ಜನಪದ

ಕಲ್ಯಾಣ ಕಾರ್ಯಕ್ರಮಗಳನ್ನು ಕೊಡುತ್ತೇವೆ ಎನ್ನುವ ವಚನವನ್ನು ನಾವು ಕೊಟ್ಟು ಬಂದಿರುತ್ತೇವೆ. ಆದರೆ ಈ ದಿವಸ...

(ಗೊಂದಲ)

ಶ್ರೀ ಆರ್.ಎನ್. ನಾಯಕ್ : ತಾವು ಓಟು ಕೊಟ್ಟರೆ ನಾನು ಮಂತ್ರಿಯಾಗಿ ಬರುತ್ತೇನೆಂದು ಜನರಿಗೆ ಹೇಳಿ ಬಂದಿದ್ದರೇನು? ಹಾಗಿದ್ದರೆ ಹೇಳಿ.

ಶ್ರೀ ಕಾಗೋಡು ತಿಮ್ಮಪ್ಪ : ಈಗ ಇಲ್ಲಿ ಯಾವುದರ ಮೇಲೆ ಚರ್ಚೆ ಆಗುತ್ತಿದೆ?

(ಗೊಂದಲ)

ಶ್ರೀ ಹೆಚ್. ವಿಶ್ವನಾಥ್ : ಮಾನ್ಯ ಉಪಾಧ್ಯಕ್ಷಿಣಿಯವರೇ, ತಾವು ನನಗೆ ಅವಕಾಶ ಕೊಟ್ಟಿದ್ದೀರಿ. ನಾನು ಮಾತನಾಡುತ್ತಿದ್ದೇನೆ. ನಾನು ಈಗ ಮಾತನಾಡಲೋ ಅಥವಾ ಕುಳಿತುಕೊಳ್ಳಲೋ?

ಉಪಾಧ್ಯಕ್ಷಿಣಿಯವರು : ಎರಡು ನಿಮಿಷದಲ್ಲಿ ನೀವು ಮಾತನಾಡಿ ಮುಗಿಸಿ.

ಶ್ರೀ ಆರ್.ಎನ್. ನಾಯಕ್ : ಭ್ರಷ್ಟಾಚಾರವಿಲ್ಲದಂಥ ಸರ್ಕಾರವನ್ನು ನಾವು ತರುತ್ತೇವೆಂದು ಜನರಿಗೆ ಹೇಳಿ ಬಂದಿದ್ದೇವೆ, ಆದರೆ ಮಂತ್ರಿಗಳಾಗಿ ಬರುತ್ತೇವೆಂದು ನಾವು ಹೇಳಿ ಬರಲಿಲ್ಲ, ನೀವು ಏನಾದರೂ ಹೇಳಿ ಬಂದಿದ್ದೀರಾ ಹೇಗೆ? ಹೇಳಿ?

(ಗೊಂದಲ)

ಶ್ರೀ ಕೆ.ಹೆಚ್. ರಂಗನಾಥ್ : ಅವರು ಭಾಷಣವನ್ನು ಪೂರ್ತಿಯಾಗಿ ಮಾಡಲು ಬಿಡಬೇಕು ಸುಮ್ಮನೆ ಅಡ್ಡಿ ಮಾಡುವುದು ಬೇಡ. ಮಾನ್ಯ ಉಪಾಧ್ಯಕ್ಷಿಣಿಯವರು ಅವರಿಗೆ ಮಾತನಾಡಲು ಅವಕಾಶ ಕೊಟ್ಟಿದ್ದಾರೆ. ಅವರು ಮಾತನಾಡುತ್ತಿದ್ದಾರೆ. ಮಾತನಾಡಲಿ.

SRI K. LAKKAPPA : Can this Government do anything and everything?

(ಗೊಂದಲ)

SRI K. LAKKAPPA : What is that we have done? Do you mean to say we have no right to speak here?

ಉಪಾಧ್ಯಕ್ಷರು : ಈಗ ವಿಶ್ವನಾಥ್ ಅವರಿಗೆ ಮಾತನಾಡಲು ಕರೆದಿದ್ದೇನೆ. ಅವರು ಮಾತನಾಡಲಿ.

ಶ್ರೀ ಕೆ.ಹೆಚ್. ರಂಗನಾಥ್ : ಅವರು ಮಂತ್ರಿಯಾಗುತ್ತಾರೋ ಇಲ್ಲವೋ ಎನ್ನುವಂಥ ಹೇಳಿಕೆಯನ್ನು ಈ ಸಭೆಯಲ್ಲಿ ಕೊಡುವುದಕ್ಕೆ ತಾವು ಅಪ್ಪಣೆ ಕೊಟ್ಟಿಲ್ಲ, ಅವರಿಗೆ ಮಾತನಾಡಲು ಅವಕಾಶ ಕೊಟ್ಟಿದ್ದೀರಿ. ಅವರು ಮಾತನಾಡುತ್ತಿದ್ದಾರೆ. ಅವರು ಏನು ಹೇಳುತ್ತಾರೆ, ಯಾವುದು ರೆಕಾರ್ಡ್‌ಗೆ ಹೋಗಬೇಕು ಎನ್ನುವುದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಲು ತಮಗೆ ಪೂರ್ಣವಾದ ಅಧಿಕಾರ ಇದೆ. ಎರಡು ನಿಮಿಷ ಅವರಿಗೆ ಅವಕಾಶವನ್ನು ಕೊಟ್ಟಿದ್ದೀರಿ. ಅವರು ಹೇಳುವಾಗ ಅವರಿಗೆ ಮಾತನಾಡಲು ಅಡ್ಡಿ ಮಾಡಬಾರದು.

ಉಪಾಧ್ಯಕ್ಷರು : ಈಗ ಅವರು ಮಾತನಾಡುತ್ತಾರೆ.

ಶ್ರೀ ಹೆಚ್. ವಿಶ್ವನಾಥ್ : ಮಾನ್ಯ ಉಪಾಧ್ಯಕ್ಷಿಣಿಯವರೇ, ಸರ್ಕಾರಿ ಮತ್ತು ಸಾರ್ವಜನಿಕ ಜೀವನದಲ್ಲಿ ಸ್ವಾರ್ಥ ಎಷ್ಟರಮಟ್ಟಿಗೆ ಆಗಬೇಕು ಎಂದರೆ, ಅದು ಒಂದು ಹಿಡಿ ಆಗಬೇಕು. ಸ್ವಾರ್ಥ ಇಲ್ಲದೇ ಯಾರೂ ಇಲ್ಲ, ಭ್ರಷ್ಟಾಚಾರ ಮುಕ್ತರಾಗಿ ಯಾರೂ ಇಲ್ಲ, ಆದರೆ ಸ್ವಾರ್ಥ ಎಷ್ಟು ಇರಬೇಕೆಂದರೆ ಅದು ಸಾರ್ವಜನಿಕ ಜೀವನದಲ್ಲಿ ಒಂದು ಹಿಡಿ ಆಗಬೇಕು ಅಷ್ಟೇ. ಸ್ವಾರ್ಥ ಒಂದು ಬಂಡಿಯಾದರೆ ಅದನ್ನು ಕೇಳುವವರು ಯಾರು? ಈ ಸ್ವಾರ್ಥ ಬಂಡಿಯಾಗಿರುವುದಕ್ಕೆ ಈ ನೋಟಿಫಿಕೇಷನನ್ನು ವಿತ್‌ಡ್ರಾ ಮಾಡಿದ್ದಾರೆಂಬ ಭಾವನೆ ನನ್ನಲ್ಲಿ ಬರುತ್ತಿದೆ, ಈ ನಮ್ಮ ಲೋಕಾಯುಕ್ತದ ಕೆಳಗೆ ನಾವು ಎಲ್ಲಾ ಅಧಿಕಾರವನ್ನು ಕೊಟ್ಟಿದ್ದೇವೆ ಎನ್ನತಕ್ಕಂಥ ಮಾತನ್ನು ಅವರು ಉತ್ತರದಲ್ಲಿ ಹೇಳಿದ್ದಾರೆ. ಮಾನ್ಯ ಉಪಾಧ್ಯಕ್ಷಿಣಿಯವರೇ, ನಮ್ಮ ಊರಿನ ಮುನಿಸಿಪಾಲೀಟಿ. ಒಬ್ಬ ಸ್ಯಾನಿಟರಿ ಇನ್ಸ್‌ಪೆಕ್ಟರ್ 25 ರೂ.ಗಳನ್ನು ಲಂಚ ತೆಗೆದುಕೊಳ್ಳುವಾಗ ಹಿಡಿಯುವಂಥ ಈ ಲೋಕಾಯುಕ್ತರು ಕೋಟಿ ಬೆಲೆ ಬಾಳುವಂಥ ಮೋಹನ್ ಮೆಕೆನ್ಸ್‌ನ ರೆಕಾರ್ಡನ್ನು ತಿದ್ದಿ 27 ಎಕರೆಯನ್ನು ಗ್ರಾಂಟ್ ಮಾಡತಕ್ಕ ಡಾ : ಪಾಟ್ನಾಯಕ್ ಅಂಥವರನ್ನು ಲೋಕಾಯುಕ್ತಕ್ಕೆ ಹಿಡಿಯುವುದಕ್ಕೆ ಆಗುತ್ತದೆಯೇ? ಅಥವಾ ಕೋಟಿ ಕೋಟಿ ರೂ.ಗಳ ವಂಚನೆ ಮಾಡಿದಂಥ ಈ ರಾಜ್ಯದ ಮುಖ್ಯ ಕಾರ್ಯದರ್ಶಿಯವರನ್ನು ಲೋಕಾಯುಕ್ತ ಹಿಡಿಯುವುದಕ್ಕೆ ಆಗುತ್ತದೆಯೇ? ಆದ್ದರಿಂದ, ಈ ಸಿಬಿಐ ವ್ಯಾಪ್ತಿಯನ್ನು ಮೊಟಕುಗೊಳಿಸಿ, ಈ ರಾಜ್ಯದಲ್ಲಿ ಇರತಕ್ಕಂಥ ಹಲವಾರು ಭ್ರಷ್ಟ ಅಧಿಕಾರಿಗಳನ್ನು ರಕ್ಷಣೆ ಮಾಡುವುದಕ್ಕೆ ಇದು ಒಂದು ಸಂಚು ಎನ್ನತಕ್ಕಂಥ ಸಂಶಯ ನನ್ನಲ್ಲಿ ಮೂಡುತ್ತಿದೆ.

ಅದಷ್ಟೇ ಅಲ್ಲ, ರಾಜಕಾರಣದಲ್ಲೂ ಅಷ್ಟೆ. ನಿನ್ನೆ-ಮೊನ್ನೆ ದಿವಸ ನಾವು ಚುನಾವಣೆಯಲ್ಲಿ ಗೆದ್ದು, ಇವೊತ್ತು ಮಂತ್ರಿಯಾಗಿ ನಾಳೆ 25-30ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಮದುವೆ ಮಾಡುತ್ತಿದ್ದಾಗ, ನೋಡಿ ಊಟ ಮಾಡಬಹುದೇ ಹೊರತು, ನಿಮಗೆ ಈ ಹಣ ಎಲ್ಲಿಂದ ಬಂತು? ಎಂದು ಕೇಳತಕ್ಕಂಥ ಧೈರ್ಯ ನನ್ನ ಊರಿನ ಪೋಲೀಸರಿಗೆ ಇದೆಯೆ ಎನ್ನತಕ್ಕಂಥಾದ್ದು ತಾವು ಯೋಚನೆ ಮಾಡಬೇಕು. ಆದುದರಿಂದ, ನನ್ನ ಮಾತುಗಳನ್ನು ಇಷ್ಟಕ್ಕೆ ಮೊಟಕುಗೊಳಿಸಿ, ಸಿಬಿಐ ನೋಟಿಫಿಕೇಶನ್ ಅನ್ನು ಸಾರ್ವಜನಿಕರ ಹಿತದೃಷ್ಟಿಯಿಂದ ಭ್ರಷ್ಟಾಚಾರವನ್ನು ಕಡಿಮೆಮಾಡತಕ್ಕಂಥ ದೃಷ್ಟಿಯಿಂದ, ಸಾರ್ವಜನಿಕ ಬೊಕ್ಕಸವನ್ನು ಕಾಯತಕ್ಕಂಥ ದೃಷ್ಟಿಯಿಂದ ಇದನ್ನು ರೆಸ್ಟೋರ್ ಮಾಡಬೇಕೆಂದು ಹೇಳಿ ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬ್ಕಾರಿ ಸಚಿವರು) : ಮಾನ್ಯ ಸಭಾಧ್ಯಕ್ಷಿಣಿಯವರೆ, ನೋಟಿಫಿಕೇಷನ್ 68ರ ಬಗ್ಗೆ ಶ್ರೀಮಾನ್ ಏಕಾಂತಯ್ಯನವರು, ಶ್ರೀ ರಾಣೆಯವರು ಮತ್ತು ಶ್ರೀ ವಿಶ್ವನಾಥ್‌ರವರು ಕೂಡಾ ಪ್ರಸ್ತಾಪ ಮಾಡಿದ್ದಾರೆ. ಇದಕ್ಕೂ ಮುಂಚೆ 16ನೇ ತಾರೀಖು ನಮ್ಮ ಹಿರಿಯ ಸದಸ್ಯರಾದ ಶ್ರೀಮಾನ್ ಕೆ.ಎಚ್. ರಂಗನಾಥ್‌ರವರು ಕೂಡಾ ರಾಜೀವಗಾಂಧಿ ಹತ್ಯೆಯ ಹಿನ್ನೆಲೆಯಲ್ಲಿ ಇದನ್ನು ಪ್ರಸ್ತಾಪ ಮಾಡಿದರು. ಅದಕ್ಕೆ ಅದೇ ದಿವಸ ನಾನು ಒಂದು ಹೇಳಿಕೆಯನ್ನು ಕೊಟ್ಟೆ. ಹೇಳಿಕೆಯನ್ನು ಕೊಡತಕ್ಕಂಥ ಕಾಲದಲ್ಲಿ ಶ್ರೀಮಾನ್ ಏಕಾಂತಯ್ಯನವರು ಕೂಡ ಹಾಜರಿದ್ದರು. ಅಂದು ಕ್ಲಾರಿಫಿಕೇಶನ್ ಏನೂ ಆಗಲಿಲ್ಲ, ಮತ್ತೆ ಇದರ ಬಗ್ಗೆ ಇವೊತ್ತಿನ ದಿವಸ ಪ್ರಸ್ತಾಪ ಮಾಡಿದ್ದಾರೆ. ಈ 68ರ ನೋಟಿಫಿಕೇಷನ್ ಬಗ್ಗೆ ಮಾನ್ಯ ಸದಸ್ಯರ ಅನಿಸಿಕೆ ಏನಿದೆ ಎಂದು ಹೇಳಿದರು. ಶ್ರೀ ವಿಶ್ವನಾಥ್‌ರವರು ಕೂಡಾ ವಿಧಾನಸಭಾ ಸದಸ್ಯರಾಗಿದ್ದಾರೆ. ನಾನು ಕೂಡಾ

ಐದನೇ ಸಲ ಈ ವಿಧಾನಸಭೆಗೆ ಆರಿಸಿ ಬರುತ್ತಿದ್ದೇನೆ. ಸುಮಾರು ಹತ್ತೊಂಬತ್ತು ವರ್ಷಗಳ ಕಾಲ ಸಾರ್ವಜನಿಕ ಜೀವನದಲ್ಲಿ ಕೆಲಸ ಮಾಡುತ್ತಿದ್ದೇನೆ. ಕರ್ನಾಟಕ ರಾಜ್ಯದ ಗೃಹ ಮಂತ್ರಿಯಾಗಿ ಹೇಳಿಕೆ ಕೊಡತಕ್ಕಂಥ ರೀತಿಯಲ್ಲಿ ಕೂಡ ಇಲ್ಲಿಯವರೆಗೆ ಆದ ಆಗು-ಹೋಗುಗಳ ಬಗ್ಗೆ ಕೂಡ ನಾನು ಆಗಾಗ್ಗೆ ನೋಡುತ್ತಿರುತ್ತೇನೆ. 27ನೇ ತಾರೀಖಿನ ದಿವಸ ಏಕಾಏಕಿ ಏತಕ್ಕೆ ಸರ್ಕಾರದಲ್ಲಿ ನೋಟಿಫಿಕೇಶನ್ ವಿತ್‌ಡ್ರಾ ಮಾಡತಕ್ಕಂಥ ಪ್ರಮೇಯ ಬಂತು ಎನ್ನತಕ್ಕಂಥ ಪ್ರಸ್ತಾಪವನ್ನು ಶ್ರೀಮಾನ್ ಏಕಾಂತಯ್ಯನವರು ಕೂಡಾ ಮಾಡಿದ್ದಾರೆ. ತಮಗೆಲ್ಲರಿಗೂ ಗೊತ್ತಿರುವ ಹಾಗೆ ಶ್ರೀಮಾನ್ ರಾಜೀವಗಾಂಧಿಯವರ ಹತ್ಯೆಯಾಯಿತು.

ಅದರ ಬಗ್ಗೆ ಎಸ್‌ಐಟಿ ಮತ್ತು ಸಿಬಿಐನವರು ಕೂಡ ತನಿಖೆ ಮಾಡುತ್ತಿದ್ದಾರೆ. ಎರಡನೇ ತಾರೀಖು ಇಂದಿರಾನಗರದಲ್ಲಿ ಎಲ್ಟಿಟಿಇ ಆಕ್ಟಿವಿಟೀಸ್ ಅಂದರೆ ಟೆರರಿಸ್ಟ್ ಆಕ್ಟಿವಿಟೀಸ್ ಎಲ್ಲಾ ಕಡೆಗೆ ಹಬ್ಬುತ್ತಿದೆ ಎನ್ನತಕ್ಕಂಥ ವರ್ತಮಾನ ಪೋಲೀಸರಿಗೆ ಬಂತು. ಈಗ ಅವರು ಏನು ಪ್ರಸ್ತಾಪ ಮಾಡಿದ್ದಾರೆ, ಡೆಲ್ಲಿ ಪೋಲೀಸ್ ಆಕ್ಟ್ 1946 ಏನಿದೆ ಇದರ ಸೆಕ್ಷನ್ 3ರಲ್ಲಿ ಯಾವುದರ ಮೇಲೆ ಸಿಬಿಐ ತನಿಖೆಯನ್ನು ಮಾಡಬೇಕು ಎನ್ನಕ್ಕಂಥಾದನ್ನು ಅವರು ಸ್ಪಷ್ಟಪಡಿಸಿದ್ದಾರೆ. ಸೆಕ್ಷನ್ 6ರ ಪ್ರಕಾರ ಅವರು ಸ್ಟೇಟ್ ಗೌರ್ನಮೆಂಟ್‌ನ ಕನ್‌ಸೆಂಟ್ ತೆಗೆದುಕೊಳ್ಳಬೇಕು. ಇಂತಿಂಥ ಕಡೆ ನಾವು ತನಿಖೆ ಮಾಡಬೇಕಾಗಿದೆ, ಇದಕ್ಕೆ ಪರವಾನಗಿ ಕೊಡಬೇಕೆಂದು they havetotakeStateGovernment'spermission.ಅವರು ಪರ್ಮಿಟ್ ಮಾಡಬೇಕಾಗುತ್ತದೆ, ಇದು ಮೊದಲಿನಿಂದಲೂ ನಡೆದುಕೊಂಡು ಬಂದಿರತಕ್ಕಂಥ ಒಂದು ಪದ್ಧತಿ. ಇಲ್ಲಿ ಏನಾಗಿದೆಯೆಂದರೆ, 1967ರ ಅನ್‌ಲಾಫುಲ್ ಆಕ್ಟ್ ಏನಿದೆ? ಮತ್ತು 1987ರ ಟಾಡಾ ಆಕ್ಟ್ ಏನಿದೆ? ಇದರಲ್ಲಿ ಸಿಬಿಐ ಅವರಿಗೆ ತನಿಖೆ ಮಾಡತಕ್ಕಂಥ ಅಧಿಕಾರ ಇರಲಿಲ್ಲ. ಯಾವಾಗ ಎಲ್‌ಟಿಟಿಇ ಆಕ್ಟಿವಿಟೀಸ್ ಪ್ರಾರಂಭವಾಯಿತು? ಆಗ ನಾವು ನೋಡಿದೆವು. ನಮ್ಮ ಕೃಹ ಕಾರ್ಯದರ್ಶಿಗಳಿದ್ದಾರೆ. ಪೋಲೀಸ್ ಇಲಾಖೆಗೆ ಸಂಬಂಧಪಟ್ಟಂತೆ ಎಲ್ಲರನ್ನೂ ಕುರಿತು ಸಮಾಲೋಚನೆ ಮಾಡತಕ್ಕಂಥ ಕಾಲದಲ್ಲಿ ಈಗ ತನಿಖೆ ಮಾಡಲು ಎಸ್‌ಐಟಿ. ಅವರಿಗೆ ಮಾಜಿ ಪ್ರಧಾನಿಯವರ ಒಂದು ಹತ್ಯೆ ವಿಚಾರದಲ್ಲಿ ಸಮಗ್ರವಾಗಿ ತನಿಖೆ ನಡೆಯತಕ್ಕಂಥ ರೀತಿಯಲ್ಲಿ ಇವೊತ್ತು ನಾನಾ ರೀತಿಯಲ್ಲಿ ಆಕ್ಟಿವಿಟೀಸ್ ಆಗತಕ್ಕಂಥ ಕಾಲದಲ್ಲಿ ನಾವು ಇವೊತ್ತು ಬ್ಲಾಂಕೆಟ್ ಆಗಿ ಪರ್ಮಿಷನ್ ಕೊಡಲೇಬೇಕು. ಏಕೆಂದರೆ, ಸಿಬಿಐ ಅದನ್ನು ಕೇಳಿದ ಮೇಲೆ ಅಲ್ಲಿ ಇದ್ದಂಥ ಪರಿಸ್ಥಿತಿಯಲ್ಲಿ out of jurisdiction ಆಗುತ್ತಿತ್ತು. ನಾಳೆ ದಿವಸ ಯಾರೇ ಟೆರರಿಸ್ಟ್ ಕೋರ್ಟಿಗೆ ಹೋಗಬಹುದು ಎನ್ನತಕ್ಕಂಥ ರೀತಿಯಲ್ಲಿ 1967 ಮತ್ತು 1987ನ್ನು ಇನ್‌ಕ್ಲೂಡ್ ಮಾಡಬೇಕು ಎನ್ನತಕ್ಕಂಥಾದ್ದೊಂದು. ಅದನ್ನು ಮಾಡತಕ್ಕಂಥ ರೀತಿಯನ್ನು ನಾನು ಮಾನ್ಯ ಸದಸ್ಯರಾದ ಶ್ರೀ ಏಕಾಂತಯ್ಯನವರ ಗಮನಕ್ಕೆ ತರುತ್ತಿದ್ದೇನೆ. ಅದರಲ್ಲಿ ಒಂದು ಭಾಗ ಇದೆ. ಅದರಲ್ಲಿ ನಾವು 1967 ಮತ್ತು 1987ನ್ನು ಇನ್‌ಕ್ಲೂಡ್ ಮಾಡಿದೆವು ಮತ್ತು ಸಿಬಿಐ ಮುಖ್ಯಸ್ಥರಾದ ಶ್ರೀ ವಿಜಯ್‌ಕರಣ್ ಮತ್ತು ಎಸ್‌ಐಟಿ ಮುಖ್ಯಸ್ಥರಾದ ಶ್ರೀ ಕಾರ್ತಿಕೇಯನ್ ಏನಿದ್ದಾರೆ, They were very happy, ಸರ್ಕಾರ ಏನು ನಿಲುವು ತೆಗೆದುಕೊಂಡಿದೆ ಎನ್ನತಕ್ಕಂಥ ರೀತಿಯಲ್ಲಿ ಆ ಒಂದು ತನಿಖೆಯಲ್ಲಿ, ಎಲ್ಲಾ ರೀತಿಯಲ್ಲೂ ಸ್ಟೇಟ್ ಗೌರ್ನಮೆಂಟ್ ಏನೆಂದರೆ, ನಮ್ಮ ಸಮಸ್ಯೆಗಳನ್ನು ಅರಿತುಕೊಂಡಿದ್ದಾರೆ, ಹೆಚ್ಚು ಪವರ್ಸ್ ಕೊಟ್ಟಿದ್ದಾರೆ ಎನ್ನತಕ್ಕಂಥ ಮಾತನ್ನು ಕೂಡ ಅವರು ವ್ಯಕ್ತಪಡಿಸಿದ್ದಾರೆ. ಇದು ಒಂದು ಭಾಗ.

ಎರಡನೆಯ ಭಾಗ ಏನಾಗುತ್ತದೆಂದರೆ, 22ನೇ ಆಗಸ್ಟ್‌ನಲ್ಲಿ ಮತ್ತು 5ನೇ ತಾರೀಖಿನಲ್ಲಿ ಏನು ನೋಟಿಫಿಕೇಷನ್ ಬಂತು, ಅದರಲ್ಲಿ ಪ್ರಿವೆನ್ಷನ್ ಆಫ್ ಕರಪ್ಷನ್ ಆಕ್ಟ್ ಬಿಟ್ಟಿದ್ದಾರೆ ಎನ್ನತಕ್ಕ ಒಂದು ಮಾತು ಇದೆ. 1947ರ ಪ್ರಿವೆನ್ಷನ್ ಆಫ್ ಕರಪ್ಷನ್ ಆಕ್ಟ್ ಏನು ಇದೆ, ಅದರಂತೆ ಎಲ್ಲಾ ರಾಜ್ಯದಲ್ಲಿಯೂ ಕೂಡ ತನಿಖೆಯಾಗತಕ್ಕ ಪದ್ಧತಿ ನಡೆದು ಬಂದಿದೆ. ದೆಹಲಿ ಪೋಲೀಸ್ ಆಕ್ಟ್ 52 ಏನು ಇದೆ, ಅದರಲ್ಲಿ ಬಹಳಷ್ಟು ಅಮೆಂಡ್ ಆಗಿದೆ, ರೀಪೀಲ್ ಆಗಿದೆ. 15ನೇ ನವೆಂಬರ್ 1988ರಲ್ಲಿ ದಾತಾರ್ ಅವರು ಚೀಫ್ ಸೆಕ್ರೆಟರಿಯಾದಾಗ ಒಂದು ಪತ್ರ ಸಿ ಬಿ ಐ ನಿಂದ ಬಂತು. ಅದೇನೆಂದರೆ 1947ರ ಪ್ರಿವೆನ್ಷನ್ ಆಫ್ ಕರಪ್ಷನ್ ಆಕ್ಟ್ ರಿಪೀಲ್ ಆಗಿದೆ ಎಂದು 15ನೇ ನವೆಂಬರ್ 1988ರಂದು ಒಂದು ನೋಟಿಫಿಕೇಶನ್ ಬಂತು. ಆಗ ಶ್ರೀ ಬೊಮ್ಮಾಯಿಯವರು ಮುಖ್ಯಮಂತ್ರಿಯಾಗಿದ್ದರು. ಏಕಾಂತಯ್ಯನವರು ಮಂತ್ರಿಗಳಾಗಿದ್ದರು. ಆಗ 5 ತಿಂಗಳ ಕಾಲ ಹಾಗೆಯೇ ಕನ್‌ಸೆಂಟ್ ಕೊಡತಕ್ಕದ್ದು ಬಾಕಿ ಇತ್ತು. ಅದಾದಮೇಲೆ 23-5-1989ರಲ್ಲಿ ಶ್ರೀ ವೆಂಕಟಸುಬ್ಬಯ್ಯನವರು ರಾಜ್ಯಪಾಲರಾಗಿದ್ದಾಗ ಇದು ಅವರ ನಜರಿಗೆ ಬಂದಾಗ, ಕನ್‌ಸೆಂಟ್ ಕೊಡತಕ್ಕ ಪತ್ರ ಬಂದ ಮೇಲೆ 23-5-1989ರಲ್ಲಿ, 1988ರ ಪ್ರಿವೆನ್ಷನ್ ಆಫ್ ಕರಪ್ಷನ್ ಆಕ್ಟ್‌ಗೆ ಕನ್‌ಸೆಂಟ್ ಕೊಟ್ಟರು ಮತ್ತೆ ಏನಾಯಿತೆಂದರೆ, 7-9-1989ರಲ್ಲಿ ಮತ್ತೆ ಸಿ ಬಿ ಐ ನಿಂದ ಸ್ಟೇಟ್ ಗೌರ್ನಮೆಂಟಿಗೆ ಒಂದು ಲೆಟರ್ ಬಂತು. ಏನೆಂದರೆ ಅದರಲ್ಲಿ ಅವರು ಮತ್ತೆ 1947 ಮತ್ತು 1988ರ ಆಕ್ಟ್‌ಗಳನ್ನು ಸೇರಿಸಿದ್ದರು. 15-11-1988ರ ಆಕ್ಟ್‌ಗೆ ಏನು ಒಂದು Dataar ಚೀಫ್ ಸೆಕ್ರೆಟರಿ ಕನ್‌ಸೆಂಟ್ ಕೊಡತಕ್ಕ ಕಾಲದಲ್ಲಿ ಉಲ್ಲೇಖ ಮಾಡಿದ್ದಾರೆ, 1947ರ ಪ್ರಿವೆನ್ಷನ್ ಆಫ್ ಕರಪ್ಷನ್ ಆಕ್ಟ್ ರಿಪೀಲ್ ಆಗಿದೆ, ಅದಕ್ಕೆ 1988ರಲ್ಲಿ ರಾಜ್ಯಸರ್ಕಾರವು ಒಪ್ಪಿಗೆ ಕೊಡಬೇಕು. ಒಪ್ಪಿಗೆ ಕೊಡದಿದ್ದರೆ ಅವರು ಕೋರ್ಟಿಗೆ ಹೋಗಬಹುದು, ಅದು ರಿಪೀಲ್ ಆಗಿದೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ, 1967 ಮತ್ತು 1988ನ್ನು ನಾವು ಮೊನ್ನೆ ಇದನ್ನು ಸೇರಿಸಿ ಕೇಂದ್ರಸರ್ಕಾರದ ಪರಿಶೀಲನೆಗೆ ಕಳಿಸತಕ್ಕ ಸಂದರ್ಭದಲ್ಲಿ.. ಆಗ ಏನಾಗಿದೆ ಅಂದರೆ ಇದನ್ನೂ ಕೂಡ ರೆವ್ಯೂ ಮಾಡತಕ್ಕ ಕಾಲದಲ್ಲಿ 52 ಆಕ್ಟ್‌ನಲ್ಲಿ 33 ಮತ್ತು 34 ನೇ ಆಕ್ಟ್‌ನ್ನು ಸೇರಿಸಿದರು. ಅದಕ್ಕೆ ನಾವು ವಿವರಣೆಯನ್ನು ಕೇಳಿದೆವು. ನಾವು ಅದನ್ನು ವಿತ್‌ಡ್ರಾ ಮಾಡಲಿಲ್ಲ rescind ಮಾಡಿದ್ದೇವೆ. That is of a policy matter. ಏಕೆಂದರೆ ಕೇವಲ ಅಪ್-ಟೂ-ಡೇಟ್ ಮಾಡತಕ್ಕ ಸಂದರ್ಭದಲ್ಲಿ ಕೇಂದ್ರಸರ್ಕಾರಕ್ಕೆ ಪತ್ರವನ್ನು ಬರೆದಿದ್ದೇವೆ.

ಹೋದ ತಿಂಗಳಲ್ಲಿ ಸಿ ಬಿ ಐ ಆಂಧ್ರಪ್ರದೇಶದಲ್ಲಿ ಕೆಲಸ ಮಾಡತಕ್ಕ ಡಿ.ಐ.ಜಿ ಅವರೂ ಕೂಡ ಒಂದು ಪತ್ರವನ್ನು ಬರೆದಿದ್ದಾರೆ. ಕೇಂದ್ರ ಸರ್ಕಾರದ ನೌಕರರ 48 ಕೇಸ್‌ಗಳಿಗೆ ಅನುಮತಿ ಕೊಡಬೇಕೆಂದು ಕೇಳಿದ್ದಾರೆ. ಅನುಮತಿಯನ್ನು ಕೊಟ್ಟಿದ್ದೇವೆ. ಭ್ರಷ್ಟ ಅಧಿಕಾರಿಗಳನ್ನು ರಕ್ಷಣೆ ಮಾಡತಕ್ಕ ಉದ್ದೇಶ ಸರ್ಕಾರಕ್ಕಿಲ್ಲ. ಮತ್ತು ಇದರ ಬಗ್ಗೆ ಯಾರಿಗಾದರೂ ಕೂಡ ಒಂದು ರೀತಿಯ ರಕ್ಷಣೆ ಕೊಡತಕ್ಕ ಉದ್ದೇಶವಿಲ್ಲ. ಇದು ಎಲ್ಲಾ ಕಡೆಯು ಅಮೆಂಡ್ ಆಗಿದೆ. ರಿಪೀಲ್ ಆಗಿದೆ. ಇದರ ಬಗ್ಗೆ ಕ್ಲಾರಿಫಿಕೇಷನ್ ಕೊಡಬೇಕೆಂದು ಕೇಳಿದ್ದೇವೆ. ಐ ಪಿ ಸಿ 169ರಲ್ಲಿಯೂ ಕೂಡ ಕೇಳಿದ್ದೀರಿ. ಇದರಲ್ಲಿ ಬಹಳಷ್ಟು ರೀ ಅರೇಂಜ್ ಆಗಿದೆ. ಕ್ರಿಮಿನಲ್ ಪ್ರೊಸೀಜರ್ ಕೋಡ್‌ನಲ್ಲಿಯೂ ಕೂಡ ರೀ ನಂಬರಿಂಗ್ ಆಗಿದೆ ಇದರ ಬಗ್ಗೆಯೂ ಕೂಡ ಕ್ಲಾರಿಫಿಕೇಷನ್ ಕೇಳಿದ್ದೇವೆ. ಅದರ ಬಗ್ಗೆ ಪಡೆದ ಕೂಡಲೆ ಖಂಡಿತಾ ಸರ್ಕಾರ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಕೆ.ಹೆಚ್. ರಂಗನಾಥ್ : (ಹಿರಿಯೂರು) : ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಮಂತ್ರಿಗಳು ಕೆಲವು ವಿಚಾರಗಳನ್ನು ಸ್ಪಷ್ಟಪಡಿಸಿದ್ದಾರೆ. ಒಂದು ಏನು ಹೇಳಿದ್ದಾರೆಂದರೆ 1947-48ರ ಪ್ರಿವೆನ್ಷನ್ ಆಫ್ ಕರಪ್ಷನ್ ಆಕ್ಟ್ ಜಾರಿಯಲ್ಲಿರಲಿಲ್ಲ ಆದರೂ ಕೂಡ ಸಿ ಬಿ ಐ ಆಕ್ಟ್‌ನಲ್ಲಿ ಅದು ಇತ್ತು. 1988ರಲ್ಲಿ ಅದು ಏನು ಬದಲಾವಣೆಯಾಗಿದೆ. ಅದರ ಬಗ್ಗೆ ಪತ್ರ ಬಂದಿದೆ. ಹಿಂದೆ ಇದ್ದಂತಹ ಸರ್ಕಾರ ಅದಕ್ಕೆ ಒಪ್ಪಿಗೆ ಕೊಟ್ಟಿರಲಿಲ್ಲ. 1989ರಲ್ಲಿ ರಾಜ್ಯಪಾಲರ ಕಾಲದಲ್ಲಿ ಒಪ್ಪಿಗೆ ಕೊಡಲಾಯಿತೆಂದು ಹೇಳಿದ್ದಾರೆ. ತದನಂತರ ಮತ್ತೊಂದು ಕಾಗದ ಬಂದು 1947ರ ಪ್ರಿವೆನ್ಷನ್ ಆಫ್ ಕರಪ್ಷನ್ ಆಕ್ಟ್‌ಗೆ ಒಪ್ಪಿಗೆ ಕೊಡಬೇಕೆಂದು ಪತ್ರ ಬಂದಾಗ ಸ್ವಲ್ಪ ಸಂಶಯ ಆಗಿತ್ತು ಅನ್ನುವ ಮಾತನ್ನು ಪ್ರಸ್ತಾಪ ಮಾಡಿದ್ದೀರಿ.

*1.05 ಪಿ.ಎಂ.*

1989ರಲ್ಲಿ ಗೌರ್‍ನರ್‌ರವರು ಏನು ಆರ್ಡರ್ ಕೊಟ್ಟರು, ಅದು ಇರಬೇಕಾಗಿತ್ತು. ಇಲ್ಲಿರುವ ಪ್ರಶ್ನೆಯೇನೆಂದರೆ ಮೊನ್ನೆ ಜುಲೈನಲ್ಲಿ ತಾವು ಒಂದು ಮಹತ್ವವಾದಂತಹ ತೀರ್ಮಾನ ತೆಗೆದುಕೊಳ್ಳುವಾಗ ತಾವು ಗೃಹಮಂತ್ರಿಯಾಗಿ ತಮಗಿಂತಲೂ ಹೆಚ್ಚಿನ ಜವಾಬ್ದಾರಿ ಇಡೀ ಮಂತ್ರಿಮಂಡಲದ ಮೇಲೆ ಇರುತ್ತದೆ. ಇದನ್ನು ತಾವು ಅಲ್ಲಿ ವಿಚಾರ ಮಾಡಬೇಕಾಗಿತ್ತು. ಇದು ಒಂದು ನನ್ನ ಸ್ಪಷ್ಟವಾದ ಅಭಿಪ್ರಾಯ. ಮಾನ್ಯ ರಾಣೆಯವರು ಕೂಡ ಇದನ್ನು ಹೇಳಿದ್ದಾರೆ. ಏಕೆಂದರೆ 1988ರ ಆಕ್ಟ್‌ನ ಕೆಳಗಡೆ ಬಂದಂತಹ ಅಪರಾಧಗಳು ಏನಿವೆ, ಆ ಅಪರಾಧಗಳನ್ನು ತಾವು ಜುಲೈನಲ್ಲಿ ವಿತ್‌ಡ್ರಾ ಮಾಡಿದ್ದೀರಿ. ಅಲ್ಲಿಂದ ಇಲ್ಲಿಯವರೆಗೂ ಕೂಡ ಅದು ಜಾರಿಯಲ್ಲಿ ಇಲ್ಲದೆ ಅಪರಾಧಗಳ ಬಗ್ಗೆ ತನಿಖೆಯಾಗಿದೆ. ಹಾಗೆಯೇ ಉಳಿಯತಕ್ಕಂತಹ ಒಂದು ಪರಿಸ್ಥಿತಿ ಒದಗಿಬಂದಿದೆ. ಮುಖ್ಯಕಾರ್ಯದರ್ಶಿಯವರು ಇದನ್ನು ಗಮನದಲ್ಲಿ ಇಟ್ಟುಕೊಂಡು ಮಂತ್ರಿಮಂಡಲಕ್ಕೆ ಸರಿಯಾದ ಸಲಹೆಯನ್ನು ಕೊಡಬೇಕಾಗಿತ್ತು. ನಮಗೆ ಬಂದಿರುವಂತಹ ವರ್ತಮಾನದಂತೆ ಮುಖ್ಯಕಾರ್ಯದರ್ಶಿಯವರೂ ಕೂಡ ನೇರವಾಗಿ ತಾವೇ ಅಪರಾಧಿಯಾಗಿರುವುದರಿಂದ, ಈ ಅಪರಾಧವನ್ನು ತಪ್ಪಿಸುವುದಕ್ಕೋಸ್ಕರ ಅವರು ಮಂತ್ರಿಮಂಡಲಕ್ಕೆ ಸರಿಯಾದಂತಹ ಸಲಹೆಯನ್ನು ಕೊಟ್ಟಿಲ್ಲ. ಇದು ಸರಿಯಾದುದಲ್ಲ. ಏಕೆಂದರೆ ಮಂತ್ರಿಮಂಡಲದ ಒಬ್ಬ ಮಂತ್ರಿಗಳು ಪತ್ರಿಕಾ ಹೇಳಿಕೆ ಕೊಟ್ಟಿರುವಾಗ, ಮಂತ್ರಿಮಂಡಲದಲ್ಲಿ ಇದು ಪ್ರಸ್ತಾವಕ್ಕೆ ಬರಲಿಲ್ಲವೆಂದು ಹೇಳುವಾಗ ಅದನ್ನು ನಿರಾಕರಣೆ ಮಾಡದೇ ಇರುವಾಗ ನಮಗೆ ಏನು ಸಂಶಯ ಬರುತ್ತದೆ ಎಂಬುದನ್ನು ವಿಚಾರ ಮಾಡಬೇಕು. ತಾವು ಜುಲೈ ತಿಂಗಳಲ್ಲಿ ಏನು ವಿತ್‌ಡ್ರಾ ಮಾಡಿದ್ದೀರಿ, ಆ ವಿತ್‌ಡ್ರಾ ಮಾಡಿದ್ದುದರಲ್ಲಿ 1988ರ ಕಾನೂನಿನ ಬಗ್ಗೆ ರಾಜ್ಯಪಾಲರು 1989ರಲ್ಲಿ ಕನ್‌ಸೆಂಟ್ ಕೊಟ್ಟಿದ್ದರು. ಇವತ್ತು ಅದೂ ಕೂಡ ವಿತ್‌ಡ್ರಾ ಆಗಿದೆ. ಆದುದರಿಂದ 1947, 1948ರ ಆ ಕಾನೂನು ಜಾರಿಯಲ್ಲಿದೆ ಎಂದು ತಾವು ಏನು ಹೇಳುತ್ತಿದ್ದೀರಿ ಮತ್ತು ಪತ್ರ ಬರೆದಿದ್ದೇವೆ ಅನ್ನುವ ಮಾತನ್ನು ಹೇಳಿದ್ದೀರಿ, ಅದು ಇರಬಹುದು, ಆದರೆ ಇದನ್ನು ಉಳಿಸಿಕೊಂಡು ಸಮಗ್ರವಾಗಿ ಚಿಂತನೆ, ಪೂರ್ವಭಾವಿ ಯೋಚನೆ ಮಾಡದೇ ತೆಗೆದಿದ್ದರಿಂದ ಹತ್ತಾರು ತೊಂದರೆಗಳಿವೆ. ಲೋಕಾಯುಕ್ತದಿಂದ ಅಪರಾಧವನ್ನು ತನಿಖೆ ಮಾಡಿಸಿ. ಲೋಕಾಯುಕ್ತಕ್ಕೂ ಸಿಕ್ಕದೇ ಇರುವಂತಹ ಕೆಲವು ಅಧಿಕಾರಿಗಳು, ಖದೀಮರು ಯಾರು ಇದ್ದಾರೆ ಅವರನ್ನು ಸಿ.ಬಿ.ಐ. ಮುಖಾಂತರ ತನಿಖೆ ಮಾಡಿಸಿ ಅವರನ್ನು ಶಿಕ್ಷೆಗೆ ಗುರಿಪಡಿಸಬೇಕಾಗುತ್ತದೆ. ಇಲ್ಲದಿದ್ದರೆ ಇದರಿಂದ ಸಾರ್ವಜನಿಕ ಜೀವನ ಪರಿಶುದ್ಧವಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ನಾನು ಮಾನ್ಯ ಮಂತ್ರಿಗಳಿಗೆ ಏನು ಹೇಳುತ್ತಿದ್ದೇನೆಂದರೆ ತಡವಾಗಿಯಾದರೂ, ಇಡೀ ಮಂತ್ರಿಮಂಡಲ ಇದರ

ಬಗ್ಗೆ ಸಮಗ್ರವಾಗಿ ಯೋಚನೆ ಮಾಡಿ ಒಂದೆರಡು ದಿವಸದಲ್ಲಿ ತೀರ್ಮಾನ ತೆಗೆದುಕೊಳ್ಳುವುದು ಅತ್ಯಾವಶ್ಯಕವೆಂದು ನಾನು ಮಾನ್ಯ ಮಂತ್ರಿಗಳಿಗೆ ಸಲಹೆ ಮಾಡಲು ಇಷ್ಟಪಡುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ : ಸನ್ಮಾನ್ಯ ಉಪಾಸಭಾಧ್ಯಕ್ಷಿಣಿಯವರೆ ಈ ಒಂದು ಪ್ರಸ್ತಾವನೆ ಬಗ್ಗೆ ನನ್ನ ಅನೇಕ ಸ್ನೇಹಿತರು ಚರ್ಚೆ ಮಾಡಿದ್ದಾರೆ. ಇದಕ್ಕೆ ಮಾನ್ಯ ಗೃಹಮಂತ್ರಿಗಳು ಉತ್ತರವನ್ನು ನೀಡಿದ್ದಾರೆ. ನಾನು ಎತ್ತಿದಂತಹ ಮೂಲಭೂತವಾದಂತಹ ಪ್ರಶ್ನೆಗೆ ನನಗೆ ಉತ್ತರ ಬರಲಿಲ್ಲ. ನನ್ನ ಮೂಲ ಪ್ರಶ್ನೆಯೇನೆಂದರೆ ಇವತ್ತಿನ ದಿವಸ 1948ನೇ ಇಸವಿಯ ಪ್ರಿವೆನ್ಷನ್ ಆಫ್ ಕರಪ್ಷನ್ ಆಕ್ಟ್ ಅಥವಾ 1988ರ ಪ್ರಿವೆನ್ಷನ್ ಆಪ್ ಕರಪ್ ಆಕ್ಟ ಪ್ರಕಾರ ಏನು ಅಪರಾಧಗಳಿವೆ. ಅವನ್ನು ತನಿಖೆ ಮಾಡುವಂತಹ ಪ್ರಶ್ನೆಯಲ್ಲ. ಈಗಾಗಲೇ 1988ನೇ ಇಸವಿಯ ಪ್ರಿವೆನ್ಷನ್ ಆಫ್ ಕರಪ್ಷನ್ ಆಕ್ಟ್ ಪ್ರಕಾರ 23-5-1989ರಲ್ಲಿ ರಾಜ್ಯಪಾಲರು ಏನು ಒಂದು ಸಮ್ಮತ್ರಿಯನ್ನು ನೀಡಿದ್ದರು, ಅದನ್ನು ಏತಕೋಸ್ಕರ ವಾಪಸ್ಸು ತೆಗೆದುಕೊಂಡಿದ್ದೀರಿ. ಅದಕ್ಕೆ ತಾವು ಹೇಳಿದಿರಿ, ತಮಗೆ ಅನುಮಾನ ಬಂತು ಎಂದು. ಅನುಮಾನ ಬಂದಮೇಲೆ ಅನುಮಾನವನ್ನು ಪರಿಹರಿಸಿ ಅದನ್ನು ವಾಪಸ್ಸು ತೆಗೆದುಕೊಳ್ಳಬೇಕಾಗಿತ್ತು. ಹೊಸದಾಗಿ ಕೊಡುವ ಪ್ರಶ್ನೆ ಇಲ್ಲ. 1988ನೇ ಪ್ರಿವೆನ್ಷನ್ ಆಫ್ ಕರಪ್ಷನ್ ಆಕ್ಟ್ ಪ್ರಕಾರ ಏನು ಅಪರಾಧಿಗಳಿಗೆ ಸಮ್ಮತ್ರಿಯನ್ನು ಕೊಟ್ಟಿದ್ದೀರಿ, ಆ ಸಮ್ಮತ್ರಿಯನ್ನು ಕೊಡಬೇಕಾದರೆ 1947ನೇ ಪ್ರಿವೆನ್ಷನ್ ಆಫ್ ಕರಪ್ಷನ್ ಆಕ್ಟ್ ಪ್ರಕಾರ ತನಿಖೆ ಮಾಡಿದ ಮೇಲೆ ಲೀಗಲ್ ಆಗುವುದಿಲ್ಲ. ಈ ಕಾನೂನಿನಲ್ಲಿ ಅದಕ್ಕೆ ರಕ್ಷಣೆ ಇದೆ. ಒಂದು ಕಾನೂನನ್ನು ರಿಪೀಲ್ ಮಾಡಿದರೆ ಆ ರಿಪೀಲ್ ಆದಂತಹ ಕಾನೂನಿನಲ್ಲಿ ಏನಾದರೂ ಕ್ರಮವನ್ನು ತೆಗೆದುಕೊಂಡಿದ್ದರೆ ಅದು ಕಾನೂನುಬದ್ಧ ಸಿಂಧು ಎನ್ನುವ ಮಾತನ್ನು ರಿಪೀಲ್ ಆದಂತಹ ಆಕ್ಟ್‌ನಲ್ಲಿ ಎಲ್ಲರೂ ಹೇಳುತ್ತೇವೆ. It is under the general clauses Act also. ಆದುದರಿಂದ ಈ ಒಂದು ತೇಪೆ ಹಾಕುವ ಕೆಲಸವನ್ನು ಮಾಡಿದ್ದಾರೆ, ಸರ್ಕಾರದ ಮಾನವನ್ನು ಮುಚ್ಚುವಂತಹ ಪ್ರಯತ್ನ ನಡೆದಿದೆ. ಹೊರತಾಗಿ ಇದರಲ್ಲಿ ಒಂದನ್ನು ನಾವು ಬಹಿರಂಗವಾಗಿ ಒಪ್ಪಿಕೊಳ್ಳಬೇಕಾಗುತ್ತದೆ. ಇದರ ಸತ್ಯವಾದ ಸಂಗತಿಯೇನೆಂದರೆ ಮೂಲಭೂತವಾಗಿ ಅವರಿಗೆ ಇದ್ದಂತಹ ಹೆದರಿಕೆಯೇನೆಂದರೆ ಏನಾದರೂ ಮಾಡಿ ಇದ್ದಕ್ಕಿದ್ದ ಹಾಗೇನೇ...

ಉಪಾಧ್ಯಕ್ಷರು : ತಾವು ಭಾಷಣ ಮಾಡದೆ ಸ್ಪಷ್ಟೀಕರಣವನ್ನು ಕೇಳಿ.

ಶ್ರೀ ಹೆಚ್. ಏಕಾಂತಯ್ಯ : ನಾನು ಇದಕ್ಕೆ ಉತ್ತರ ಕೊಡಬೇಕಾಗುತ್ತದೆ. ಆದ್ದರಿಂದ ಇದನ್ನೆಲ್ಲಾ ಹೇಳುತ್ತಿದ್ದೇನೆ.

ಶ್ರೀ ಧರ್ಮಸಿಂಗ್ : ನಾನು ಮಾನ್ಯ ರಂಗನಾಥ್ ಅವರು ಕೇಳಿದ್ದಕ್ಕೆ ಉತ್ತರ ಕೊಡುತ್ತೇನೆ. ನಂತರ ಇವರು ಸ್ಪಷ್ಟೀಕರಣ ಕೇಳಲಿ.

ಶ್ರೀ ಹೆಚ್. ಏಕಾಂತಯ್ಯ : ಆಗಬಹುದು.

ಶ್ರೀ ಧರ್ಮಸಿಂಗ್ : ಮಾನ್ಯ ಉಪಾಧ್ಯಕ್ಷರೇ, ಮೊಟ್ಟಮೊದಲನೆಯದಾಗಿ ಶ್ರೀಮಾನ್ ರಂಗನಾಥ್‌ರವರು ಕೂಡ ಇದು 1947, 1988 ರಿಪೀಲ್ಡ್ ಆದಮೇಲೆ ತೆಗೆದಿದ್ದೀರಿ ಮತ್ತು 23ನೇ ಮೇ 1980ಕ್ಕೆ ಕೊಟ್ಟಿದ್ದು ಕೂಡ ಏತಕ್ಕೆ ವಾಪಸ್ ಪಡೆದಿರಿ ಎನ್ನತಕ್ಕಂಥ ಮಾತನ್ನು ಮತ್ತು ಇಂಥ ಮಹತ್ವವಾದ ವಿಷಯದ ಬಗ್ಗೆ ತಾವು ನಿರ್ಣಯ ತೆಗೆದುಕೊಳ್ಳತಕ್ಕಂಥ ರೀತಿಯಲ್ಲಿ ಸಂಪುಟದ ಸಭೆಯಲ್ಲಿ ವಿಚಾರ ಮಾಡಬೇಕಾಗಿತ್ತು ಎನ್ನತಕ್ಕಂತಾದ್ದು ಪ್ರಸ್ತಾಪ ಮಾಡಿದ್ದಾರೆ. ಈ ಬಗ್ಗೆ ನಾನು

ಕ್ಲಿಯರ್ ಆಗಿ ಫೈಲ್‌ನಲ್ಲಿ ಬರೆದಿದ್ದೇನೆ. ಏಕೆಂದರೆ, ಇದು ಮೊಟ್ಟಮೊದಲನೆಯದಾಗಿ ಹೇಳಿದ್ದೇನೆ. ಓನ್ಲಿ ಡಿಸೆಂಟ್ ಪಾರ್ಟ್ ವಿತ್‌ಡ್ರಾಯಲ್ ಆಪರೇಟಿಂಗ್ ಮಾಡುವ ಸಲುವಾಗಿ ನಾವು ಸೆಂಟ್ರಲ್ ಗೌರ್ನ್‌ಮೆಂಟಿಗೆ ಪತ್ರ ಬರೆದಿದ್ದೇವೆ. ತದನಂತರವೂ ಕೂಡ ನಾವು ಕ್ಯಾಬಿನೆಟ್‌ನಲ್ಲಿಯೂ ಕೂಡ ಇಟ್ಟು ಅದು ವಿಚಾರ ಮಾಡುತ್ತಿದ್ದೇವೆ. ಕ್ಯಾಬಿನೆಟ್‌ನಲ್ಲಿ ಇಟ್ಟು ವಿಚಾರ ಮಾಡತಕ್ಕಂತಾದ್ದು ಬೇರೆ ಸಂಗತಿ. ಆದರೂ ಕೂಡ ಮಹತ್ವವಾದ ಇಂತಾದ್ದರಲ್ಲಿ ಮುಖ್ಯ ಕಾರ್ಯದರ್ಶಿಗಳ ಬಗ್ಗೆ ಅದು ಏನೂ ಇಲ್ಲ. ಏಕೆಂದರೆ, ನಾನು ಎಲ್ಲಾ ಪೂರ್ಣವಾಗಿ ಪರಿಶೀಲನೆ ಮಾಡಿದ್ದೇನೆ. ಈಗ ಪ್ರಥಮವಾಗಿ ತಾವು ಇದರ ಬಗ್ಗೆ ಏನು ಪ್ರಸ್ತಾಪ ಮಾಡಿದ್ದೀರಿ, ಆ ಬಗ್ಗೆ ಆವೊತ್ತಿನ ದಿವಸ ಕೂಡ ನಾನು ಸ್ಟೇಟ್‌ಮೆಂಟಿನಲ್ಲಿ ಹೇಳಿದ್ದೇನೆ. "Our Government is also willing to confer on the Central Government Investigating Agencies more powers and more Central Government enactments and for this purpose, the Central Government has been specifically requested to indicate the acts in respect of the offences required to be investigated by C.B.I. and other agencies."

ಇದರ ಮಧ್ಯದಲ್ಲಿ ನಾವು ನೋಟಿಫಿಕೇಷನ್ ವಿತ್‌ಡ್ರಾ ಮಾಡಿದ ಮೇಲೆ ಈಗ ಎಲ್ಲಾ ನಿಂತುಬಿಟ್ಟಿದೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ನಾನೂ ಕೂಡ ಅವರ ಜೊತೆಯಲ್ಲಿ ವೈಯಕ್ತಿಕವಾಗಿ ಮಾತನಾಡತಕ್ಕಂಥ ಕಾಲದಲ್ಲಿಯೂ ಕೂಡ ಸೆಂಟ್ರಲ್ ಗೌರ್ನ್‌ಮೆಂಟಿನಿಂದ ತನಿಖೆ ಮಾಡತಕ್ಕಂಥಾದ್ದು ನಿಂತುಹೋಗಿದೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಮೊನ್ನೆ 27ನೇ ತಾರೀಖಿನ ದಿವಸ ಆಂಧ್ರಪ್ರದೇಶ ಮತ್ತು ಕರ್ನಾಟಕದಲ್ಲಿ ಇನ್‌ವೆಸ್ಟಿಗೇಟ್ ಮಾಡತಕ್ಕಂಥ ಸಿಬಿಐನವರು ಏನಿದ್ದಾರೆ ಅವರೂ ಕೂಡ 48 ಕೇಸಸ್‌ನಲ್ಲಿ ನಮಗೆ ಪರವಾನಿಗೆ ಕೊಡಬೇಕು ಎನ್ನತಕ್ಕಂಥ ರೀತಿಯಲ್ಲಿ ಕೇಳಿದಾಗ ಆವೊತ್ತಿನ ದಿವಸ ನಾವು ಪರವಾನಿಗೆ ಕೊಟ್ಟಿದ್ದೇವೆ. ಮಧ್ಯದಲ್ಲಿ ಬರತಕ್ಕಂಥ ಸಿಬಿಐನವರು ಇಮೀಡಿಯಟ್ ಆಗಿ ಎಲ್ಲಿಯಾದರೂ ಅಧಿಕಾರಿಗಳ ಮೇಲೆ ನಾವೆಲ್ಲಾ ತಪಾಸಣೆ ಮಾಡಬೇಕಾಗಿದೆ. ಇನ್‌ವೆಸ್ಟಿಗೇಟ್ ಮಾಡಬೇಕಾಗಿದೆ ಎನ್ನತಕ್ಕಂಥ ರೀತಿಯಲ್ಲಿ ಅಡ್ಡ ಬರುತ್ತಿಲ್ಲ. ತಾವು ಮೂಲಭೂತವಾದ ಪ್ರಶ್ನೆ ಕೇಳಿದ್ದೀರಿ, ವಿತ್‌ಡ್ರಾ ಮಾಡಿದ ಮೇಲೆ. ಈಗ ಏನಾಗಿದೆ, 13-5-1989ರಲ್ಲಿ 1988ಗೆ ಏನು ಆಗ ಗೃಹ ಕಾರ್ಯದರ್ಶಿಗಳು ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆದಿದ್ದರು, ಐದು ತಿಂಗಳ ಕಾಲ ಆವಾಗ್ಗೆ ಕೊಡಲಿಲ್ಲ, ಗೌರ್ನರ್ ಪೀರಿಯಡ್‌ನಲ್ಲಿ ಕೊಟ್ಟಿದ್ದಾರೆ. ಸಬ್ಸಿಕ್ವೆಂಟ್ ಆಗಿ 7-9-1989ರಲ್ಲಿ ರಿಪೀಲ್ ಆಗಿದೆ ಎಂದು ಹೇಳಿದ್ದೇನೆ. ಮತ್ತೆ ಅವರಿಗೆ ನೋಟೀಫಿಕೇಷನ್ ಬೇಕಾದರೆ ನಾನು ಕಳುಹಿಸಿಕೊಡುತ್ತೇನೆ. ಮತ್ತೆ ಅದರಲ್ಲಿ 1947, 1988 ಇನ್‌ಕ್ಲೂಡ್ ಮಾಡಿದ್ದಾರೆ. ಅದಕ್ಕೆ ನಾವು ಏನು ಕ್ಲಾರಿಫಿಕೇಷನ್ ಕೇಳುತ್ತಿದ್ದೇವೆಂದರೆ, We have also told 1947 Act Repeal ಆಗಿದೆ. 1988ರ ಕನ್‌ಸೆಂಟ್ ಕೊಡಬೇಕು ಅಂತ ಹೇಳಿ 15-11-1988 ತಾವು ಕೇಳಿದ್ದೀರಿ, 23-5-1989ರಲ್ಲಿ Governor has already given Subsequently you have included on 7th September 1989, ಸಿಬಿಐ ನಿಂದ ಒಂದು ಲೆಟರ್ ಬಂದಿದೆ. 52 Act ಇದೆ. Prevention of Corruption Act is repealed. Again they have included 1947 and 1989 and for that we are seeking clarification.

ಮತ್ತೆ ಏನೂ ಇಲ್ಲ. ನಾವು ಎರಡು ಪತ್ರಗಳನ್ನು ಬರೆದಿದ್ದೇವೆ. ಹೋಮ್ ಸೆಕ್ರೆಟರಿಯವರಿಗೆ ಮೂರನೆಯ ಪತ್ರ ಕೂಡ ಬರೆಯಿಸಿದ್ದೇನೆ. ರಿಪ್ಲೈ ಬಂದ ಮೇಲೆ ಡೆಫನೆಟ್‌ಲಿ ಗೊತ್ತಾಗುತ್ತದೆ. ಗೌರ್ನ್‌ಮೆಂಟ್‌ನಿಂದ ಏನೂ ಮಾಡುತ್ತಿಲ್ಲ. ನಾವು ಯಾವುದೇ ಮುಚ್ಚುಮರೆ ಇಲ್ಲದೆ ಮಾಡುತ್ತಿದ್ದೇವೆ. ಇವೊತ್ತು ನಮ್ಮ ಇಂಟೆನ್‌ಷನ್ ಇಲ್ಲೇ ಇಲ್ಲ. ಇಲ್ಲಿಯವರೆಗೆ ಮಧ್ಯದಲ್ಲಿ ಕೂಡ ಸಿಬಿಐನವರು ಬಂದು ನಮಗೆ ಕೇಳಿದರೂ ಕೂಡ ಅಲ್ಲಿಯೂ ಸಹ ನಾವು ಅನುಮತಿ ಕೊಡಲಿಕ್ಕೆ ತಯಾರು ಇದ್ದೇವೆ. ಅದರ ಬಗ್ಗೆ ಏನೂ ಇಲ್ಲವೇ ಇಲ್ಲ.

ಶ್ರೀ ಹೆಚ್.ಏಕಾಂತಯ್ಯ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ಇದಕ್ಕೆ ಉತ್ತರವಾಗಿ ನಾನು ಕೆಲವೊಂದು ವಿಚಾರಗಳನ್ನು ಪ್ರಸ್ತಾಪ ಮಾಡಬೇಕಾಗಿದೆ. ಸನ್ಮಾನ್ಯ ಗೃಹಮಂತ್ರಿಗಳು ಒಂದು ಮಾತನ್ನು ಹೇಳಿದರು. Our Government is also willing ಎನ್ನುವ ಪದವನ್ನು, ಅವರು ಒಂದು ವಾಕ್ಯವನ್ನು ಪ್ರಾರಂಭ ಮಾಡಿ ಹೇಳಿದರು. ಇದು ಜಾಣ್ಮೆಯಿಂದ ನುಣುಚಿಕೊಳ್ಳುವಂಥ ಒಂದು ಪ್ರಯತ್ನ, ನಮ್ಮ ಊರಿನಲ್ಲಿ ಒಂದು ಗಾದೆಯ ಮಾತನ್ನು ಹೇಳುತ್ತಾರೆ. ಮನೆಗೆ ಹೋದರೆ ಮಜ್ಜಿಗೆ ಕೊಡದವಳು, ಕರೆದು ಹಾಲು ಕೊಡುತ್ತಾಳೆಯೇ ಅಂತ.

ಶ್ರೀ ಧರ್ಮಸಿಂಗ್ : ಅಧ್ಯಕ್ಷರೇ, ಇಲ್ಲಿ ಜಾಣ್ಮೆ ಚಾತುರತೆ ಏನೂ ಇಲ್ಲ. ಇದು ಕೌನ್ಸಿಲ್‌ನಲ್ಲಿ ಚರ್ಚೆ ಆಗಿದೆ. ಇಲ್ಲಿಯೂ ಕೂಡ ಇದರ ಮೇಲೆ ಚರ್ಚೆ ಮಾಡತಕ್ಕಂಥ ಅವಕಾಶ ಕಲ್ಪಿಸಿಕೊಟ್ಟಿದ್ದೀರಿ. ಸೆಕೆಂಡ್‌ಗೆ, ಫಿಫ್ತ್‌ಗೆ ನೋಟಿಫಿಕೇಷನ್ ಇಶ್ಯೂ ಮಾಡಿದ್ದೇವೆ. ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದೇವೆ. ಮೊನ್ನೆಯೂ ಕೂಡ ಸಿಬಿಐನವರು ಕೇಳಿದ್ದಕ್ಕೆ 48 ಕೇಸಸ್‌ಗಳಿಗೆ ಅನುಮತಿ ಕೊಟ್ಟಿದ್ದೇವೆ. ಮಂತ್ರಿಯಾಗಿ ಸದನದಲ್ಲಿ ಹೇಳಿಕೆ ಕೊಟ್ಟಿದ್ದೇವೆ. ಜಾಣ್ಮೆ ಯಾವುದೂ ಏನೂ ಇಲ್ಲ.

ಇದು ಕನ್‌ಫ್ಯೂಶನ್ ಆಗಿದೆ ನೋಟಿಫಿಕೇಷನ್‌ನ್ನು ತಾವು ನೋಡಬೇಕು. ತಮಗೆ ಬೇಕಾದರೆ ನಾನು ಒಂದು ನೋಟಿಫಿಕೇಷನ್ ಕಾಪಿಯನ್ನು ಕೊಡುತ್ತೇನೆ. 23-5-80 ಆದಮೇಲೆ Further they have included 1947 Act. ಇದಕ್ಕೆ ನಾವು ಕ್ಲಾರಿಫಿಕೇಷನ್ ಕೇಳಿದ್ದೇವೆ, ಮತ್ತು ಕ್ರಿಮಿನಲ್ ಪ್ರೊಸೀಜರ್ ಕೋಡ್‌ನಲ್ಲಿ ರಿನಂಬರಿಂಗ್ ಆಗಿದೆ. ಬಹಳಷ್ಟು ನಂಬರ್‌ಗಳು ತಪ್ಪಾಗಿವೆ. ಇದರ ಬಗ್ಗೆ ಕೂಡ ನಾವು ಕ್ಲಾರಿಫಿಕೇಷನ್ ಕೇಳಿದ್ದೇವೆ. As soon as we get clarifications, we will take action. ಇದರಲ್ಲಿ ಮುಚ್ಚುಮರೆ ಏನೂ ಇಲ್ಲ. ಜಾಣ್ಮೆಯಿಂದ ನಾವು ಏನೂ ಮಾಡುವುದಕ್ಕೆ ಹೋಗಿಲ್ಲ.

ಶ್ರೀ ಪಿ.ಎಸ್. ರಾಣೆ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ರಾಜೀವ್ ಗಾಂಧಿಯವರ ಹತ್ಯೆಯ ಹಿನ್ನೆಲೆಯಲ್ಲಿ ನಾವು ಸಿ.ಬಿ.ಐನವರಿಗೆ ಕೆಲವು ಹೆಚ್ಚಿನ ಅಧಿಕಾರವನ್ನು ಕೊಡಬೇಕೆಂಬ ದೃಷ್ಟಿಯಿಂದ ಇದನ್ನು ತಂದಿದ್ದೇವೆಂದು ಹೇಳಿದ್ದಾರೆ. ಆದರೆ ಇಲ್ಲಿ ಮೂಲಭೂತವಾಗಿ ಪ್ರಶ್ನೆ ಇರತಕ್ಕದ್ದು ಎಂದರೆ ಅಧಿಕಾರದ ವ್ಯಾಪ್ತಿಯನ್ನು ಹೆಚ್ಚು ಮಾಡಬೇಕಾದರೆ ಮೊದಲು ಇದ್ದಂಥ ಅಧಿಕಾರವನ್ನು ಮೊಟಕುಗೊಳಿಸುವ ಅವಶ್ಯಕತೆ ಇತ್ತೇ ಹೇಗೆ? ಇದರ ಬಗ್ಗೆ ತಮಗೆ ಸೂಚನೆ ಬಂದಿತ್ತೇ ಹೇಗೆ? ಮಾನ್ಯ ರಾಜ್ಯಪಾಲರ ಆಡಳಿತ ಕಾಲದಲ್ಲಿ ಸಿಬಿಐನವರಿಗೆ ಹೊರಡಿಸಿದಂಥ ಅನುಮತಿಯ ಬಗ್ಗೆ...

ಶ್ರೀ ಧರ್ಮಸಿಂಗ್ : ನಾನು ಒಂದು ಮಾತನ್ನು ಹೇಳಿ ಮುಗಿಸುತ್ತೇನೆ...

ಶ್ರೀ ಪಿ.ಎಸ್. ರಾಣೆ : ನಾನು ಕೊನೆಯದಾಗಿ ಹೇಳುವುದಿಷ್ಟೆ, ಇಲ್ಲಿ ಬಹಳ ಮಹತ್ವದ ಪ್ರಶ್ನೆ ಏನೆಂದರೆ, ಲೋಕಾಯುಕ್ತದ ಕೆಳಗೆ ಸಾರ್ವಜನಿಕ ಭ್ರಷ್ಟಾಚಾರದ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ. ಲೋಕಾಯುಕ್ತದಲ್ಲಿ ನಮಗೆ ಸಂಪೂರ್ಣವಾದ ನಂಬಿಕೆ ಇದೆ ಎಂದು ತಾವು ಹೇಳುತ್ತಿದ್ದೀರಿ. ಆದರೆ ಮಾನ್ಯ ವೀರೇಂದ್ರ ಪಾಟೀಲರ ಸರ್ಕಾರದಲ್ಲಿ ಭ್ರಷ್ಟ ಅಧಿಕಾರಿಗಳಾದ ಅಲೆಗ್ಸಾಂಡರ್ ಮತ್ತು ನಾಗರಾಜ್ ಶೆಟ್ಟಿಯವರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ಆದಂಥ ಆಜ್ಞೆ ಏನಾಯಿತು ಎಂಬುದನ್ನು ತಾವು ಹೇಳುತ್ತೀರಾ? ಅಥವಾ ಇದರಿಂದ ತಾವು ಭ್ರಷ್ಟ ಅಧಿಕಾರಿಗಳಿಗೆ ರಕ್ಷಣೆಯನ್ನು ಕೊಡುತ್ತಿದ್ದೀರಾ? ಅಥವಾ ಭ್ರಷ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಏನಾದರೂ ಕಾರ್ಯಕ್ರಮ ತೆಗೆದುಕೊಂಡಿದ್ದೀರಾ?

ಶ್ರೀ ಧರ್ಮಸಿಂಗ್ : ತಾ.23-5-89ರಲ್ಲಿ ಸಿ.ಬಿ.ಐ.ಗೆ ನಾವು ಕನ್ಸೆಂಟ್ ಕೊಟ್ಟಿರುವುದರಲ್ಲಿ 1967ರದ್ದು ಅನ್‌ಲಾಫುಲ್, 1987ರದ್ದು ಟಾಡಾ ಇರಲಿಲ್ಲಾ, ಇದು ಔಟ್ ಆಫ್ Jurisdiction ಆಗುತ್ತಿತ್ತೆಂದು ಇದರಲ್ಲಿ ನಾವು ಮಾಡಿದ್ದೇವೆ. ಆದರೆ ಇದರಲ್ಲಿ ದೊಡ್ಡದಾಗಿ ಮಾಡಿದ್ದೇವೆಂದು ನಾನು ಹೇಳುತ್ತಿಲ್ಲ. Because it was not there previously, we have given.

ಇನ್ನುಳಿದ ವಿಚಾರಗಳನ್ನು ತಾವು ಪ್ರಸ್ತಾಪ ಮಾಡಿದ್ದೀರಿ. ಅದು ಯಾರಮೇಲೆ ಛಾರ್ಜಸ್ ಇದೆ ಎಂಬುದು ಬೇರೆ ವಿಚಾರವಾಗುತ್ತದೆ.

ಉಪಾಧ್ಯಕ್ಷಿಣಿಯವರು : ಈಗ ತಾವು ಇದನ್ನು ಒತ್ತಾಯಿಸುತ್ತೀರಾ? ಅಥವಾ ವಿತ್‌ಡ್ರಾ ಮಾಡುತ್ತೀರಾ?

ಶ್ರೀ ಹೆಚ್. ಏಕಾಂತಯ್ಯ : ನನಗೆ ಉತ್ತರವನ್ನು ಕೊಡುವಂಥ ಅಧಿಕಾರ ಮತ್ತು ಹಕ್ಕು ತಮ್ಮ ನಿಯಮಾವಳಿಯ ಪ್ರಕಾರ ಇದೆ. ಆದ್ದರಿಂದ ನನಗೆ ಉತ್ತರ ಕೊಡಲು ತಾವು ಅವಕಾಶ ಮಾಡಿಕೊಡಬೇಕು.

ಉಪಾಧ್ಯಕ್ಷಿಣಿಯವರು : ದಯವಿಟ್ಟು ಹೇಳಿ ಮುಗಿಸಿ.

ಶ್ರೀ ಹೆಚ್. ಏಕಾಂತಯ್ಯ : ನನಗಿಂತ ಹೆಚ್ಚು ಕಾಲವನ್ನು ಅವರೇ ತೆಗೆದುಕೊಂಡಿದ್ದಾರೆ. ಇನ್ನೂ ನಾನು ಪ್ರಾರಂಭವನ್ನೇ ಮಾಡಿಲ್ಲ. ಇದು ಜಾಣ್ಮೆಯಿಂದ ನುಣುಚಿಕೊಳ್ಳುವ ಪ್ರಯತ್ನ ಎಂದು ನಾನು ಹೇಳಿದೆ. ಹಾಗೆ ಇಲ್ಲದಿದ್ದರೆ ಒಂದು ಮಾತನ್ನು ಹೇಳಬೇಕಾಗುತ್ತದೆ. ನಮ್ಮ ಕಡೆ ಒಂದು ಗಾದೆ ಮಾತು ಇದೆ. ಮನೆಗೆ ಹೋದರೆ ಮಜ್ಜಿಗೆಯನ್ನು ಕೊಡದವಳು ಕರೆದು ಹಾಲು ಕೊಡುತ್ತಾಳೆಯೇ ಅಂತ. ಆ ರೀತಿ ಆಗಿದೆ ನೀವು ತಾವಾಗಿಯೇ ಅಧಾಕಾರವನ್ನು ಕೊಡುತ್ತೇವೆಂದು ಹೇಳಿದ್ದೀರಿ. ಆದರೆ ಮೊದಲು ಇದ್ದಂಥ ಅಧಿಕಾರವನ್ನು ವಾಪಸು ತೆಗೆದುಕೊಂಡು ಪುನಃ ಏತಕ್ಕೆ ಕೊಡಬೇಕು? 1991ನೇ ಇಸವಿ ಜುಲೈ 25ರಲ್ಲಿ ಏನು ಆದೇಶ ಇತ್ತು ಅದರ ಪೈಕಿ ಬಹಳ ಮುಖ್ಯವಾಗಿ 4 ವಿಧೇಯಕಗಳ ಬಗ್ಗೆ ಅಪರಾಧಗಳು ಏನಿದ್ದುವು, ಅವುಗಳನ್ನು ಮಾತ್ರ ಸೇರಿಸಿಲ್ಲ, ಅವು ಯಾವುವು ಎಂದು ನಾನು ಹೇಳುತ್ತೇನೆ. ಉಳಿದುದನ್ನು ತಾವು ಕೊಟ್ಟಿದ್ದೀರಿ. ನಾವು 25 ಅಧಿಕಾರಿಗಳನ್ನು ಕೊಟ್ಟಿದ್ದೇವೆ, ಪರ್ಮಿಷನ್ ಈಸ್ ಗಿವನ್ ಎಂದು ತಾವು ಹೇಳಿರತಕ್ಕದ್ದು ಪತ್ರಿಕೆಗಳಲ್ಲಿ ಬಂತು. ಆದರೆ ಈ ಬ್ಲಾಂಕೆಟ್ ಪರ್ಮಿಷನ್‌ನ ಹಿಂದೆ ಏನಿದೆ ಎಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಈ ಬ್ಲ್ಯಾಂಕೆಟ್ ಪರ್ಮಿಷನ್‌ನ ಹೆಸರಿನಲ್ಲಿ ಮುಚ್ಚಿಡುವಂಥ ಪ್ರಯತ್ನ ಮಾಡಿದ್ದೀರಿ ಅದಕ್ಕೆ ತಮ್ಮಿಂದ ನನಗೆ ಉತ್ತರ ಬೇಕು. ನಾನು ಈಗಾಗಲೇ ಹೇಳಿದಂತೆ ಪ್ರಿವೆನ್‌ಷನ್ ಆಫ್ ಕರಪ್‌ಷನ್ ಆಕ್ಟ್ ಪ್ರಕಾರ ತಾವು ಈಗಾಗಲೇ ಕೊಟ್ಟಿರತಕ್ಕ ಅಧಿಕಾರವನ್ನು ತಾವು ಮತ್ತೆ ವಾಪಸು ತೆಗೆದುಕೊಳ್ಳತಕ್ಕ ಅವಶ್ಯಕತೆ ಇರಲಿಲ್ಲ. ಒಂದು ವೇಳೆ ಲೋಪದೋಷ ಇದ್ದರೆ ಸಂಬಂಧಪಟ್ಟವರಿಂದ ವಿವರಣೆಯನ್ನು ಪಡೆದು ತದನಂತರ ಅದನ್ನು ವಾಪಸು ಪಡೆಯಬೇಕಾಗಿತ್ತು. ಆದರೆ ಅದನ್ನು ತಾವು ಮಾಡಲಿಲ್ಲ.

ಇನ್ನು ಎರಡನೆಯದಾಗಿ ಇಂಡಿಯನ್ ಪೀನಲ್ ಕೋಡ್‌ನ ಸೆಕ್ಷನ್ 161ರ ಪ್ರಕಾರ ಏನು ಕೆಲವು ಅಪರಾಧಗಳಿವೆ, ಆ ಅಪರಾಧಗಳನ್ನು ತನಿಖೆ ಮಾಡತಕ್ಕ ಅಧಿಕಾರವನನ್ನು ಈ ಹಿಂದೆ ಸರ್ಕಾರ ಕೊಟ್ಟಿತ್ತು. ಅದನ್ನು ಪುನಃ ತಾವು ಏತಕ್ಕೆ ವಾಪಸು ತೆಗೆದುಕೊಂಡಿರಿ? ತಾವು ಹೇಳಿದಿರಿ. ಕ್ರಿಮಿನಲ್ ಪ್ರೊಸೀಜರ್ ಕೋಡ್‌ನಲ್ಲಿ ನಂಬರಿಂಗ್ ಹೆಚ್ಚೂಕಡಿಮೆ ಆಗಿದೆ ಎಂದು. ನಾನು ತಮಗೆ ಹೇಳುತ್ತೇನೆ, ಕ್ರಿಮಿನಲ್ ಪ್ರೊಸಿಜರ್ ಕೋಡಿನ ಅಪರಾಧಗಳಿಗೂ, ಇಂಡಿಯನ್ ಪೀನಲ್ ಕೋಡ್‌ನ ಅಪರಾಧಗಳಿಗೂ ಯಾವುದೇ ಸಂಬಂಧ ಇಲ್ಲ.

ಇನ್ನು ಎರಡು ಮುಖ್ಯವಾದ ವಿಧೇಯಕಗಳ ಪ್ರಕಾರ ಅಪರಾಧಗಳನ್ನು ತನಿಖೆ ಮಾಡತಕ್ಕ ಅಧಿಕಾರವನ್ನು ಈ ಹಿಂದೆ ಕೊಟ್ಟಿದ್ದಿರಿ. ಅದೇನೆಂದರೆ. ಇಂಡಸ್ಟ್ರಿಯಲ್ ರೆಗ್ಯುಲೇಷನ್ ಅಂಡ್ ಡೆವಲಪ್‌ಮೆಂಟ್ ಆಕ್ಟ್ ಪ್ರಕಾರ ಕೊಟ್ಟಿದ್ದಂಥ ಅಧಿಕಾರವನ್ನು 5-8-91ರ ನೋಟಿಫಿಕೇಷನ್‌ನಲ್ಲಿ ಸೇರಿಸಿಲ್ಲ. ಇದಕ್ಕಿಂತ ಹೆಚ್ಚಾಗಿ ಇಂಡಿಯನ್ ಇನ್‌ಕಂಟ್ಯಾಕ್ಸ್ ಆಕ್ಟ್ ಬಗ್ಗೆ ಏನು ಅಪರಾಧಗಳಿವೆ, ಅವುಗಳ ಬಗ್ಗೆ ತನಿಖೆ ಮಾಡತಕ್ಕ ಅಧಿಕಾರವನ್ನು ತಾವು ಮೊದಲು ಅವರಿಗೆ ಕೊಟ್ಟಿದ್ದಿರಿ. ಅವನ್ನೂ ಕೂಡ 5-8-91ರ ನೋಟಿಫಿಕೇಷನ್‌ನಲ್ಲಿ ಕೊಟ್ಟಿಲ್ಲ. ಈ ನಾಲ್ಕು ಮುಖ್ಯವಾದ ವಿಧೇಯಕಗಳ ಅಡಿಯಲ್ಲಿ ಬರತಕ್ಕಂಥ ಅಪರಾಧಗಳಿಗೆ ಬೇಕಾದಂಥ ಸಮ್ಮತಿ ಏನಿತ್ತು ಆ ಸಮ್ಮತಿಯನ್ನು ತಾವು ಮುಚ್ಚಿಡತಕ್ಕ ಪ್ರಯತ್ನವನ್ನು ಮಾಡಿದ್ದೀರಿ. ತಾವು ಎರಡಕ್ಕೆ ಅನುಮತಿ ಕೊಟ್ಟಿರಬಹುದು, ಅದನ್ನು ನಾನು ಬೇಡ ಎಂದು ಹೇಳುವುದಿಲ್ಲ, ಕೊಡಬೇಕಾದಂಥ ಅವಶ್ಯಕತೆ ಇತ್ತು. ಈ ಎರಡಕ್ಕೆ ತಾವು ಅಧಿಕಾರವನ್ನು ಕೊಟ್ಟಿದ್ದರೆ Now with good faith ತಮ್ಮ ಸದುದ್ದೇಶವನ್ನು ನಾನು ಒಪ್ಪುತ್ತಿದ್ದೆ. you have proved your malafides.

ನಿಮ್ಮ ಮೂಲ ದುರುದ್ದೇಶ ಏನಿತ್ತು ಎಂದರೆ ಈಗಿರತಕ್ಕ ಮುಖ್ಯವಾದ ಪ್ರಕರಣಗಳ ಬಗ್ಗೆ ಸಂಬಂಧಪಟ್ಟ ಸಾರ್ವಜನಿಕ ವ್ಯಕ್ತಿಗಳು ಯಾರಿದ್ದಾರೆ ಅವರಮೇಲೆ ಏನು ಆರೋಪ ಇದೆ, ಅಂದರೆ ಅವರು ಅಧಿಕಾರಿಗಳಾಗಿರಬಹುದು, ಅಧಿಕಾರೇತರರಾಗಿರಬಹುದು, ತಮ್ಮ ಪಕ್ಷದವರಾಗಿರಬಹುದು ಅಥವಾ ಬೇರೆ ಪಕ್ಷದವರಾಗಿರಬಹುದು ಅಥವಾ ಸಾರ್ವಜನಿಕರಾಗಿರಬಹುದು ಇದರ ಬಗ್ಗೆ ಆರೋಪವನ್ನು ಮಾಡಿಸಿದಾಗ ಅದರ ಬಗ್ಗೆ ತನಿಖೆ ಮಾಡುವಂಥ ಅಧಿಕಾರವನ್ನು ಮೊಟಕುಗೊಳಿಸುವ ಉದ್ದೇಶದಿಂದ ಮಾಡಿದ್ದೀರೆಂಬುದು ಈಗಾಗಲೇ ತಮಗೆ ಗೊತ್ತಾಗಿದೆ. ಏಕೆಂದರೆ ಅನೇಕ ಸಂದರ್ಭಗಳಲ್ಲಿ ಏನು ನಾನು ಆರೋಪ ಮಾಡಿದ್ದೇನೆ, ಅದರ ಬಗ್ಗೆ ತಾವು ತನಿಖೆ ಮಾಡಿದ್ದೀರಾ? ಇಲ್ಲ ನೀವು ಮಾಡುವುದಿಲ್ಲ.

ತಮಗೆ ಬೇಕಾದಂತ ರೀತಿಯಲ್ಲಿ ಹೇಳುತ್ತೀರಿ. ತಮಗೆ ಗೊತ್ತಾಗಿದೆ, ಅನೇಕ ಸಂದರ್ಭಗಳಲ್ಲಿ ನಾನು ಆರೋಪ ಮಾಡಿದ್ದೇವೆ. ಅದರ ಬಗ್ಗೆ ತನಿಖೆ

ಮಾಡಿದ್ದೀರಾ? ಮಾಡಿಲ್ಲ. ಯಾರು ಕಾನೂನುಬಾಹಿರವಾದಂಥ ಆದೇಶಗಳನ್ನು ಹೊರಡಿಸಿದ್ದಾರೆಂದು ಇಲ್ಲಿ ಪ್ರಸ್ತಾಪ ಮಾಡಿದ್ದೇವೆ? ಅದರ ಬಗ್ಗೆ ಸೌಜನ್ಯಕ್ಕಾದರೂ ಉತ್ತರವನ್ನು ಕೊಡತಕ್ಕಂಥ ಪ್ರಯತ್ನ ಸರ್ಕಾರದವರು ಮಾಡಲಿಲ್ಲವೆಂದರೆ ಅದರ ಅರ್ಥ ಏನು? ಯಾರು ಯಾರು ಭ್ರಷ್ಟ ಅಧಿಕಾರಿಗಳಿದ್ದಾರೆ, ಎಲ್ಲೆಲ್ಲಿ ಭ್ರಷ್ಟತೆ ಇದೆ ಎಲ್ಲೆಲ್ಲಿ ಹಗರಣಗಳು ಇದಾವೆ, ಆ ಹಗರಣಗಳ ಬಗ್ಗೆ ತನಿಖೆ ಮಾಡುವಂಥ ಸೌಜನ್ಯವನ್ನು ನೀವು ತೋರಲಿಲ್ಲ. ಸರಿಯೋ ತಪ್ಪೋ ಆಮೇಲೆ ನೋಡ್ಕೋಣ. ಏತಕ್ಕೆಂದರೆ ನಾನು ಹೇಳಿದ್ದೆ ಸರಿ ಎಂದು ಹೇಳುವ ಮನೋಭಾವನೆ ನನಗಿಲ್ಲ. ಆದರೆ ಒಂಹದು ಪಕ್ಷ ನಮ್ಮಂಥ ಸದಸ್ಯರು ಆರೋಪ ಮಾಡಿದಾಗ ಅದರ ಬಗ್ಗೆ ತನಿಖೆ ಮಾಡುವಂಥ ಸೌಜನ್ಯ ಇಲ್ಲದಿರುವಾಗ ಏನು ಪ್ರಯೋಜನ. ಅದನ್ನು ಪ್ರಯತ್ನ ಮಾಡದಿರುವಾಗ ಮತ್ತು ಯಾವ ಸಿ.ಬಿ.ಐ. ಮತ್ತು ಲೋಕಾಯುಕ್ತ ಅಧಿಕಾರಿಗಳ ಬಗ್ಗೆ ಕಟುವಾದ ಟೀಕೆ ಮಾಡಿದೆ, ಅಂಥವರ ಬಗ್ಗೆ ತಾವು ನಿರಾಕರಣೆ ಮಾಡಲಿಲ್ಲ. ನಾನು ಕೇಳುತ್ತೇನೆ, ಇವತ್ತು ಸಿ.ಬಿ.ಐ ತನಿಖೆಗೆ ಒಳಪಟ್ಟಂಥ ಅಧಿಕಾರಿಗಳು ಎಷ್ಟು ಜನ ಇದ್ದಾರೆ, ಆ ಅಧಿಕಾರಿಗಳ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ? ಲೋಕಾಯುಕ್ತದವರು ಕೇವಲ 25 ರೂಪಾಯಿ ತೆಗೆದುಕೊಂಡಂಥ ಸ್ಯಾನಿಟರಿ ಇನ್ಸ್‌ಪೆಕ್ಟರ್‌ನ್ನು ಹಿಡಿದಾಗ ಅವರನ್ನು ನೀವು ಸಸ್‌ಪೆಂಡ್ ಮಾಡುತ್ತೀರಿ, ಡಿಸ್‌ಮಿಸ್ ಮಾಡುತ್ತೀರಿ. ಆದರೆ ದೊಡ್ಡ ದೊಡ್ಡ ಅಧಿಕಾರಿಗಳ ಮೇಲೆ ಭ್ರಷ್ಟಾಚಾರದ ಆರೋಪ ಬಂದಾಗ ಅವರನ್ನು ತನಿಖೆ ಮಾಡುವಂಥ ಹೊಣೆಗಾರಿಕೆ ನಿಮ್ಮಲ್ಲಿ ಇಲ್ಲ. ಏತಕ್ಕೋಸ್ಕರ ಇಲ್ಲವೆಂದರೆ ನೀವು ಪರೋಕ್ಷವಾಗಿ ಸಹಾಯ ಮಾಡುತ್ತಿರುವುದರಿಂದ ಮತ್ತು ನೀವು ಸಹಾಯಮಾಡುತ್ತಿರುವುದರಿಂದ ಅವರನ್ನು ತನಿಖೆಗೆ ಗುರಿಪಡಿಸುತ್ತಿಲ್ಲ.

ಉಪಾಧ್ಯಕ್ಷಿಣಿಯವರು : ತಾವು ಈಗ ಹೇಳಿದ್ದಾಯಿತು. ಪದೇ ಪದೇ ಅದನ್ನೇ ಹೇಳುತ್ತಿದ್ದೀರಲ್ಲ.

ಶ್ರೀ ಹೆಚ್. ಏಕಾಂತಯ್ಯ : ಸನ್ಮಾನ್ಯ ಅಧ್ಯಕ್ಷಿಣಿಯವರೇ ಸರ್ಕಾರದ ಮುಂದೆ ಅನೇಕ ಆರೋಪಗಳನ್ನು ಹೇಳಿದಾಗ ನೇರವಾಗಿ ಉತ್ತರವನ್ನು ಕೊಡತಕ್ಕಂಥ ಸೌಜನ್ಯ ಅವರಿಗೆ ಇಲ್ಲ. ಮತ್ತೆ ಏನು ಮಾಡಬೇಕು? ಒಂದು ವಿಚಾರದ ಬಗ್ಗೆ ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡಲಿಕ್ಕೆ ಇಚ್ಛೆಪಡುತ್ತೇನೆ. ಯಾವ ಸಂದರ್ಭದಲ್ಲಿ ನಾವು ನೇರವಾದಂಥ ಆರೋಪವನ್ನು ಮಾಡುತ್ತೇವೆ, ಅದನ್ನು ನಿರಾಕರಣೆ ಮಾಡದಿದ್ದರೆ ಅಥವಾ ಎಲ್ಲೆಲ್ಲಿ ಇಂಥ ಆರೋಪಗಳನ್ನು ನಾವು ಮಾಡಿದಾಗ ಯಾವುದೇ ಕ್ರಮ ತೆಗೆದುಕೊಳ್ಳದಿದ್ದರೆ ಈ ದೇಶದ ಜನ ಈ ವ್ಯವಸ್ಥೆಯಲ್ಲಿ ನಂಬಿಕೆಯನ್ನು ಕಳೆದುಕೊಳ್ಳಬೇಕಾಗುತ್ತದೆ. ಅಷ್ಟೇ ಅಲ್ಲ, ಇವತ್ತಿನ ದಿವಸ ನಾವು ರಾಡಿಕಲ್ಸ್ ಎಂದು ಏನು ಮಾತನಾಡುತ್ತೇವೆ, ಅಥವಾ ಪೀಫಲ್ಸ್ ವಾರ್ ಎಂದು ಏನು ಮಾತನಾಡುತ್ತೇವೆ. ಇಂಥ ಒಂದು ರಾಡಿಕಲ್ಸ್ ಪೀಪಲ್ಸ್ ವಾರ್ ಗ್ರೂಪ್ಗೆ ತಾವಾಗಿಯೇ ಭಯೋತ್ಪಾದಕತೆಯನ್ನು ಹೆಚ್ಚು ಮಾಡಲಿಕ್ಕೆ ಸಹಾಯ ಮಾಡುವಂಥ ರೀತಿಯಲ್ಲಿ ಸರ್ಕಾರ ಕೆಲಸ ಮಾಡಿದರೆ ಹೇಗೆ? ಮೊದಲು ಈ ದೇಶದಲ್ಲಿ ರಾಜಕಾರಣಿಗಳು ಮತ್ತು ಅಧಿಕಾರಿಗಳು ಗುರಿ ಆಗಬೇಕಾಗಿತ್ತು? ಇಂತಹ ಒಂದು ಕೆಟ್ಟ ಪ್ರವೃತ್ತಿಗೆ ಪ್ರೋತ್ಸಾಹ ಮಾಡುವಂಥ ರೀತಿಯಲ್ಲಿ ಈ ಸರ್ಕಾರ ಮಾಡುತ್ತಿದೆ. ಇದನ್ನು ತಡೆ ಹಿಡಿಯಬೇಕು. ಆರೀತಿಯಾಗಬೇಕಾದರೆ ನಾನು ಒಂದು ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ಈ ದೇಶದಲ್ಲಿ ಭ್ರಷ್ಟಾಚಾರ ನಿಲ್ಲಬೇಕೆಂದು ಮಾತನಾಡುವಾಗ ಗುತ್ತಿಗೆ ಕೇವಲ ಇಲ್ಲಿಯವರಿಗೆ ಮಾತ್ರವಲ್ಲ. ಈ ದೇಶದ ಎಲ್ಲಾ ಪಕ್ಷದಲ್ಲೂ ಸಹ ಪ್ರಾಮಾಣಿಕವಾದಂಥ ಮೆಚ್ಚುವಂಥ ಜನರು ಇದ್ದಾರೆ. ಪ್ರಾಮಾಣಿಕತನದ

ಆಡಳಿತವನ್ನು ಕೊಡಬೇಕೆನ್ನುವ ಜನರು ಇದ್ದಾರೆ. ದಕ್ಷತೆ ಎನ್ನುವ ಬಗ್ಗೆ ಮಾತನಾಡಬೇಕಾದಲೆ ಅದು ನನಗೊಬ್ಬನಿಗೆ ಗುತ್ತಿಗೆಯಲ್ಲ, ಭ್ರಷ್ಟಾಚಾರದ ಬಗ್ಗೆ ಮಾತನಾಡಲಿಕ್ಕೆ ನನಗೆ ಒಬ್ಬನಿಗೆ ಗುತ್ತಿಗೆಯಲ್ಲ. ದೇಶದ ಜನಸಾಮಾನ್ಯರ ಹಿತವನ್ನು ಕಾಪಾಡಲಿಕ್ಕೆ ಎಲ್ಲಾ ಪಕ್ಷದ ಸದಸ್ಯರಿಗೂ ಅಧಿಕಾರವಿದೆ. ಸನ್ಮಾನ್ಯ ಅಧ್ಯಕ್ಷಿಣಿಯವರೇ. ಇವತ್ತಿನದಿವಸ ನಾನು ತಮ್ಮಲ್ಲಿ ಕೇಳುತ್ತಿರುವುದು ಇಷ್ಟೆ. ಇವತ್ತು ಅವರಿಗೆ ಅಧಿಕಾರ ಕೊಡಲಿಕ್ಕೆ ತಯಾರಾಗಿದ್ದೇವೆಂದು ಹೇಳಬಹುದು. ನಿಜವಾಗಿಯೂ ನಿಮಗೆ ಈ ಭ್ರಷ್ಟಾಚಾರವನ್ನು ಕಡಿಮೆ ಮಾಡುವಂಥ ಉದ್ದೇಶವಿದ್ದರೆ ನಿಮಗೇನಾದರೂ ಕೇಂದ್ರ ಸರ್ಕಾರದ ಸಿ.ಬಿ.ಐ.ನಲ್ಲಿ ನಂಬಿಕೆ ಇದ್ದರೆ ಅವರಿಂದ ತನಿಖೆಯನ್ನು ಮಾಡಿಸಿ. ನಿಮಗೆ ನಂಬಿಕೆ ಇಲ್ಲವೆಂದು ಹೇಳಿದರೆ ನಿಮಗೆ ನಾವು ಏನೂ ಆರೋಪ ಮಾಡುವುದಿಲ್ಲ. ನಮ್ಮ ಸರ್ಕಾರ ಇದ್ದಾಗಲೂ ಸಹ ಮಾನ್ಯ ದೇವರಾಜಅರಸ್ ಸರ್ಕಾರ ಇದ್ದಾಗಲೂ ಸಹ ಕೇಂದ್ರದಲ್ಲಿ ಬೇರೆ ಸರ್ಕಾರ ಇದ್ದುದರಿಂದ ರಾಜಕೀಯವಾಗಿ ದುರುಪಯೋಗಪಡಿಸಿಕೊಳ್ಳಬಹುದು ಎನ್ನುವ ಸಂಶಯದಿಂದ ಆ ಒಂದು ಅಧಿಕಾರವನ್ನು ವಾಪಸ್ ತೆಗೆದುಕೊಂಡದ್ದು ಉಂಟು. ಇವತ್ತು ಸಹ ಆ ಮಾತನ್ನು ಹೇಳುವುದಾದರೆ ನನ್ನದೇನೂ ಆಕ್ಷೇಪವಿಲ್ಲ ಎನ್ನುವ ಮಾತನ್ನು ಮತ್ತೊಂದು ಸಾರಿ ಹೇಳುತ್ತೇನೆ. ನಿಜವಾಗಿಯೂ ಸಹ ನಿಮಗೆ ನಾನು ಹೇಳಿದಂಥ ರೀತಿಯಲ್ಲಿ ಇವತ್ತಿನ ದಿವಸ ತಮಗೆ ಏನಾದರೂ ಸಹ ಈ ಆಡಳಿತದಲ್ಲಿ ಭ್ರಷ್ಟತೆಯನ್ನು ಕಡಿಮೆ ಮಾಡಬೇಕು, ಭ್ರಷ್ಟ ಅಧಿಕಾರಿಗಳ ಬಗ್ಗೆ ಮತ್ತು ಸಾರ್ವಜನಿಕ ವ್ಯಕ್ತಿಗಳ ಬಗ್ಗೆ ವಿಚಾರಣೆ ಮಾಡುವ ಅಧಿಕಾರ ಸಿ.ಬಿ.ಐ.ಗೆ ಕೊಡಬೇಕೆನ್ನುವುದರಲ್ಲಿ ನಂಬಿಕೆ ಇದ್ದರೆ ಈ ಒಂದು ಪ್ರಸ್ತಾವಕ್ಕೆ ತಾವು ಬೆಂಬಲವನ್ನು ಕೊಡಬೇಕಾಗುತ್ತದೆನ್ನುವ ಮಾತನ್ನು ಹೇಳಿ ನನ್ನ ಮಾತನ್ನು ಪೂರೈಸುತ್ತೇನೆ.

ಶ್ರೀ ಧರ್ಮಸಿಂಗ್ : ಮಾನ್ಯ ಉಪಾಧ್ಯಕ್ಷಿಣಿಯವರೇ, ಈಗಾಗಲೇ ನಾನು ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿದ್ದಾರೆ, ಅದರ ಬಗ್ಗೆ ಉತ್ತರ ಕೊಟ್ಟಿದ್ದೇನೆ. ಈಗ ಅವರು ಹೇಳಿದ ವಿಚಾರದಬಗ್ಗೆ ನಾವು ಕೇಂದ್ರ ಸರ್ಕಾರಕ್ಕೂ ಕೂಡ ಪತ್ರ ಬರೆದಿದ್ದೇವೆ. ಅಲ್ಲಿಂದ ಪತ್ರ ಬಂದಮೇಲೆ ಅದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆಂದು ಸ್ಪಷ್ಟವಾಗಿ ನಾನು ಮೊದಲೇ ಹೇಳಿದ್ದೇನೆ, ಈಗಲೂ ಕೂಡ ಅದನ್ನೇ ಹೇಳುತ್ತಿದ್ದೇನೆ. ಅದರಲ್ಲೇನು ಮುಚ್ಚುಮರೆ ಮಾಡುತ್ತಿಲ್ಲ. ಬೇರೆ ಅಧಿಕಾರಿಗಳ ಮೇಲೆ ಆರೋಪ ಮಾಡತಕ್ಕಂಥ ಸಂದರ್ಭ ಇದಲ್ಲ ಎನ್ನತಕ್ಕಂಥ ಮಾತನ್ನು ನಾನು ಮೊದಲೇ ಹೇಳಿದ್ದೇನೆ. ಆದರೂ ಅದನ್ನು ಬೇರೆ ತರಹದಲ್ಲಿ ಪ್ರಸ್ತಾಪಮಾಡಿದ್ದಾರೆ. ಮತ್ತು ಈ ಸದನದಲ್ಲಿರತಕ್ಕಂಥ ಬೇರೆ ಬೇರೆ ಸದಸ್ಯರೂ ಕೂಡಿ ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಸಾಕಷ್ಟು ಸಂಬಂಧಪಟ್ಟ ಮಂತ್ರಿಗಳಿಂದ ಮುಖ್ಯಮಂತ್ರಿಯವರಿಂದಲೂ ಕೂಡ ಉತ್ತರ ಬಂದಿದೆ. ಇವತ್ತು ಸ್ಪಷ್ಟವಾಗಿ ನಾನು ಇಷ್ಟು ಹೇಳುತ್ತಿದ್ದೇನೆ. ಯಾರಿಗೆ ಆಗಲಿ ಭ್ರಷ್ಟ ಅಧಿಕಾರಿಗಳಿಗೆ ರಕ್ಷಣೆ ಕೊಡತಕ್ಕಂಥದ್ದಕ್ಕೆ ಸರ್ಕಾರ ಈ ಒಂದು ಹೆಜ್ಜೆಯನ್ನು ತೆಗೆದುಕೊಂಡಿಲ್ಲ.

ಈಗಿನ ಕಾನೂನಿನಲ್ಲಿ ನಮಗೆ ಸ್ವಲ್ಪ ಕನ್‌ಫ್ಯೂಷನ್ ಆಗುತ್ತಿದೆ. ಅದಕ್ಕೋಸ್ಕರ ಕ್ಲಾರಿಫಿಕೇಷನ್ ಸಲುವಾಗಿ ಕೇಂದ್ರ ಸರ್ಕಾರಕ್ಕೆ ನಾವು ಬರೆದಿದ್ದೇವೆ. ಅಲ್ಲಿಂದ ಉತ್ತರ ಬಂದಮೇಲೆ ಮುಂದಿನ ಕ್ರಮ ಕೈಗೊಳ್ಳುವುದಕ್ಕೆ ಇಷ್ಟಪಡುತ್ತೇವೆಂದು ಹೇಳಿ, ಮಾನ್ಯ ಸದಸ್ಯರಾದ ಶ್ರೀ ಏಕಾಂತಯ್ಯನವರು ಏನು ನಿಯಮ 159ರ

ಮೇರೆಗೆ ಪ್ರಸ್ತಾವವನ್ನು ತಂದಿದ್ದಾರೆ ಅದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷಿಣಿಯವರು : ಮಾನ್ಯ ಸದಸ್ಯರು ಪ್ರಸ್ತಾವವನ್ನು ಮಂಡಿಸಬೇಕು.

ಶ್ರೀ ಹೆಚ್. ಏಕಾಂತಯ್ಯ : ಪ್ರಸ್ತಾವ ಏನೆಂದರೆ,

'ದೆಹಲಿ ವಿಶೇಷ ಪೊಲೀಸ್ ಸಿಬ್ಬಂದಿ ಕಾಯಿದೆಯ 6ನೇ ವಿಧಿಯ ಅನ್ವಯದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಭ್ರಷ್ಟಾಚಾರ ನಿರೋಧ ಕಾಯಿದೆ ವ್ಯಾಪ್ತಿಯಲ್ಲಿ ಬರುವ ಅಪರಾಧಗಳನ್ನು ತನಿಖೆ ಮಾಡಲು ಈ ಹಿಂದೆ ರಾಜ್ಯ ಸರ್ಕಾರವು ನೀಡಿದ್ದ ಸಮ್ಮತಿಯನ್ನು ತಾರೀಖು 27-7-91ರಂದು ಹಿಂತೆಗೆದುಕೊಂಡಿರುವುದನ್ನು ಈ ಸದನವು ಅಸಮ್ಮತಿಸುತ್ತದೆ. ಮತ್ತು ಸದರಿ ಅಪರಾಧಗಳಿಗೆ ಸಂಬಂಧಪಟ್ಟಂತೆ ತನಿಖೆ ಮಾಡಲು ಅವಶ್ಯವಾದ ಸಮ್ಮತಿ ನೀಡುವಂತೆ ರಾಜ್ಯ ಸರ್ಕಾರವನ್ನು ಈ ಸದನವು ಒತ್ತಾಯಿಸುತ್ತದೆ.

ಉಪಾಧ್ಯಕ್ಷಿಣಿಯವರು : ಪ್ರಸ್ತಾವವನ್ನು ಮಂಡಿಸಲಾಯಿತು. ಈಗ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವನೆ ಹೀಗಿದೆ:

"ದೆಹಲಿ ವಿಶೇಷ ಪೊಲೀಸ್ ಸಿಬ್ಬಂದಿ ಕಾಯಿದೆಯ 6ನೇ ವಿಧಿಯ ಅನ್ವಯದತ್ತವಾಗಿರುವ ಅಧಿಕಾರವನ್ನು ಚಲಾಯಾಸಿ ಭ್ರಷ್ಟಾಚಾರ ನಿರೋಧ ಕಾಯಿದೆ ವ್ಯಾಪ್ತಿಯಲ್ಲಿ ಬರುವ ಅಪರಾಧಗಳನ್ನು ತನಿಖೆ ಮಾಡಲು ಈ ಹಿಂದೆ ರಾಜ್ಯಸರ್ಕಾರವು ನೀಡಿದ್ದ ಸಮ್ಮತಿಯನ್ನು ತಾರಿಖು 27-7-1991ರಂದು ಹಿಂತೆಗೆದುಕೊಂಡಿರುವುದನ್ನು ಈ ಸನದವು ಅಸಮ್ಮತಿಸುತ್ತದೆ. ಮತ್ತು ಸದರಿ ಅಪರಾಧಗಳಿಗೆ ಸಂಬಂಧಪಟ್ಟಂತೆ ತನಿಖೆ ಮಾಡಲು ಅವಶ್ಯವಾದ ಸಮ್ಮತಿ ನೀಡುವಂತೆ ರಾಜ್ಯ ಸರ್ಕಾರವನ್ನು ಈ ಸದನವು ಒತ್ತಾಯಿಸುತ್ತದೆ.

*ಪ್ರಸ್ತಾವ ಬಿದ್ದುಹೋಯಿತು - ಪ್ರಸ್ತಾವವನ್ನು ತಿರಸ್ಕರಿಸಲಾಯಿತು.*

ಉಪಾಧ್ಯಕ್ಷಿಣಿಯವರು : ಶ್ರೀ ರಂಗನಾಥ್ ಅವರ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲಿನ ಅಲ್ಪಕಾಲಾವಧಿ ಚರ್ಚೆಯನ್ನು ಕೊನೆಗೆ ತೆಗೆದುಕೊಳ್ಳೋಣ. ಮೊದಲು ಬಿಲ್‌ಗಳನ್ನು ತೆಗೆದುಕೊಳ್ಳೋಣ, ಏಕೆಂದರೆ ಅಪ್ಪರ್ ಹೌಸ್‌ನಲ್ಲಿ ಈ ಬಿಲ್ಲುಗಳು ಪಾಸ್ ಆಗಬೇಕಾಗಿದೆ. ಈಗ 3 ಬಿಲ್ಲುಗಳು ಇವೆ. ಇವನ್ನು ಮುಗಿಸಿದ ತಕ್ಷಣ ಅಲ್ಪಕಾಲ ಚರ್ಚೆಯನ್ನು ತೆಗೆದುಕೊಳ್ಳೋಣ. ಈಗ ವಿಧೇಯಕಗಳನ್ನು ಪರ್ಯಾಲೋಚಿಸುವುದು ಮತ್ತು ಅಂಗೀಕರಿಸುವುದು.

## ಶಾಸನರಚನಾ ಕಾರ್ಯಕಲಾಪಗಳು

### ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ವಿಧೇಯಕ 1991

### ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಸ್.ಆರ್. ಮೋರೆ (ಸಹಕಾರ ರಾಜ್ಯ ಸಚಿವರು) : ಮಾನ್ಯ ಉಪಾಧ್ಯಕ್ಷಿಣಿಯವರೆ,

1991ನೇ ಸಾಲಿನ ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು.**